ಕರ್ನಾಟಕ ಸರ್ಕಾರ

# ಸಂಸ್ಕೃತಿ ಸಂಪತ್ತ್

## ಅರೆಭಾಷೆ ಸಂಸ್ಕೃತಿ ಪರಿಚಯ



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ - 571 201

# ಸಂಸ್ಕೃತಿ ಸಂಪತ್ತ್

[ಅರೆಭಾಷೆ ಸಂಸ್ಕೃತಿ ಪರಿಚಯ]

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ – 571 201

**'HOSA BODKU'** a collection of stories in Arebhase language written by Udayakumari, Balambi Post, Chembu village, Madikeri Taluk, Kodagu District, Published by 'Karnataka Arebhase Samskrithi Mathu Sahitya Academy.

ಪ್ರಕಟಣೆ : **2016**

ಪ್ರತಿಗಳು : **500**

ಬೆಲೆ : ರೂ. 50/- Price : Rs. 50/-

ಪುಟಗಳು : 52

® ಎಲ್ಲಾ ಹಕ್ಕನ್ನು ಕಾಯ್ದಿರಿಸಲಾಗಿದೆ. All Rights Reserved.

ಸಲಹ ಸಮಿತಿ :

ಶ್ರೀ ಕೊಲ್ಯದ ಗಿರೀಶ್, ಅಧ್ಯಕ್ಷರು
ಶ್ರೀ ಡಾ. ಪೂವಪ್ಪ ಕಣಿಯೂರು,
ಶ್ರೀ ಡಾ. ಕೋರನ ಸರಸ್ವತಿ ಪ್ರಕಾಶ್,
ಶ್ರೀ ಮೋಹನ್ ಸೋನ,
ಶ್ರೀ ಸಂಗೀತ ರವಿರಾಜ್,
ಶ್ರೀ ಮಂದ್ರೀರ ಜಿ. ಮೋಹನ್‌ದಾಸ್,
ಶ್ರೀ ಯಶವಂತ ಕುಡೆಕಲ್ಲು,
ಶ್ರೀ ಕುಡೆಕಲ್ಲು ಸಂತೋಷ್,
ಶ್ರೀ ಪಿ. ಎಸ್. ಕಾರ್ಯಪ್ಪ,
ಶ್ರೀ ಅಣ್ಣಾಜಿ ಗೌಡ ಪೈಲೂರು
ಶ್ರೀ ಬಿ.ಸಿ. ವಸಂತ
ಶ್ರೀ ಸದಾನಂದ ಮಾವಜಿ

ಪ್ರಕಾಶಕರು : ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

**ಪುಸ್ತಕ ದೊರೆಯುವ ಸ್ಥಳ :**
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ. ದೂ. : 08272-223055

ಮುದ್ರಣ :
ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್, ಮಡಿಕೇರಿ, ಕೊಡಗು
Ph : 08272-224919, 9448135592

# ಅಧ್ಯಕ್ಷರ ಮಾತ್

ಅರೆಭಾಷೆ ಅಕಾಡೆಮಿ ಶುರು ಮಾಡ್ದ ಉದ್ದೇಶ ಬಾಸೆ, ಸಂಸ್ಕೃತಿ, ಸಾಹಿತ್ಯ ಮತ್ತೆ ಜನಪದನ ಉಳ್ಸಿ ಬೆಳ್ಸುದು, ಈ ನಿಟ್ಟ್‌ಲಿ ಅಕಾಡೆಮಿ ವತಿಂದ ಸಂಸ್ಕೃತಿ ಮತ್ತೆ ಹಬ್ಬ ಹರಿದಿನಗಳ ಬಗ್ಗೆ ಮಾಹಿತಿ ಕೊಡಿಕೆ ಮೈಸೂರು ಗೌಡ ಸಮಾಜಲಿ ಸಂಸ್ಕೃತಿ ಪರಿಪಾಲಕರ ಸಮಾಗಮ ಕಾರ್ಯಕ್ರಮ ನಡ್ಸಿದೊ.

**ಅಪಾರ ಜನಮನ್ನಣೆ ಗಳ್ಸಿದ ಈ ಕಾರ್ಯಕ್ರಮಲಿ "ಅರೆಭಾಷಿಕರ ಹುಟ್ಟು ಮತ್ತೆ ಆಚರಣೆ"** ಬಗ್ಗೆ ಶ್ರೀ ಬಾರಿಯಂಡ ಜೋಯಪ್ಪನವು **"ಪ್ರೌಢಾವಸ್ಥೆ, ಮದುವೆ ಆಚರಣೆ"** ಬಗ್ಗೆ ಡಾ॥ ಕೋರನ ಸರಸ್ವತಿಯವು **"ಸಾವು ಮತ್ತೆ ವಿಧಿ ವಿಧಾನಗಳ ಆಚರಣೆ"** ಬಗ್ಗೆ ಶ್ರೀ ಪಟ್ಟಡ ಶಿವಕುಮಾರ್‌ನವು **"ಹಬ್ಬ ಹರಿದಿನ ಮತ್ತು ಆಚರಣೆ"** ಬಗ್ಗೆ ಡಾ॥ ಚೆರಿಯಮನೆ ರಾಮಚಂದ್ರನವು ವಿಚಾರಮಂಡನೆ ಮಾಡ್ದೊ.

ಕಾರ್ಯಕ್ರಮಕ್ಕೆ ಪೂರಕ ಆಗಿ ಸುಮಾರ್ 60 ಜನ ನಮ್ಮ ಸಂಸ್ಕೃತಿ ಪರಿಪಾಲಕರ್ ತೇಲ್ರೆ **ದಿಬ್ಬಣ ಮುಖ್ಯಸ್ಥರ ಸಂವಾದ** ನಡ್ಸಿದೊ. ಕೊಡಗು ದಕ್ಷಿಣ ಕನ್ನಡಂದ ಕೆಲ್ಸಕೆ ಮತ್ತೆ ಜೀವನ ಸಾಗ್ಸಿಕೆ ಹೊರಗಡೆ ಹೋದ ಅರೆಬಾಸಿಕ ಜನಾಂಗಕ್ಕೆ ಸಂಸ್ಕೃತಿ ನೆನ್ಪ್‌ಸಿಕೆ ಈ ಪುಸ್ತಕ ಅಕಾಡೆಮಿ ವತಿಂದ ಪ್ರಕಟಣೆ ಮಾಡ್ತಾವೊಳೊ.

ಕಾರ್ಯಕ್ರಮಗಳ ಸಹಯೋಗ ಮಾಡ್ದ ಮೈಸೂರು ಗೌಡ ಸಮಾಜದ ಅಧ್ಯಕ್ಷರ್ ಮತ್ತೆ ಕಾರ್ಯಕಾರಿ ಸಮಿತಿಯವ್ಕೆ, ಸಂಚಾಲಕರಾದ ಶ್ರೀ ಮಂದ್ರೀರ ಮೋಹನ್‌ದಾಸ್ ಮತ್ತೆ ಶ್ರೀ ಸದಾನಂದ ಮಾವಜಿಯವ್ಕೆ ವಿಶೇಷ ಅಭಿನಂದನೆಗ. ಹಂಗೆ ಪುಸ್ತಕ ಸಲಹಾ ಸಮಿತಿ ಸದಸ್ಯರಿಗೂ ನಮ್ಮ ಅಕಾಡೆಮಿ ಸದಸ್ಯರ್‌ಗಳಿಗೂ ಕೃತಜ್ಞತೆ ತಿಳ್ಸ್‌ತಾವೊಳೆ.

**ಕೊಲ್ಯದ ಗಿರೀಶ್**
ಅಧ್ಯಕ್ಷರ್

# ಮುನ್ನುಡಿ

ಸಂಸ್ಕೃತಿನ ಮನ್‌ಷ ತನ್ನ ಬದ್‌ಕಿನ ಚೌಕಟ್ಟ್‌ಗೆ ಅನುಗುಣ ಆಗಿ ಸೃಷ್ಟಿ ಮಾಡಿಕಂಡುಟ್ಟು. ಹಂಗೆ ನಮ್ಮ ಅರೆಬಾಸಿಕರಿಗೆ ತಮ್ಮದೇ ಆದ ಶ್ರೀಮಂತ ಸಂಸ್ಕೃತಿ ಉಟ್ಟು. ಅದರ್‌ನ ಉಳ್ಸಿ ಬೆಳ್ಸಿಕಂಡ್ ಬರ್‌ತಾವ್ರೊಳೊ. ಇತ್ತ ಜಾಗತೀಕರಣ ಮತ್ತೆ ಉದಾರೀಕರಣದ ಸೆಳ್ತಕ್ಕೆ ಸಿಕ್ಕಿ ನಮ್ಮ ಮೂಲ ಸಂಸ್ಕೃತಿ ಮರೆಯಾಗ್ತಾ ಉಟ್ಟು. ಈ ಕಾಲಘಟ್ಟಲಿ ಸಂಸ್ಕೃತಿ ಪರಿಪಾಲಕರ್ ತೇಳ್ವ ಒಂದು ಗುಂಪು ಎಲೆಮರೆ ಕಾಯಿಯಂಗೆ ಇದ್ದ್, ಅದರ್‌ನ ಉಳ್ಸಿ ಬೆಳ್ಸುವ ಕಾಯಕಲಿ ತಮ್ಮನ್ನ ತೊಡಗಿಸಿಕೊಂಡೊಳೊ. ಅವರ್‌ನೆಲ್ಲ ಮೈಸೂರ್‌ಲಿ ಸೇರ್‌ಸಿ 'ಸಂಸ್ಕೃತಿ ಪರಿಪಾಲಕರ ಸಮಾಗಮ'ತೇಳ್ವ ಕಾರ್ಯಕ್ರಮನ ನಡ್ಸಿದೊ. ಆ ಕಾರ್ಯಕ್ರಮಲಿ ಒಳ್ಳೊಳ್ಳ ವಿಷ್ಯಗಳ ಕುರ್‌ತ್ ವಿಚಾರಗೋಷ್ಠಿ ಮತ್ತೆ ಸಂವಾದ ನಡ್‌ತ್. ಅರ್ಥಪೂರ್ಣ ಆದ ಈ ವಿಚಾರಗೋಷ್ಠಿನ ವಿಚಾರ ಅಲ್ಲಿಗೇ ಮುಗಿಯಕ್ಕಾಗದ್, ಅದೊಂದು ದಾಖಲೆ ರೂಪಲಿ ಇರ್‌ಲಿಂತೇಳೊ ವಿಚಾರಂದ ಈ ವಿಚಾರಗೋಷ್ಠಿನ ಎಲ್ಲಾ ವಿಚಾರಗಳ್ನ ಪುಸ್ತಕ ರೂಪಲಿ ಹೊರ ತಂದೊಳೊ. ಈ ಕಾರ್ಯಕ್ರಮಲಿ ವಿಚಾರ ಮಂಡನೆ ಮಾಡ್ದ ಚೆರಿಯಮನೆ ಶ್ರೀ ಡಾ॥ ರಾಮಚಂದ್ರನವು, ಶ್ರೀ ಬಾರಿಯಂಡ ಜೋಯಪ್ಪನವು, ಶ್ರೀಮತಿ ಡಾ॥ ಕೋರನ ಸರಸ್ವತಿಯವು, ಶ್ರೀ ಪಟ್ಟಡ ಶಿವಕುಮಾರ್‌ನವುಗೆ ವಿಶೇಷ ಅಭಿನಂದನೆಗ. ಡಾ॥ ಚೆರಿಯಮನೆ ರಾಮಚಂದ್ರನವು ಕನ್ನಡಲಿ ಬರ್ದ ಲೇಖನನ ಅರೆಬಾಸೆಲಿ ಅನುವಾದಿಸಿದ ಶ್ರೀಮತಿ ಕಡ್ಲೇರ ತುಳಸಿ ಮೋಹನ್ ಅವ್ಕೂ ಕೃತಜ್ಞತೆನ ಸಲ್ಲ್‌ಸ್ತಾ ಒಳೆ.

ಕಾರ್ಯಕ್ರಮಲಿ ಬೇರೆ ಬೇರೆ ಕಡೆಂದ ಬಂದ್ ವಿಚಾರಗೋಷ್ಠಿನ ನಿರ್ವಹಿಸಿದ ಶ್ರೀ ಪೊತಂಡ್ರ ತೇಜಪ್ರಸಾದ್ ಮತ್ತೆ ಶ್ರೀ ಕಟ್ಟೆಮನೆ ಸೋನಾಜಿತ್‌ನವ್ಕೂ ವಂದನೆಗ. ಕಾರ್ಯಕ್ರಮಲಿ ಭಾಗಿಯಾದಂತ ಸಂಸ್ಕೃತಿ ಪರಿಪಾಲಕರಿಗೂ, ಕಾರ್ಯಕ್ರಮನ ಅರ್ಥಪೂರ್ಣವಾಗಿ ಆಯೋಜಿಸಿದ ಕೊಡಗು ಗೌಡ ಸಮಾಜದ ಅಧ್ಯಕ್ಷ ಶ್ರೀ ಚೆಟ್ಟಿಮಾಡ ಜನಾರ್ಧನ ಮತ್ತೆ ಆಡಳಿತ ಮಂಡಳಿ ಎಲ್ಲಾ ಸದಸ್ಯರಿಗೆ ವಂದನೆಗ.

ಈ ಪುಸ್ತಕನ ಹೊರತಾಕೆ ಅವಕಾಶ ಮಾಡಿಕೊಟ್ಟ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಅಧ್ಯಕ್ಷ ಶ್ರೀ ಕೊಲ್ಯದ

ಗಿರೀಶ್ ಮತ್ತೆ ಎಲ್ಲ ಸದಸ್ಯರಿಗೂ ವಂದನೆಗ.

ಕಾರ್ಯಕ್ರಮಲಿ ಸಕ್ರೀಯ ಆಗಿ ಭಾಗವಹಿಸಿದ ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಶ್ರೀ ಸೂರ್ತಲೆ ಸೋಮಣ್ಣ ಮತ್ತೆ ಎಲ್ಲಾ ಸಮಾಜಗಳ ಅಧ್ಯಕ್ಷರು, ಕಾರ್ಯಕಾರಿ ಮಂಡಳಿಯವ್ಕೆ ಕೃತಜ್ಞತೆಗ.

ಈ ಪುಸ್ತಕನ ಲಾಯ್ಕಾಗಿ ಮುದ್ರಣ ಮಾಡಿಕೊಟ್ಟ ಶ್ರೀ ಕೃಷ್ಣ ಪ್ರಿಂಟರ್ಸ್, ಮಡಿಕೇರಿ ಅವ್ಕೂ ಹಂಗೆ ಈ ಪುಸ್ತಕಕ್ಕೆ ಪೊಲ್ರ್ನ ಮುಖಪುಟನ ವಿನ್ಯಾಸ ಮಾಡ್ದ ಶ್ರೀ ಪ್ರದೀಪ್, ಪ್ರಸನ್ನ ಸ್ಟುಡಿಯೋ, ಮರಗೋಡು ಇವ್ಕೂ ಕೃತಜ್ಞತೆಗ.

**– ಮಂದ್ರೀರ ಮೋಹನ್‌ದಾಸ್**

ಕಾರ್ಯಕ್ರಮ ಸಂಚಾಲಕರ್

ಸದಸ್ಯರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿ

# ಲೇಖಕನ ಮಾತ್

2017ರ ಜುಲೈ 23 ರಂದ್ ಮೈಸೂರ್ನ ವಿಜಯನಗರ 2ನೇ ಹಂತದ ಜಾಗೆಲಿ ಕಟ್ಟಿದ ಕೊಡಗು ಗೌಡ ಸಮಾಜದ ಸಾಂಸ್ಕೃತಿಕ ಭವನಲಿ ಅರೆಭಾಷೆ ಸಾಂಸ್ಕೃತಿಕ ಪರಿಪಾಲಕರ ಸಮಾಗಮ ನಡ್ತ್. ಕಿಕ್ಕಿರ್‌ದ್ ಸೇರಿದ್ದ ಅರೆಭಾಷಿಕರ ಈ ಸಮಾರಂಭಲಿ ಪ್ರಮುಖ ಆಗಿ ನಾಕ್ ವಿಷಯದ ಕುರ್ತ್ ವಿಚಾರಗೋಷ್ಠಿ ನಡ್ತ್. ಈ ಸಮಾರಂಬನ ಮೈಸೂರ್ ಗೌಡ ಸಮಾಜ ಮತ್ತೆ ಅರೆಭಾಷೆ ಅಕಾಡೆಮಿ ಆಯೋಜನೆ ಮಾಡಿತ್. ಅರೆಭಾಷಿಕರ ಹುಟ್ಟು ಮತ್ತೆ ಆಚರಣೆತ್ತೇಳುವ ವಿಷಯದ ಕುರ್ತ್ ಮಾತಾಡುವ ಅವಕಾಶ ನನ್ನ ಪಾಲಿಗಿತ್. ನಿಜವಾಗಿ ಇಂತ ಕಾರ್ಯಕ್ರಮ ಬೇಕಿತ್. ನಂಗೆ ಕೊಟ್ಟಿದ್ದ ಸಮೆಲಿ ಎಲ್ಲನೂ ಹೇಳಿಕಾತ್ಲೆ. ಹಿರಿಯರೊಟ್ಟಿಗೆ ಈ ಕುರ್ತ್ ಮಾತಾಡ್ರೆ ಇನ್ನೂ ಹೇಳಿವೆ. ಹಂಗಾಗಿ ಸಾಧ್ಯವಾದಷ್ಟ್ ಸಂಗ್ರಹ ಮಾಡಿ ಬರ್‍ದೊಳೆ. ಇಲ್ಲಿನೂ ಸನ ಪೂರ್ತಿ ಹೇಳಿಕಾತ್ಲೆತೇ ಆದೆ. ಪ್ರತೀ ಹಂತನೂ ಹೇಳಿ ವಿಷಯ ತಿರ್‍ಸೊಕುತಾದರೆ ಒಂದ್ ಪುಸ್ತಕನೇ ಬೇಕಾದೆತ ಆತ್.

ಹಿಂದೆನ ಕಾಲಲಿ ಇದ್ದ ಕಮ್ಮಿ ಸೌಲಭ್ಯಲಿ ಬಾಳಿ ಬದ್ಕಿದ ಕತೆಗಳ ಕೇಳ್ರೆ ಕುದೊಲು ನಿಮಿರಿ ನಿತ್ತದೆ. ಹೌದಾ.. ಹಂಗಿತ್ತಾ...ತ ಆದೆ. ಅಂದ್ ಸರಿಯಾಗಿ ಬಾಣಂತಿ ಆರೈಕೆ ಮಾಡ್ಸಿಕಂಡ್ ಮನೆ ಮದ್ದ್ ಕುಡ್ದವು ನಿಜಕ್ಕೂ ಪುಣ್ಯಾತ್ಮರೇ ಹೌದು. ಅಂತವು ಕಾಯಿಲೆಗೆ ಬಿದ್ದದೇ ಕಮ್ಮಿತ ಹೇಳಕ್. ಐದೋ ಆರೊ, ಹತ್ತೊ ಹದ್ನಾರೊ ಹೆತ್ತವು ಬಹಳಷ್ಟಿದ್ದೊ. ಅಂತವು ಎಂಬತ್ತ್ ತೊಂಬತ್ತ್ ವರ್ಷ ಆರೋಗ್ಯಂದ ಬಾಳಿಯೊಳೊ.

ಇಂದ್? ಸೌದೆ ಒಲೆ ಇಲ್ಲೆ, ಒಲೆ ತಿಂಟೆ ಇಲ್ಲೆ, ಬೆಸಗೆ ಇಲ್ಲೆ. ನಾಡ್‌ಮದ್ದ್‌ಗಿಡ ಎಲ್ಲುಟ್ಟೊ ಏನೊ? ಮದ್ದ್ ಗೊತ್ತಿದ್ದ್ ಬಾಣಂತಿ ಆರೈಕೆ ಮಾಡೊವು ಒಳೊನಾತ ಪ್ರಶ್ನೆ ಮೂಡ್ದೆ.

**– ಶ್ರೀ ಬಾರಿಯಂಡ ಜೋಯಪ್ಪ**
**ಲೇಖಕ,**
**ಮುಖ್ಯೋಪಾಧ್ಯಾಯ,**
**ಮದೆಮಹೇಶ್ವರ ಪ್ರೌಢಾಶಾಲೆ,**
**ಮದೆ.**

# ಲೇಖಕಿನ ಮಾತ್

ಅರೆಬಾಸಿಕ ಗೌಡ ಜನಾಂಗದ ಸಂಸ್ಕೃತಿನ ಮೂಲ ಬೇರ್ ಅಡುಗಿರುದು ಬದ್‌ಕ್‌ನ ಆಚರಣೆಗಳ್ಳಿ. ಈ ನಿಟ್ಟ್‌ಲಿ ಅರೆಬಾಸಿಕ ಗೌಡ್ರ ಪ್ರೌಢಾವಸ್ತೆ ಮತ್ತೆ ಮೊದುವೆನ ಆಚರಣೆಗ ಒಂದು ಪ್ರಮುಖ ಮೆಟ್ಲ್. ನಾನ್ 2008ರ್ಲಿ 'ಕೊಡಗ್ ಗೌಡ ಸಮುದಾಯದ ಸಾಂಸ್ಕೃತಿಕ ಅನನ್ಯತೆ ಮತ್ತು ಚಲನಶೀಲತೆ' ಂತೇಳ್ವ ವಿಷಯಲಿ ಪ್ರೌಢ ಪ್ರಬಂಧನ ಮಂಡಿಸಿ ಪಿ.ಎಚ್.ಡಿ. ಪದವಿ ಪಡ್ದ ಸಂದರ್ಬಲಿ ಗ್ರಾಡ್ರ ಸಂಸ್ಕೃತಿನ ಬಗ್ಗೆ ಪೂರ್ತಿ ಮಾಹಿತಿನ ಕ್ಷೇತ್ರಕಾರ್ಯಲಿ ಸಂಗ್ರಹ ಮಾಡಿ ಪುಸ್ತಕ ರೂಪಲಿ ಪ್ರಕಟಿಸ್ಯೊಳೆ. ಇಂದ್ ಪ್ರೌಢಾವಸ್ಥೆ ಮತ್ತೆ ಮೊದುವೆನ ಆಚರಣೆಗಳ ಕುರ್ತ್ ಮಾತಾಡಿಕೆ ಅವಕಾಶ ಸಿಕ್ಕಿತ್. ಇದ್ ಒಂದ್ ಗಂಟೆಲಿ ಹೇಳಿ ಮುಗ್ಸ್‌ವ ವಿಚಾರ ಅಲ್ಲೇ ಅಲ್ಲ. ನಮ್ಮ ಎಲ್ಲಾ ಆಚರಣೆಗಳ್ನ ಹಿಂಗೇನೆ ಮಾಡೊಕುಂತ ಕಡಾಂಡಿತ ಹೇಳಿಕೆ ಸಾದ್ಯ ಇಲ್ಲೆ. ಆಯಾಯ ಊರ್‌ಗಳ್ಳಿ ತಕ್ಕಮಟ್ಟಿಗೆ ವ್ಯತ್ಯಾಸಗ ಕಂಡ್‌ಬಂದದೆ. ಆದರೂ ಮೂಲ ಉದ್ದೇಶ ಒಂದೇತೇಳ್ದು ಹೆಮ್ಮೆನ ವಿಷ್ಯ. ಈ ನೆಲೆಲಿ ಅಕಾಡೆಮಿ ಒಳ್ಳೆ ಕೆಲ್ಸನ ಮಾಡ್ಯುಟ್ಟುಂತ ಕುಸಿ ಆದೆ.

– ಡಾ॥ ಕೋರನ ಸರಸ್ವತಿ ಪ್ರಕಾಶ್

# ಲೇಖಕನ ಮಾತ್

## ಅರೆಬಾಸೆ ಸಂಸ್ಕೃತಿ ಸಂಪತ್ತ್ – ಸಾವು ಸುದ್ಧ ತಿಥಿ

ಮಾಹಿತಿ ತಂತ್ರಜ್ಞಾನದ ಬೆಳವಣಿಗೆಂದ ಜಗತ್ತೇ ಸಂಕುಚಿತ ಆಗಿ ಸಂಸ್ಕೃತಿ ಪಲ್ಲಟಗೊಳ್ಳ್‌ತ್ತಿರುವ ಹೊತ್ತ್‌ಲಿ, ಅರೆಬಾಸೆ ಸಂಸ್ಕೃತಿನ ಉಳ್ಸಿಕಂಬ ಜವಾಬ್ದಾರಿ ನಮ್ಮೆಲ್ಲರ ಮ್ಯಾಲೆ ಉಟ್ಟು. ಹಾಂಗಿರ್‌ಕನ ಈ ಜನಾಂಗದ ವ್ಯಕ್ತಿಯೊಬ್ಬ ಸತ್ತರೆ ಯಾವ ವಿಧಿ ವಿಧಾನಗಳ್ನ ಆಚರ್ಸುವೆಂತೇಳ್ವ ವಿಚಾರಗಳ ಬಗ್ಗೆ ಈ ಲೇಖನ ಬೆಳ್ಕ್ ಚೆಲ್ಲಿದೆ.

1985 ರ 'ಗೌಡ ಸಂಸ್ಕೃತಿ ಪುಸ್ತಕ ಮತ್ತೆ ಈ ಜನಾಂಗದ ಕೆಲು ಮುಖ್ಯಸ್ಥರ ಸಲಹೆಯೊಟ್ಟಿಗೆ ಈ ಲೇಖನ ಬರ್ದೊಳೆ, ಇದರ್ಲಿ ಬರೆಯದ ವಿಷ್ಯಗಳೂ ಎಷ್ಟೋ ಉಟ್ಟು. ಆದರೂ ಸಂಸ್ಕೃತಿ ಬಗ್ಗೆ ಏನೂ ಗೊತ್ತಿಲ್ಲದ ಹೊತ್ತ್‌ಲಿ ಸ್ವಲ್ಪ ಮಟ್ಟಿಗಾದರ್ ಈ ಲೇಖನ ಸಹಾಯಕ್ಕ ಬಾದೂತ್ತೇಳಿ ನನ್ನ ಆಶಯ.

– ಪಟ್ಟಡ ಶಿವಕುಮಾರ್

# ಒಳ ಪುಟಲಿ

1. ಹಬ್ಬ ಹರಿದಿನ- ಧಾರ್ಮಿಕ ಆಚರಣೆಗ ಮತ್ತೆ ಅದ್ಕೆ ಸಂಬಂದಪಟ್ಟ ಆಚರಣೆಗ

2. ಅರೆಬಾಸಿಕರ ಹುಟ್ಟು ಮತ್ತೆ ಆಚರಣೆಗ

3. ಅರೆಬಾಸಿಕರ ಪ್ರೌಢವಸ್ಥೆ ಮತ್ತೆ ಮೊದುವೆ ಆಚರಣೆಗ.

4. ಕೊಡಗಿನ ಗೌಡರ-ಶವ ಸಂಸ್ಕಾರ-ವಿಧಿ ವಿಧಾನಗ.

# ಹಬ್ಬ ಹರಿದಿನ– ಧಾರ್ಮಿಕ ಆಚರಣೆಗ ಮತ್ತೆ ಅದ್ಕೆ ಸಂಬಂದಪಟ್ಟ ಆಚರಣೆಗ

**ಚೆರಿಯಮನೆ ಡಾ॥ ಬಿ.ರಾಮಚಂದ್ರ**
ವಿಶ್ರಾಂತ ಪ್ರಾಂಶುಪಾಲರ್, ಮೈಸೂರು

ಕನ್ನಡಂದ ಅರೆಬಾಸೆಗೆ ಅನುವಾದ ಮಾಡ್ದವು :
**ಶ್ರೀಮತಿ ಕಡ್ಲೇರ ತುಳಸಿ ಮೋಹನ್**

1. ಪೀಟಿಕೆ
2. ತುಳು ಪಂಚಾಂಗ ಮತ್ತೆ ಕಾಲಗಣನೆ
3. ಉಗಾದಿ ಮತ್ತೆ ಬಿಸು ಹಬ್ಬಗ
4. ಕೈಲ್ ಮೂರ್ತ ಹಬ್ಬ
5. ಕಾವೇರಿ ಜಾತ್ರೆ
6. ಹುತ್ತರಿ ಮತ್ತೆ ಕಿಡಾಸ ಹಬ್ಬಗ
7. ಕೊಡಗ್‌ನ ಗೌಡರ್ ಮತ್ತೆ ಶೃಂಗೇರಿ ಮಠದೊಟ್ಟಿಗೆ ಇರುವ ಸಂಬಂಧ
8. ವಿಜಯನಗರ ಮತ್ತೆ ಹರಿಸೇವೆ
9. ಹಿರಿಯರ ಮತ್ತೆ ವೀರರ ಪೂಜೆ
10. ಮುಖ್ಯ ಕಸ್‌ಬು ಕೃಷಿಗೆ ಸಂಬಂದಪಟ್ಟ ಆಚರಣೆಗ
11. ಕೊಡಗ್‌ನ ಗೌಡರ್ ಮತ್ತೆ ಮೂಡ ನಂಬಿಕೆಗ
12. ಕೊಡಗ್‌ನ ಗೌಡರ ಮನರಂಜನೆ ಆಚರಣೆಗ

## 1. ಪೀಟಿಕೆ :

ಮೂಲತ ಕೃಷಿಕರಾದ ಕೊಡಗ್‌ನ ಅರೆಬಾಸೆ ಗೌಡರ್ ಸ್ವತಂತ್ರ ಆರಾಧಕರ್. ನಮ್ಮಲ್ಲಿ ಒಬ್ಬ ಧಾರ್ಮಿಕ ಮುಖ್ಯಸ್ಥ ಅಥವಾ ಮಠಕ್ಕೆ ವಿದೇಯತೆ ಇಲ್ಲೆ. ಇವುಕೆ ಕೆಲ್ಸವೇ ಕೈಲಾಸ. ಎಡೆ ಬುಡದ ಕೃಷಿ ಕಾರ್ಯಂದಾಗಿ ಆಗಾಗ ದೇವಸ್ಥಾನಕ್ಕೆ ಹೋಕೆ ಇವುಕೆ ಪುರುಸೊತ್ತಿಲ್ಲೆ. ಕೊಡಗ್‌ನ ಗೌಡರ ಮತಾಚರಣೆಗೆ ಸಂಬಂದಪಟ್ಟ ಜಾನಪದ ಹಾಡೊಂದು ಇವು ಪೂಜೆ ಮಾಡುವ ದೇವಾನು ದೇವತೆಗಳ ಪಟ್ಟಿನ ಹೇಳ್ದೆ. ಪೂರ್ತಿ ಕೊಡಗಿಗಾಗಿ ಮಹಾಮಾತೆ ಕಾವೇರಿ, ಪ್ರತಿ ನಾಡ್‌ಗಾಗಿ ಮಹಾದೇವ–ಈಶ್ವರ, ಪ್ರತಿ ಗ್ರಾಮಕ್ಕಾಗಿ ಕಾಳಿ, ಭಗವತಿ, ಗ್ರಾಮದ ಒಂದು ಭಾಗಕ್ಕಾಗಿ ಈಶ್ವರನ ಅವತಾರದ "ಅಯ್ಯಪ್ಪ", ವಾಡೆ ಇಲ್ಲರೆ ಹಲವು ಮನೆಗಳ ಕೇಂದ್ರಕ್ಕೆ "ನಾಥ" ಇಲ್ಲರೆ "ನಾಗ", ಓಣಿ ಇಲ್ಲರೆ ಮನೆಗಳ ಸಾಲ್‌ಗೆ "ಭೂತ" ಮತ್ತೆ ಪ್ರತೀ ಕುಟುಂಬಕ್ಕೆ ಐನ್‌ಮನೆನ ಆಧರಿಸಿದ ಕಾರ್ಣ. ನಾವು ಭೂಮಿತಾಯಿ ಸೂರ್ಯ ಮತ್ತೆ ಅಗ್ನಿನ ಪೂಜೆ ಮಾಡವು. ನಾವ್‌ಗೆ ಸ್ವರ್ಗ–ನರ್ಕಗಳ ಕಲ್ಪನೆ ಉಟ್ಟು. ಈಶ್ವರ ಸುಬ್ರಮಣ್ಯ, ಭಗಂಡೇಶ್ವರ, ಮಂಜುನಾಥ ದೇವುರಿಗೆ ಹೂ, ಹಣ್ಣ್ ಫಲ ಇಸಿ ಪೂಜೆ ಮಾಡ್ರೆ ಶಿವನ ರಕ್ಕಸ ಅವತಾರಗಳಾದ ಭೈರವೇಶ್ವರ,, ಮಹಾಕಾಳಿ ಇಂತ ದೇವ್ರಿಗೂ ಕಾಳಿ, ಚಾಮುಂಡಿ, ಇಂತ ದೇವತೆಗಳಿಗೆ ಕುರಿ, ಕೋಳಿ, ಹಂದಿ ಮಾಸದ ಅಡಿಗೆಂದ ನೈವೇದ್ಯ ಮಾಡಿ ಪೂಜಿಸುವೆ. ಅರೆಬಾಸೆ ಗೌಡರಾಗಿ ನಾವು ವಿಷ್ಣು, ವಿಷ್ಣುನ ಅರ್ಧಾಂಗಿನಿ ಲಕ್ಷ್ಮಿ, ಶಿವ–ಪಾರ್ವತಿ ಅವತಾರಗಳ್ಲಿ ರಾಮ, ಕೃಷ್ಣ, ಶ್ರೀನಿವಾಸ ಇಲ್ಲರೆ ವೆಂಕಟೇಶ್ವರನ ಪೂಜೆ ಮಾಡುವೆ. ಕ್ರಿ.ಶ. 12ನೇ ಶತಮಾನಲಿ ಶ್ರೀ ರಾಮಾನುಜಾಚಾರ್ಯರ್ ವೈಷ್ಣವ ಮತ ಪ್ರಚಾರ ಮಾಡ್‌ದ್‌ರ್‌ಂದ ಮುಂದೆ ವಿಜಯನಗರದ ಅರಸು ಮತ್ತೆ ಅವರ ಪ್ರಜೆಗಳಾಗಿದ್ದ ನಾವು ವೈಷ್ಣವರಾಗಿ ತಿರುಪತಿ ವೆಂಕಟರಮಣ ದೇವುರ್ನ ಪೂಜೆ ಮಾಡಿಕೆ ಸುರುಮಾಡ್ದೊ.

## 2. ತುಳು ಪಂಚಾಂಗ :

ತುಳು ಪಂಚಾಂಗ ಮತ್ತೆ ಕಾಲಗಣನೆ ನಮ್ಮ ಎಲ್ಲಾ ಹಬ್ಬ ಹರಿದಿನಗಳ ಮತ್ತೆ ಅವುಕೆ ಸಂಬಂಧಪಟ್ಟ ಆಚರಣೆಗಳ ಮೂಲ. ತುಳು ಪಂಚಾಂಗದ ಸುರುನ ತಿಂಗ ಪೊನ್ನಿ. ಕಡೇ ತಿಂಗ ಪೆರಾರ್ದೆ. ಪೊನ್ನಿ ಹಿಂದೂ ಪಂಚಾಂಗದ ಪುಷ್ಯ– ಮಾಘ ಇಲ್ಲರೆ ಕ್ರೈಸ್ತ–ಆಂಗ್ಲ ಪಂಚಾಂಗ ಜನವರಿ–ಫೆಬ್ರವರಿಲಿ ತುಳು ಕಾಲಗಣನೆನ ಸುರುಮಾಡ್ದೆ. ಹಂಗೇ ಪೆರಾರ್ದೆ ಹಿಂದು ಪಂಚಾಂಗದ

ಮಾರ್ಗಶಿರ-ಪುಷ್ಯ ಇಲ್ಲರೆ ಕ್ರೈಸ್ತ ಪಂಚಾಂಗ ಡಿಸೆಂಬರ್-ಜನವರಿಲಿ ತುಳು ಕಾಲಗಣನೆನ ಆಕೀರಿ ಮಾಡ್ದೆ. ಪೊನ್ನಿ, ಮಾಯಿ, ಸುಗ್ಗಿ, ಪಗ್ಗು, ಬ್ಯಾಸಿಗೆ, ಕಾರ್ತಿಂಗ, ಆಟಿ, ಸೋಣ, ನಿಡ್ನಾಳ್, ಬೆಳ್ತಿಂಗ, ಜಾರ್ದೆ ಮತ್ತೆ ಪೆರಾರ್ದೆ ತುಳು ಪಂಚಾಂಗದ 12 ತಿಂಗ.

## 3. ಉಗಾದಿ ಮತ್ತೆ ಬಿಸು ಹಬ್ಬಗ :

ಉಗಾದಿ ಹಬ್ಬ ಹಿಂದೂಗಳ್ಲಿ ವರ್ಷದ ಸುರೂನ ಹಬ್ಬ. ಹಿಂಗಾಗಿ ಹಿಂದೂಗ ಆದ ನಾವು ಉಗಾದಿ ಹಬ್ಬನ ಆಚರಣೆ ಮಾಡಿವೆ. ಹೊಸ ವರ್ಷಲಿ ಕಷ್ಟ-ಸುಖ ಸಮನಾಗಿ ಬರ್ಲಿತೇಳುವ ಆಶಾ ಭಾವನೆಂದ ಬೇವು-ಬೆಲ್ಲನ ತಿಂದವೆ. ಒಟ್ಟಿಗೆ ಕುದ್ದ್ ಊಟ ಮಾಡುವೆ. ಮನೆ ಯಜಮಾನ ಹೊಸ ವರ್ಷದ ಫಲ, ಲಾಭ-ನಷ್ಟ, ಜಯಾಪಜಯ ಮತ್ತೆ ಭವಿಷ್ಯನ ಹೊಸ ಪಂಚಾಂಗ ನೋಡಿ ಹೇಳುವೆ. ಹೊಸ ವರ್ಷ ಸುರಾದ್ದರ್ಂದ ಆ ಹೊತ್ತಿಗೆ ಮಳೆ ಬಂದ್ ಭೂಮಿ ಹದ ಆಗಿದ್ದರೆ ಅಂದ್ ಗದ್ದೆಗೆ ಎತ್ತ್‌ಕಟ್ಟ್‌ವೆ. ಭೂಮಿ ಹದ ಆಗದಿದ್ದಲ್ಲಿ ಏಪ್ರಿಲ್ ನಡುಲಿ ಬರುವ ಬಿಸು ಸಂಕ್ರಮಣಲಿ ಎತ್ತ್ ಕಟ್ಟುವೆ. ಉಗಾದಿ ದಿನ ಊರ್ ಜನರೊಟ್ಟಿಗೆ ಸೇರಿ ದೇಸ್ಥಾನಲಿ ಪೂಜೆ ಮಾಡಿ ಕಾಯಿಗೆ ಕಲ್ಲ್ ಹೊಡಿಯದು ಕಾಯಿಗೆ ಗುಂಡು ಹೊಡಿಯದು, ಆಟೋಟ ಪೈಪೋಟಿಗಳ್ಲಿ ಕೂಡಿಯಾಡುವೆ. ಬಿಸುದಿನ ನೆಕ್ಕಿ ಗಿಡದ ಕೋಲು ಹಿಡ್ದ್ ಗದ್ದೆಲಿ "ಒಂದು ಒಳಿ" ಹೂಡುವ ಮೂಲಕ ಭತ್ತದ ಕೃಷಿ ಕಾರ್ಯನ ಸುರುಮಾಡುವೆ. ಹಿಂಗೆ ನಮ್ಮ ವರ್ಷದ ಕೃಷಿಕಾರ್ಯ ಸುರು ಆದೆ.

## 4. ಕೈಲ್ ಮೂರ್ತ ಹಬ್ಬ :

ಕಾಲಚಕ್ರದ ಋತುಮಾನಕ್ಕೆ ಸರಿಯಾಗಿ ನಡಿವ ಕೊಡಗ್‌ನ ಗೌಡರ ಬಾರೀ ಜನಪ್ರಿಯ ಹಬ್ಬತೇಳ್ರೆ ಕೈಲ್ ಮೂರ್ತ. "ಕೀಲ್" ತೇಳ್ರೆ ಆಯುಧಗ ಕೃಷಿ ಹತ್ಯಾರ್‌ಗ ಮೂರ್ತ ತೇಳ್ರೆ "ಸಮೆ" ದಿನದ 30ನೇ ಭಾಗ ಇಲ್ಲರೆ 48 ನಿಮಿಷಗಳ ಹೊತ್ತು. ನಮ್ಮ ಮೊದುವೆ ಮೂರ್ತದ ಸಮೆನೂ ಇದೇ. ಕೈಲ್ ಮೂರ್ತ ರೈತ ಮಿತ್ರರ ಒಂದು ಪ್ರಸಿದ್ಧ ಆಯುಧಪೂಜೆ ನಾಡಹಬ್ಬ. ಪಗ್ಗು ತಿಂಗಳ್ಲಿ ಸುರಾಗುವ ಕೃಷಿ ಕೆಲ್ಸಗ ಸೋಣ ತಿಂಗಳ್ಲಿ ನಾಟಿ ಕೆಲ್ಸ ಪೂರ್ತಿ ಆಕೆ ಮುಟ್ಟ ಮುಂದುವರ್ದದೆ. ಕೃಷಿಗೆ ಬಳ್ಸಿದ ನೇಗ್‌ಲ್, ನೊಗ, ಕೊಟ್ಟು, ಕತ್ತಿ, ಕೋವಿ ಇದರ್ನೆಲ್ಲ ತೊಳ್ದ್ ಮಡಿ ಮಾಡಿ ಜೋಡೆತ್ತ್‌ಗಳೊಟ್ಟಿಗೆ ಪೂಜೆ ಮಾಡುವೆ. ಈ ಹಬ್ಬದ ದಿನದ ವಿಸೇಸ ಅಡಿಗೆ - ಹಂದಿ ಮಾಸದಗೈಪು ಮತ್ತೆ ಬಟ್ಲಿಟ್ಟ್.

ಬೇರೆ ಊರ್‌ಗಳ್‌ಂದ ನೆಂಟರಿಷ್ಟರ್ ಸನ ಈ ಹಬ್ಬಕ್ಕೆ ಬಂದವೆ. ಹಿರಿಯವು ಹಂಞಾ ಕಳ್ಳ್ ಕುಡ್ಕಂಡವೆ. ಈ ಹಬ್ಬನ ಕೊಡಗ್‌ಲಿ ಎಲ್ಲವು ಒಂದೇ ದಿನ ಆಚರಣೆ ಮಾಡ್ದುಲೆ. 8 ರ –12 ರ ಮತ್ತೆ 18–ರ ಕೈಲ್ ಮೂರ್ತ ತೇಳಿ ಬೇರೆ ಬೇರೆ ದಿನಗಳಂದ್ ಆಚರಿಸುವೆ. ಇದ್ ಕ್ರಮ ಆಗಿ ಸೋಣ ತಿಂಗಳ ಭಾದ್ರಪದ ಮಾಸದ 8,12, ಮತ್ತೆ 18ನೇ ದಿನಗಳಂದ್ ನಡಿವ ಹಬ್ಬ. ಮಡಿಕೇರಿ ತಾಲೋಕುನ ಗಾಳಿಬೀಡ್, ಗರ್ವಾಲೆ ಕಡೆವು 8 ರ ಕೈಲ್‌ಮೂರ್ತ, ಬಾಗಮಂಡ್ಲ, ನಾಪೋಕ್ಲು ಕಡೆವು 12 ರ ಕೈಲ್ ಮೂರ್ತ ಹಂಗೆ ಬಾಕಿ ಎಲ್ಲಾಕಡೆ 18ರ ಹಬ್ಬನ ಆಚರಣೆ ಮಾಡುವೆ. ಸೋಣ 18 ತೇಳ್ರೆ ಸೆಪ್ಟೆಂಬರ್ 3. ಈಗ ಕರ್ನಾಟಕ ಸರ್ಕಾರ ಈ ದಿನದ ನಿರ್ಬಂಧಿತ ರಜಾ ದಿನತ ಘೋಷಣೆ ಮಾಡಿಟ್ಟು. ಬೇರೆ ಬೇರೆ ದಿನಗಲ್ಲಿ ಬೇರೆ ಬೇರೆ ಕಡೆಗಳ್‌ಂದ ನೆಂಟರಿಷ್ಟರ್ ಕೂಡಾಡಿಕೆ ಅನುಕೂಲ ಆಗಲಿತ ಬೇರೆ ಬೇರೆ ದಿನಗಲ್ಲಿ ಈ ಹಬ್ಬನ ಆಚರಿಸಿಕೆ ತೀರ್ಮಾನಿಸಿದಂಗೆ ಕಂಡ್ ಬಂದದೆ. ಸಾಮಾನ್ಯ ಆಗಿ ಬೇರೆ ದಿನಗಲ್ಲಿ ನಡಿವಂಗೆ ಈ ಹಬ್ಬದ ದಿನವೂ ಸಾರ್ವಜನಿಕ ಜಾಗಗಲ್ಲಿ ಆಟೋಟ ಪೈಪೋಟಿಗಳೂ ಇನಾಮ್ ಕೊಡುವ ಕಾರ್ಯಕ್ರಮಗಳೂ ನಡ್ದವೆ.

## 4. ಕಾವೇರಿ ಹಬ್ಬ (ಕಾವೇರಿ ಜಾತ್ರೆ) :

ಕಾವೇರಿ ಪವಿತ್ರ ತೀರ್ಥ ಉಕ್ಕುದು ತುಲು ತಿಂಗಳ ಬೆಳ್ತಿಂಗ ತೇಳ್ರೆ ಅಕ್ಟೋಬರ್ ತಿಂಗಲ್ಲಿ ಆದೆ. ಅಕ್ಟೋಬರ್ ತಿಂಗಳ 16 ಇಲ್ಲರೆ 17 ರ ತುಲಾ ಸಂಕ್ರಮಣದ ದಿನನ ಕಾವೇರಿ ಜಾತ್ರೆತ ಆಚರಣೆ ಮಾಡುವೆ. ಕೊಡಗ್‌ನ ಗೌಡ ಕುಟುಂಬಲಿ ಒಬ್ಬ ನಾದರೂ ತಾಯಿ ಕಾವೇರಿನ ಉಗಮ ಸ್ಥಾನ ತಲಕಾವೇರಿಗೆ ಹೋಗಿ ಅಲ್ಲಿ ಪವಿತ್ರ ಕುಂಡಿಕೆಲಿ ಮಿೂದ್ ಪುಣ್ಯತೀರ್ಥನ ತಂದ್ ಹಂಚುವೆ. ಜಾತ್ರಗೆ ಹಿಂದೆನ ದಿನ ಗದ್ದೆ ತೋಟಗಲ್ಲಿ "ಬೆತ್ತ್" ನೆಟ್ಟ್ ವಿಶೇಸ ಆಗಿ ಯಾಕಲ್ ಗದ್ದೆ ಇಲ್ಲರೆ ಗಹೋದಿ ಗದ್ದೆಲಿ 3 ಬೆತ್ತ್‌ನ ಮುಕ್ಕಾಲ್‌ನಂಗೆ ನೆಟ್ಟ್ ಅದ್ಕೆ ನೋಕಟೆ ಬಳ್ಳಿಂದ ಸಿಂಗಾರ ಮಾಡುವೆ. ಕಾವೇರಿ ತೀರ್ಥ ಬಂದಮೇಲೆ ದೋಸೆ ಹಿಟ್ಟ್ ಮಾಡಿ ಸಕ್ಕರೆ, ತುಪ್ಪ, ಜೇನ್, ಬಾಳೆಣ್ಣ್, ಕಾಯಿ ಹೂಂದ ಸಿಂಗರಿಸಿ ದೀಪ ಹೊತ್ಸಿ ಪೂಜೆಮಾಡಿ ಬೆತ್ತ್ ಮೇಲೆ ಮಡ್ಗಿ 3 ಸತಿ ಪಾಂಡವು–ಕೌರವರ್ನ ಜೋರಾಗಿ ಕರ್ದವೆ. ರಾಮಾಯಣ ಮತ್ತೆ ಮಹಾಭಾರತದ ಕತೆಗ ಕೊಡಗ್‌ನ ಗೌಡರ್ಲಿ ಜನಪ್ರಿಯ ಆಗಿದ್ದದ್ನ ಇದ್ ಸ್ಪಷ್ಟಪಡ್ಸಿದೆ.

(1965 Mysore State Gazetier- Coorg District)
ಕೊಡಗ್‌ನ ಗೌಡರ ಧಾರ್ಮಿಕ ಆಚರಣೆಗಲ್ಲಿ ಪಿಂಡ ಹಾಕುದು ಒಂದು ಪದ್ಧತಿ.

ಒಂದು ಮನೆಲಿ ಯಾರಾರ್ ತೀರಿ ಹೋದರೆ ತೀಕೆಗೆ ನಿತ್ತವು ಭಾಗಮಂಡ್ಲಲಿ ಪೂಜೆ ಮಾಡಿ ಸತ್ತವುಕೆ ಪಿಂಡ ಹಾಕಿ ತೀರ್ಥ ಪ್ರಸಾದನ ತಂದ್ ಮನೆವುಕೂ, ನೆರೆಮನೆವುಕೂ ಹಂಚುದು ರೂಢಿಲಿ ಉಟ್ಟು.

ಕಾವೇರಿ ಸಂಕ್ರಮಣದ ದಿನ ಕಾವೇರಿ ಹೊಲಗದ್ದೆಗಳಿಗೆ, ಮನೆಗಳಿಗೂ ಬೇಟಿ ಕೊಟ್ಟದೆತೇಳಿಯೂ, "ಬೆತ್ತ್" ಪ್ರತಿಯೊಬ್ಬರ ಬೂಮಿ ಮತ್ತೆ ಮನೆನ ಗುರ್ತ್‌ಸಿ ತೋರ್ಸಿದೆ ತೇಳಿಯೂ ವಾಡಿಕೆ ಉಟ್ಟು. ಹಂಗೇ ಪಾಂಡವು ತಮ್ಮ ಪಾಲ್‌ನ ಬೂಮಿನ ವಾಪಾಸ್ ಕೊಡಕುತ ಕಾವೇರಿನ ಬೇಡಿಕಣ್‌ಕನ ತೀರ್ಥೋದ್ಭವದ ಮಾರ್ನೆ ದಿನ "ಬೆತ್ತ್"ನ ಮೇಲೆ ಮಡ್ಗಿದ ತಿಂದ್ ಬಾಕಿ ಆದ ದೋಸೆಂದ ಭೂಮಿ ಮಡೆ ಆಗುಟ್ಟುತ ಕಾವೇರಿ ಅವರ ಬೇಡಿಕೆನ ತಿರಸ್ಕಾರ ಮಾಡ್ದೆತೇಳುವ ಪ್ರತೀತಿಯೂ ಉಟ್ಟು.

## 5. ಹುತ್ತರಿ ಹಬ್ಬ :

ಕೊಡಗ್‌ನ ಗೌಡರ್ ಸೇರ್ದಂಗೆ ಕೊಡಗ್‌ನ ಎಲ್ಲಾ ಕೃಷಿಕರ್ ಆಚರಣೆ ಮಾಡುವ ಹಬ್ಬ ಇದ್. "ಹುತ್ತರಿ" ತೇಳ್ದು ಕೇರಳದ ಮಲಯಾಳಿ 'ಪುತ್ತರಿ' ತೇಳ್ವ ಮೂಲ ಪದಂದ ಬಂದುಟ್ಟು. 'ಪುತ್-ಹೊಸ' 'ಅರಿ-ಅಕ್ಕಿ' ಈ ಎರಡ್ ಪದಗ ಸೇರಿ ಹುತ್ತರಿ ಆಗುಟ್ಟು. ಬೆಳೆ ಕಟಾವು ಆದಮೇಲೆ ಹೊಸ ಅಕ್ಕಿನ ಮನೆಗೆ ತಾದ್ವರ ಸಂಕೇತ ಆಗಿ ಹಬ್ಬ ಆಚರಣೆ ಮಾಡುವೆ. ಹುತ್ತರಿ ಹಬ್ಬ ಸಾಮಾನ್ಯ ಆಗಿ ತುಳು ತಿಂಗಳ ಜಾರ್ದೆ- ನವಂಬರ್- ಡಿಸೆಂಬರ್ ತಿಂಗಲ್ಲಿ ನಡ್ದದೆ. ರೋಹಿಣಿ ನಕ್ಷತ್ರದ ಹುಣ್ಣಿಮೆನ ದಿನ ಈ ಹಬ್ಬನ ಆಚರಿಸುದರ್‌ಂದ ಒಂದು ವರ್ಷ ನವಂಬರ್ ತಿಂಗಲ್ಲಿ ಆದರೆ "ಎಳೆ ಹುತ್ತರಿ" ತೇಳಿ- ಡಿಸೆಂಬರ್ ತಿಂಗಲ್ಲಿ ಆದರೆ "ಬೆಳ್ದ ಹುತ್ತರಿ" ತೇಳಿ ಕರ್ದವೆ. ಕೇರಳ ಮೂಲದ ದೇವ್ರುಗಲ್ಲಿ ಪಾಡಿ ಇಗ್ಗುತಪ್ಪ ಒಂದು. ವಿರಾಜಪೇಟೆ ತಾಲೋಕುನ ಪಾಡಿ ಶ್ರೀ ಇಗ್ಗುತಪ್ಪ ದೇಸ್ಥಾನಲಿ ಹಬ್ಬಕ್ಕೆ ಒಂದು ವಾರಕ್ಕೆ ಮುಂದೆ ಹಸಿ ಕಡಿಯಕೆ ಬೊತ್ತ್, ಒಣ್‌ಗ್‌ಲ್ ಮುರಿಯಕೆ ಬೊತ್ತ್, ಬೇಟೆಯಾಡಿಕೆ ಬೊತ್ತ್, ಕಾಯಿ ಒಡೆಕೆ ಬೊತ್ತ್, ಒಲೆಲಿ ಓಡು ಮೊಡ್ಗಿಕೆ ಬೊತ್ತ್ ತೇಳುವ ಕಟ್ಟ್ ಇದ್ದದೆ. ಮನೆಗೆ ಸುಣ್ಣ ಬಣ್ಣ ಬಳ್ದ್, ಕಟ್ಟಳೆ ಬಾಗ್‌ಲ್‌ಗೆ ತೋರಣ ಕಟ್ಟಿ ಸಿಂಗಾರ ಮಾಡುವೆ.

ಹಬ್ಬದ ದಿನ ಗೊತ್ತು ಮಾಡ್ದ ಮೂರ್ತಲಿ ಪಾಡಿ ಇಗ್ಗುತಪ್ಪ ದೇಸ್ಥಾನದ ವತಿಂದ ಮಲ್ಮ ತೇಳುವ ಜಾಗಲಿ ಗದ್ದೆಂದ ಕದ್‌ರ್ ಕೊಯ್ದು ಮೇಲೆ ಕೊಡಗ್‌ನಾದ್ಯಂತ "ಕದ್‌ರ್ ತೆಗಿವ" ಕಾರ್ಯ ನಡ್ದದೆ.

ಕಾಡ್ ಕುಂಬಳ, ಗ್ಯಾರ, ಆಲ, ಮಾವು ಮತ್ತೆ ಹಲ್‌ಸ್‌ನ ಎಲೆಗಳ್‌ಂದ ನೆರೆ ಕಟ್ಟುದು, ಪಲಾರ ಮಾಡ್ದು, "ಪೊಲಿ" ಕರ್‌ಕಂಡ್ ಕದ್‌ರ್ ತೆಗಿಯದು, ನೆರೆಕಟ್ಟಿ ಹೊಸ ಅಕ್ಕಿ ಪಾಯಿಸನ ಊಟ ಮಾಡ್ದು ಹುತ್ತೆರಿ ಹಬ್ಬದ ವಿಶೇಸ.

## 6. ಕಿಡಾಸ ಹಬ್ಬ :

ಬತ್ತದ ಒಕ್ಕುಲು ಆದಮೇಲೆ ಬತ್ತನ ಪೂಜೆ ಮಾಡುವ ಹಬ್ಬನೇ ಕಿಡಾಸ. ಇದರ್ನ ತುಳು ತಿಂಗಳ ಪೊನ್ನಿ (ಫೆಬ್ರವರಿ) ತಿಂಗಲ್ಲಿ ಆಚರಣೆ ಮಾಡುವೆ. ಆ ದಿನ ಬೂಮಿ ತಾಯಿ ಮುಟ್ಟಾದೆ ತೇಳುವ ನಂಬಿಕೆ ಗೌಡರ್ಲಿ ಉಟ್ಟು. ಇಡೀ ಆಚರಣೆಲಿ ಬೂಮಿನ ಹೆಣ್ಣಾಗಿ ಕಂಡ್ ಫಲವಂತಿಕೆಗೆ ಬಳ್ಸಿಕಣುದರ್ನ ಕಾಣಕ್. 3 ದಿನದ ಆಚರಣೆಲಿ ಸುರುನ ದಿನ ದಾನ್ಯ ಲಕ್ಷ್ಮಿನ ಪೂಜೆ, 2ನೇ ದಿನ ಮನರಂಜನೆಗಾಗಿ ಪ್ರಾಣಿ ಬೇಟೆ, ಹಂಗೇ ಮೀನ್ ಬೇಟೆ 3ನೇ ದಿನ ಬೂಮಿ ತಾಯಿಗೆ ಪೂಜೆ ಮಾಡುವೆ.

## 7. ಕೊಡಗ್‌ನ ಗೌಡರ ಶೃಂಗೇರಿ ಮಟದೊಟ್ಟಿಗೇನ ಸಂಬಂಧ :

ವೈದಿಕ ಧರ್ಮದ ಪುನಶ್ಚೇತನದ ರೂವಾರಿಯೂ 'ಅದ್ವೈತ ಸಿದ್ಧಾಂತ'ದ ಪ್ರಚಾರಕರೂ ಆದ ಶ್ರೀ ಆದಿ ಶಂಕರಾಚಾರ್ಯರ್ ಸ್ಥಾಪನೆ ಮಾಡ್ದ 4 ಮಟಗಲ್ಲಿ ಶೃಂಗೇರಿನ ಶಾರದಾ ಪೀಟ ಸುರೂನದಾಗಿಟ್ಟು. ತುಂಗಾ ಹೊಳೆ ಕರೆಲಿ ಶಾರದಾ ಮಾತೆನ ಬಿಂಬ ಪ್ರತಿಷ್ಟಾಪನೆ ಮಾಡಿ ಪೀಟದ ರಕ್ಷಣೆಗಾಗಿ ಮೂಡಕ್ಕೆ ಕೆಂಚರಾಯ (ಕಾಲಭೈರವ) ಪಡುವಕ್ಕೆ ಆಂಜನೇಯ ತೆಂಕ್ ದಿಕ್ಕ್‌ಗೆ ಸಬ್ಬಮ್ಮ (ದುರ್ಗೆ) ಹಂಗೇ ಬಡ್‌ಗ್ ದಿಕ್ಕ್‌ಗೆ ಕೆಂಚಮ್ಮ (ಮಹಾಕಾಳಿ) ತೇಳುವ ದೇವಾನು ದೇವತೆಗಳ್ನ ಪ್ರತಿಷ್ಟಾಪನೆ ಮಾಡಿ ಪೂಜೆ ಮಾಡಿಕೆ ಸುರು ಮಾಡ್ದೊ. ಕ್ರಿ.ಶ. 1336ರ್‌ಲ್ಲಿ ವಿಜಯನಗರ ಸಾಮ್ರಾಜ್ಯನ ಸ್ಥಾಪನೆ ಮಾಡ್‌ಕನ ಸಹಾಯ ಮಾಡ್ದವು ಶೃಂಗೇರಿನ ಗುರುಗಳಾಗಿದ್ದ ವಿದ್ಯಾರಣ್ಯರ್. ವಿಜಯನಗರ ಜನ ಸಮೂಹದ ಭಾಗ ಆಗಿದ್ದ ಈಗನ ಅರೆಬಾಸೆ ಗೌಡ ಜನಾಂಗದ 10 ಕುಟುಂಬ 18 ಗೋತ್ರದವು ಆ ಜಾಗಂದ ಜೀವನ ನಡ್ಸಿಕೆ ಬ್ಯಾರೆ ಕಡೆ ಹೊರ್ಟ್ ಹೋಕನ ಗುರುಗ ಪ್ರತೀ ತಂಡನ ಆಶೀರ್ವಾದ ಮಾಡಿ ಅವರ ಕೈಗೆ ಸಿಕ್ಕಿದ ದೇವಾನು

ದೇವತೆಗಳ್ನ ಎತ್ತಿಕೊಟ್ಟ್ ಕುಲದೇವುರ್ನಾಗಿ ಪೂಜೆ ಮಾಡಿಕೆ ಹೇಳ್ದೊಗಡ. ಅಲ್ಲಿಂದ ಹೊರ್ಟ ಗೌಡರ್ ವೆಂಕಟರಮಣ, ಆಂಜನೇಯ, ಸಬ್ಬಮ್ಮ ಮತ್ತೆ ಕೆಂಚಮ್ಮ ಇವರ್ನ ಮನೆ ದೇವುರಾಗಿ ಸ್ವೀಕಾರ ಮಾಡ್ದೊ. ಹಳೇ ಕೊಡಗ್ ತೇಳ್ರೆ 1834 ರ ಹಿಂದೆ ತೇಳ್ರೆ ಬ್ರಿಟೀಷರ ಅಧೀನಲಿ ಇರ್ಕನ ಕೊಡಗ್‌ನ ಭಾಗಗಳಾದ ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಸುಬ್ರಮಣ್ಯ, ಪಿರಿಯಾಪಟ್ಟಣ, ಐಗೂರು, ಅರಕಲಗೋಡು, ಮಂಜರಾಬಾದ್ ಹಂಗೇ ಈಗನ ಕೊಡಗ್ ಜಿಲ್ಲೆನ ಮಡಿಕೇರಿ, ವಿರಾಜಪೇಟೆ ಮತ್ತೆ ಸೋಮವಾರಪೇಟೆ ತಾಲೊಕುಗಳ್ಲಿ ನೆಲೆ ನಿತ್ತಿರುವ ಅರೆಬಾಸೆ ಮಾತಾಡುವ ಗೌಡರ್ ಒಂದೇ ಮೂಲದವುತೇಳುದಕ್ಕೆ ಇದೇ ಸಾಕ್ಷಿ. ಶೃಂಗೇರಿ ಮಟದ ನಿರೂಪಗಳ್ನ ಆದರ್ಸಿ ಸಿಸ್ತ್‌ನ ಕಟ್ಟ್ ಕಟ್ಟಳೆಗಳ್ನ ರೂಪ್‌ಸಿ ಅದರ ಅನುಷ್ಠಾನನ "ಕಟ್ಟೆ ಮನೆ" ನ ಸುಪರ್ದಿಗೆ ವಹಿಸಿದೊ. ಇದೇ ಮುಂದೆ 10 ಕುಟುಂಬ 18 ಗೋತ್ರದ ನುಡಿಕಟ್ಟ್‌ಗ ಆದೊ. ಈಗಲೂ ಕೂಡ 10 ಕುಟುಂಬ 18 ಗೋತ್ರದ ದೇವಸಭೆ ಸಂಗಡ ಕೇಳಿ...... ತೇಳ್ವ ಒಕ್ಕಣೆನೊಟ್ಟಿಗೆ ಮೊದುವೆ ಕಾರ್‌ಬಾರ್‌ಲಿ ಪ್ರತಿಯೊಂದು ಶಾಸ್ತ್ರಗ ಸುರಾದು ರೂಡಿಲಿ ಉಟ್ಟು.

1811 ರ್‌ಂದ 1820 ಕ್ಕೆ ಮುಟ್ಟ ಕೊಡಗ್‌ನ ರಾಜರಾಗಿದ್ದ ಲಿಂಗರಾಜ್ ಒಡೆಯರ ಕಾಲಲಿ ಪಂಡಿತ ರಾಮಯ್ಯ ತೇಳವು ಬ್ರಾಮಣರ ಆಚಾರ ವಿಚಾರಗಳಿಗೆ ತಕ್ಕಂಗೆ ನಡಿವ ಗೌಡರ ಪದ್ದತಿಗೆ ತಡೆ ಮಾಡ್‌ಕನ ಈ ಸಂಬಂಧ ವ್ಯಾಜ್ಯ, ಮಡಿಕೇರಿ ಅರಮನೆನ ದಿವಾನರ ಕಚೇರಿ ಮುಟ್ಟಿತ್ತ್. ಲಿಂಗರಾಜ್‌ರ ಹಾಲೇರಿ ಸಂಸ್ಥಾನದ ನಿರೂಪದ ಪ್ರಕಾರ ನಡ್ಕಣಲಿ ತೇಳಿ ಅಪ್ಪಣೆ ಮಾಡ್ದರ್ನ ದಿವಾನ್ ಕಾರ್ಯಪ್ಪ ಗೌಡರ ನಿಯೋಗಕ್ಕೆ ತಿಳಿಸಿದೊ. ಅಂದ್‌ಂದ ಇಂದ್ ಮುಟ್ಟ ಹುಟ್ಟು. ಮೊದುವೆ, ಸಾವು ಈ ಮೂರು ಸಂದರ್ಭಲಿ ಬಳಸಕಾದ ಅಕ್ಕಿ, ಎಲೆ, ಅಡಿಕೆ, ಆರತಿ, ಹಣ್ಣ್, ಕಾಯಿ, ಒಡವೆ ಇವುಗಳ ಪ್ರಮಾಣ ಹೆಚ್ಚ್‌ಕಮ್ಮಿ ಆ ಸಂದರ್ಭದ ನಿರೂಪನೇ ಆದರಿಸಿಟ್ಟು. (ಗೌಡ ಸಂಸ್ಕೃತಿ – ಕುಟುಂಬ ಕೈಪಿಡಿ, ಗೌಡ ವಿದ್ಯಾಸಂಘ, ಮಡಿಕೇರಿ– 1985 – ಪುಟ 26) "ಹರಿಕೆ ಹಣ" ನಾಗಲಿ, ತೆರವಿನ ಹಣನಾಗಲಿ; ಈಗ ಶೃಂಗೇರಿಗೆ ಒಪ್ಪ್‌ಸುವ ಪರಿಪಾಟ ನಿತ್ತುಟ್ಟು. ಅದೇ ಹಣನ ತಿರುಪತಿಗೆ ಒಪ್ಪುಸುವೆ.

## 8. ಹರಿಸೇವೆ :

ವಿಷ್ಣುನ 10 ಅವತಾರಗಳ್ಲಿ ಶ್ರೀನಿವಾಸ / ವೆಂಕಟೇಶ್ವರನ ಅವತಾರವೂ

ಒಂದು. ವಿಜಯನಗರ ರಾಜರ ಮನೆದೇವ್ರು ವೆಂಕಟೇಶ್ವರ ಆದ್ದರ್‌ಂದ ವಿಜಯನಗರ ಸಾಮ್ರಾಜ್ಯದ ಪ್ರಜಾಕೋಟಿನ ಭಾಗ ಆಗಿದ್ದ ಗೌಡರೂ ಸನ ತಿರುಪತಿ ವೆಂಕಟರಮಣನ ಪೂಜೆ ಮಾಡ್ತಿದ್ದೊ. ಮುಂದೆ ಅವು ತಮ್ಮ ಅಭಿಮಾನನ ಮುಂದುವರ್‌ಸ್ತಾ ಹೋದ ಎಲ್ಲಾ ಕಡೆಗಳ್ಲಿ ವೆಂಕಟರಮಣನ ಆರಾಧನೆ ಮುಂದುವರ್ಕಂಡ್ ಬಾತ್. ಕಡೇಗೆ ದಕ್ಷಿಣ ಕನ್ನಡ ಜಿಲ್ಲೆಂದ ಕೊಡಗ್‌ಗೆ ಬಂದರೂ ಆ ಪದ್ಧತಿನ ಕೈ ಬುಟ್ಟತ್‌ಲೆ. ಅರೆಬಾಸೆ ಮಾತಾಡುವ ಕೊಡಗ್‌ನ ಎಲ್ಲ ಕುಟುಂಬಗ "ಹರಿಸೇವೆ" ತೇಳುವ ಹೆಸ್ರ್‌ಲಿ ವೆಂಕಟೇಶ್ವರನ ಪೂಜೆ ಮಾಡುವೆ.

ಹಂಗೇ ಅವನ ದ್ವಾರಪಾಲಕ ಕೆಂಚರಾಯನ ಪೂಜೆ "ಹರಿಸೇವೆ"ನ ಒಂದು ಭಾಗ. ಇದರ್ನ ಕೆಲವು ಕುಟುಂಬಗ ಪ್ರತಿ ವರ್ಷನೂ, ಇನ್ನೂ ಕೆಲವು ಕುಟುಂಬಗ  ಕೆಲವು ವರ್ಷಗಳಿಗೊಮ್ಮೆ ನಡ್ಸಿಕಂಡ್ ಬಂದವೆ.

ಕುಟುಂಬದ "ಹರಿಕೆ" ಹಣನ ಬಂಡಾರದ ಪೆಟ್ಟಿಗೆಲಿ ಮಡ್ಗಿ "ಮುಡ್ಪು" ತೇಳ್‌ವ ಹೆಸ್‌ರ್‌ಲಿ ವೆಂಕಟೇಶ್ವರನ ಪೂಜೆ ಮಾಡ್ವೆ. ಹರಿಸೇವೆಲಿ "ಸಾಮಾನ್ಯ ಹರಿಸೇವೆ" ಮತ್ತೆ "ಘನ ಹರಿಸೇವೆ" ತೇಳುವ 2 ವಿಧಗ ಉಟ್ಟು. "ಮಣೆ ಹರಿಸೇವೆ" ಮತ್ತೆ "ಪಾನಕ ಹರಿಸೇವೆ" ತೇಳುವ ಸುಲ್‌ಬ ತರಲಿಯೂ ಹರಿಸೇವೆ ಮಾಡುವೆ. ಹರಿಸೇವೆನ ದಾಸ ಇಲ್ಲರೆ ಬ್ರಾಮಣರ್‌ಂದ ಮಾಡ್ಸುವೆ. ದಾಸಂಗೆ ಸಹಾಯ ಮಾಡಿಕೆ 7 ಜನ "ಭಕ್ತ"ರಿದ್ದವೆ. ದಾಸಯ್ಯ ಮತ್ತೆ ಭಕ್ತರ್ "ದೇವರ ಗುಂಡ" (ಗರ್ಭಗುಡಿ)ನ ಬಾಳೆದಿಂಡ್‌ಂದ ಮಾಡುವೆ. "ಒಂಟಿ ಗುಂಡ" ಇಲ್ಲರೆ "ಜೋಡುಗುಂಡ"ನ ಕುಟುಂಬದ ತೀರ್ಮಾನಕ್ಕೆ ಸೆರಿಯಾಗಿ ಮಾಡುವೆ.  ಒಂದು ಗುಂಡಲಿ ವೆಂಕಟರಮಣನ ಹಂಗೇ ಮತ್ತೊಂದರ್ಲಿ ಕೆಂಚರಾಯನ ಬಿಂಬ ಮೊಡ್ಗಿ ಪೂಜೆ ಮಾಡುವೆ.

ವೆಂಕಟೇಶ್ವರಂಗೆ ಹಣ್ಣ್ ಹಂಪಲ್‌ಗಳ ನೈವೇದ್ಯ ಆದರೆ, ಕೆಂಚರಾಯಂಗೆ "ಬೇಟೆ" ನ ಮೂಲಕ ಬಲಿ ಕೊಟ್ಟ್ ಆಡ್ ಮಾಸನ ನೈವೇದ್ಯ ಅರ್ಪ್‌ಸುವೆ. "ಮಣೆ ಹರಿಸೇವೆಲಿ" ಗುಂಡ ಇರ್ದುಲೆ. ಬೇಟೆ ಬೀಳುವ ಕ್ರಮವೂ ಇಲ್ಲೆ. ವೆಂಕಟರಮಣನ ಮೂರ್ತಿನ ಮಣೆ ಮೇಲೆ ಬಾಳೆಲೆ ಮೊಡ್ಗಿ ಅಕ್ಕಿಲಿ ಕೂರ್ಸಿ ಪೂಜೆ ಮಾಡುವ ಕ್ರಮನೇ "ಮಣೆ ಹರಿಸೇವೆ." ದೇವರ ಮೂರ್ತಿನ ಸೆರಿಯಾದ ಜಾಗಲಿ ಕೂರ್ಸಿ ಒಳ್ಳೆಮೆಣ್ಸ್ ಹೊಡಿ ಮತ್ತೆ ಬೆಲ್ಲಂದ ಮಾಡ್ದ ಪಾನಕ ಮೊಡ್ಗಿ ಪೂಜೆ ಮಾಡುದಕ್ಕೆ ಹೇಳ್ದು ಪಾನಕ ಹರಿಸೇವೆತ.

ಮೊದುವೆ ಮಾಡ್‌ಕನ ಮೊದುಮಕ್ಕಳ ಹೆಸ್ರ್‌ಲಿ ಕಟ್ಟುವ "ಹರಿಕೆ ಹಣನ"

ಮುಡ್ಪುನ ಹಣದೊಟ್ಟಿಗೆ ತಿರುಪತಿಗೆ ತಲ್‌ಪ್‌ಸುವ ಪದ್ಧತಿ ಉಟ್ಟು. ಶೃಂಗೇರಿ ಮತ್ತೆ ತಿರುಪತಿನ ಗಂಗೆ ಪೂಜೆ ಮಾಡುವ ಸಂದರ್ಬ ಸೋಬಾನೆ ಮೂಲಕ ಹೇಳುದರ್ನ ಇಲ್ಲಿ ಕಾಣಕ್.

## ಹಿರಿಯವರ ಮತ್ತೆ ವೀರರ ಪೂಜೆ :

ಅರೆಬಾಸೆ ಮಾತಾಡುವ ಗೌಡರ್ ತಮ್ಮ ಕುಟುಂಬದ ಹಿರಿಯರ್ನ "ಕಾರೋಣ" ಕಾರ್ಣ ತೇಳುವ ಹೆಸ್ರ್‌ಂದ ಪೂಜೆ ಮಾಡುವೆ. ಕಾರೋಣ (ಕಾರ್ಣ) ತೇಳುವ ಹೆಸ್‌ರ್ ಕಾರಣ್ಣನ್ ತೇಳುದರ್‌ಂದ ಬಂದುಟ್ಟು. ಕಾರಣ್ಣನ್ ಕೇರಳಲಿ ಪ್ರತೀ ಕುಟುಂಬದ ಹಿರಿಯವು. ಗೌಡರ ಕಷ್ಟ-ಸುಖದ ದಿನಗಳ್ಲಿ ಮಾಡ್ದ ಅಡಿಗೆ ಮತ್ತೆ ಕಳ್ಳನ "ಕನ್ನಿ ಕಂಬ" ಆದಾರ ಆಗಿರುವ "ಬೆಸೆಗೆ"ಲಿ ಮೊಡ್ಗಿ ಕಾರ್ಣನ ಗ್ಯಾನ ಮಾಡಿಕಂಡವೆ. ಇಲ್ಲಿ ಎಡೆಹಾಕಿಕೆ ಮರ್ತ್ ಹೋದಲ್ಲಿ ಅಡಿಗೆ ರುಚಿಗೆಟ್ಟದೆ, ಹಾಳಾದೆ ಇಲ್ಲರೆ ಕುಟುಂಬದವರ ಆರೋಗ್ಯ ಹಾಳಾದೆತೇಳ್ದು ಕೊಡಗ್‌ನ ಗೌಡರ ನಂಬಿಕೆ. ಹಿರಿಯರ ಪೂಜೆನ ಕೊಡಗ್‌ನ ಗೌಡರ್ ಕಡ್ಡಾಯ ಆಗಿ ಆಚರಣೆ ಮಾಡುವೆ.

ತೀರಿಹೋದ ವೀರರ್ ಮತ್ತೆ ಯೋದರ್ನ ಕೊಡಗ್‌ನ ಗೌಡರ್ "ಬೀರ" (ಸಂಸ್ಕೃತ ವೀರ) ತೇಳುವ ಹೆಸ್ರ್‌ಂದ ಪೂಜೆ ಮಾಡುವೆ. ಬೀರನ ಸ್ನೇಹ ಪರ ಆತ್ಮ ನಮ್ಮನ ರಕ್ಷಣೆ ಮಾಡ್ದೆ ತೇಳುವ ಭಾವನೆ ಉಟ್ಟು. ಬೀರ ನಾವು ವಾಸ ಮಾಡುವ ಜಾಗದ ಸುತ್ತು ಕಾವ್‌ಲ್ ಇದ್ದ್ ಆಸ್ತಿ ಪಾಸ್ತಿಗಳ್ನ ರಕ್ಷಣೆ ಮಾಡ್ದೆ ತೇಳುವ ಬಾವನೆ ಉಟ್ಟು. ಬೀರರ್ ವಾಸಮಾಡುವ ಜಾಗತ ಹೇಳುವ "ಬೀರಂಪಾರೆಗ" (ಬೀರನ ಬಂಡೆಕಲ್ಲ್‌ಗ) ಕೊಡಗ್‌ನ ಸುಮಾರ್ ಜಾಗಗಳ್ಲಿ ಉಟ್ಟು. ರಾತ್ರಿ ಹೊತ್ತು ಹೊರಗೆ ಹೋದವು ಮನೆ ಬಾಕನ ಬೀರ ಮನೆಮುಟ್ಟ ಹಿಂದೇ ಬಂದ್ ವಾಪಾಸ್ ಹೋಗುವ ಕತೆನ ಹೇಳುವೆ. ಕೆಲವು ಕುಟುಂಬಗಳ್ಲಿ "ಬೀರನ ತೆರೆ" ತೇಳುವ ದೆವ್ವದ ಕೋಲ ನಡ್ದದೆ. ಯಕ್ಷಗಾನದಂಗೆ ವೇಷ ಹಾಕಿದ ವುಲಿಯುಂಗೆ ದಶಹರಿಸೇವೆಲಿಹರಿಸೇವೆಲಿಹರಿಸೇವೆಲಿಹರಿಸೇವೆರ್ಲಿನ ಬಂದ್ ಸಂಬಂದಪಟ್ಟ ಕುಟುಂಬದ ಕಷ್ಟ ನಷ್ಟಗಳ ಕುರ್ತ್ ಒಕ್ಕಣೆ ಕೊಟ್ಟದೆ. ಬೀರ, ಗುಳಿಗೆ, ಚೌಂಡಿ, ಪಾಷಾಣ ಮೂರ್ತಿ ಇಂತ ಗ್ರಾಮದೇವತೆಗ ಗ್ರಾಮದ ದೇವರ ಕಾಡ್‌ತೇಳುವ ಕಾಡ್‌ಗಳ್ಲಿ ವಾಸಮಾಡುವೆತೇಳಿ ನಂಬಿಕೆ ಉಟ್ಟು. ಆದ್ದರ್‌ಂದ ದೇವರ ಕಾಡ್‌ನ ಶುದ್ಧ(ಪವಿತ್ರ) ತೇಳಿ ತಿಳ್ಕಂಡ್ ಅಂತ ಕಾಡ್‌ಗಳ್ಲಿ

ಇದಲ್ಲದೆ ಯಾರಾದರ್ ಹೊಡ್ದ್ ಬಡ್ದ್ ಕೊಂದರೂ ಅದೆ ಹಿರಿಯವು ಈ ನಿಗೂಢ ಪೆಟ್ಟ್ ಕಾರಣತೇಳಿ ಹೇಳಿಕಣಿಕೆ ಇಂತ ಸಾವುಗಳ್ಲಿ ಹೆಣದ ಮೈಮೇಲೆನ ಕೆಂಪು ಇಲ್ಲರೆ ನೀಲಿ ಗುರ್ತುಗಳ್ನ ತೋರ್ಸುವೆ. ಆದರೆ ನಿಜಸಂಗತಿತೇಳ್ರೆ ಅದ್ ರಕ್ತ ಹೆಪ್ಪುಗಟ್ಟಿರುದರ್‌ಂದ ಆದ ಗುರ್ತುಗ.

## ಕೊಡಗ್‌ನ ಗೌಡರ ಮನರಂಜನೆನ ಅಂಗ ಆಗಿರುವ ಆಚರಣೆಗ :

ಕೊಡಗ್‌ನ ಗೌಡರ್ ಮನರಂಜನೆಗಾಗಿಯೇ ಬೇರೆ ದಿನಗಳ್ನ ಮಡ್ಕಂಬದುಲ್ಲೆ. ಹಬ್ಬದ ದಿನಗಳ್ಲಿ ಆ ದಿನಗಳ ಕುಸೀಂದ್ ಕಳಿಯಕೆ ಕೆಲವು ವಿಸೇಸ ಕಾರ್ಯಕ್ರಮಗಳ್ನ ಹಾಕಿಕಂಡೊಳೊ. ತಮ್ಮ ಕೆಲ್ಸ ಕಾರ್ಯದ ನಡುಲಿಯೂ ಮನರಂಜನೆಗೆ ಅವಕಾಸ ಮಾಡಿಕಂಡೊಳೊ. ಉದಾಹರಣೆಗೆ- ನಾಟಿ ದಿನಗಳಂದ್ ದೇವ್ರ ಹೆಸ್ರಲಿ 'ಹೊಯ್ಯ' ಹಾಕಂಡ್ ನಾಟಿ ನೆಟ್ಟವೆ. ಕೆಸ್‌ರ್ ಗದ್ದೆಲಿ ನಾಟಿ ಓಟ ಇದ್ದದೆ. ಕೆಸ್‌ರ್‌ಗದ್ದೆ ಓಟ ಒಂದು ಕಲೆಯೇ ಸರಿ. ಹುತ್ತರಿ ಹಬ್ಬದ ಸಮೆಲಿ ಸುಮಾರ್ 10 ದಿನಗಳವರೆಗೆ ಕೋಲಾಟ, ಬೆಳಕಾಟ, ಇಂತ ಕೊಣ್ತಗ – ಆಟಗ ನಡ್ದವೆ. ಹೆಸ್ರೇ ಹೇಳುವಂಗೆ "ಊರು ಕೋಲು" ಊರುನ ಮುಖ್ಯ ಕೇಂದ್ರಲಿ "ನಾಡ್‌ಕೋಲು" ನಾಡ್‌ನ ಕೇಂದ್ರಲಿ ನಡ್ದವೆ.

ಗ್ರಾಮದ ಹಬ್ಬಗ ಎತ್ತ್‌ರಾಟ (ಎತ್ತ್‌ಹೋರಾಟ) ದೊಟ್ಟಿಗೆ ಸುರಾದೆ. ದೇಸ್ಥಾನಕ್ಕೆ ಇಲ್ಲರೆ ದೇವ್ರಿಗೆ ಒಪ್ಪ್‌ಸಕಾದ ವಸ್ತುರೂಪದ ಹಂಗೇ ದುಡ್ಡು ರೂಪದ ತೆರಿಗೆಗಳ್ನ ಗಂಟ್‌ಕಟ್ಟಿ ಎತ್ತ್‌ಗಳ ಬೆನ್ನ್ ಮೇಲೆ ಹೇರಿ ದೇಸ್ಥಾನದ ಸುತ್ತು ಓಡ್ಸುವ ಕ್ರಮವೇ ಎತ್ತ್‌ರಾಟ (ಎತ್ತ್‌ಹೇರಾಟ)

ಇದೇ ಸಂದರ್ಭದ ಒಂದು ಬಾರೀ ಲಾಯ್ಕದ ಪೈಪೋಟಿತೇಳ್ರೆ ತೆಂಗಿನಕಾಯಿ ಕಿತ್ತ್‌ಕಂಬದು ಅಥವಾ ಅಂಬುಕಾಯಿ ಪೈಪೋಟಿ. ಇಂದೊಂದು ಗುಂಪು ಪೈಪೋಟಿ. ಪೈಪೋಟಿಲಿ ಸೇರವೆಲ್ಲ ಒಂದುಕಡೆ ಗುಡ್ಡೆಸೇರುವೆ. ಎರಡೂಕೈಗಳ್ನ ಮೇಲೆತ್ತಿ ಪೈಪೋಟಿಗೆ ತಯಾರಿರುವ ಗುಂಪುನ ಮದ್ಯಕ್ಕೆ ಒಬ್ಬ ಭಕ್ತ ಮೇಲೆಂದ ಕಾಯಿನ ಒಪ್ಪ್‌ಸಿದೆ. 'ರಗ್ ಬಿ' ಆಟದಂಗೆ ಕಾಯಿ ಕಿತ್ತ್‌ಕಣಿಕೆ ಪೈಪೋಟಿ ನಡ್ದದೆ. ಗುಂಪುಲಿ ನಿಸ್ಸೀಮನಾದವ ಒಬ್ಬ ಕಾಯಿನ ತನ್ನ ಕೈಲಿ ತಕಂಡ್ ಗುಂಪುಂದ ಹೊರಬಂದ್ ದೇಸ್ಥಾನದ ಮುಂದೆ ಇಲ್ಲರೆ ದೇವರ ಬಿಂಬದ ಮುಂದೆ ಒಡ್ದದೆ. ಇಲ್ಲಿಗೆ "ಅಂಬುಕಾಯಿ ಪೈಪೋಟಿ" ಮುಗ್ದದೆ.

ಹಿಂದೆ ಕೊಡಗ್‌ಲಿ ಕೋಳಿ ಜೂಜು ಸಾಮಾನ್ಯ ಆಗಿತ್ತ್. ಕೊಡಗ್‌ಲಿ ಸುಮಾರ್ ಕಡೆಗಳ್ಲಿ ಈ ಜಾಗಗ 'ಕೋಳಿಕಟ್ಟ- ಪರಂಬು' ತೇಳಿ ಹೆಸ್‌ರ್ ಪಡ್ಕಂಡೊಳೊ. ಪೊ-ಹೊರಗೆ, ಅಂಬು- ಜಾಗ ತೇಳ್ರೆ 'ಹೊರಜಾಗ' ಊರ್‌ನ ಹೊರವಲಯ ತೇಳ್ರೆ ಊರುನ ಗಡಿ, ಊರು ಸುರಾಗುವ ಬಾಣೆ ಜಾಗ ಆಗಿದ್ದದೆ.

'ತೆರೆಹಬ್ಬ' ಸಾಮಾನ್ಯ ಆಗಿ ಎಲ್ಲಾ ಗ್ರಾಮಗಳಲ್ಲಿಯೂ ನಡ್ದದೆ. 'ತೇರ್‌ಹಬ್ಬ' ತೆರೆ ಹಬ್ಬ ಆಗಿ ಆಚರಣೆ ಆದೆ. ಅಜ್ಜಪ್ಪ, ಸುಬ್ರಮಣ್ಯ, ಚಾಮುಂಡಿ(ಚೌಂಡಿ) ಇಂತ ದೇವಾನು ದೇವತೆಗಳ ತೇರ್‌ಗಳ್ನ 'ಮಲಿಯರ್' ತೇಳುವ ಪರಿಶಿಷ್ಟ ಜಾತಿಗೆ ಸೇರ್ದ ಜನ ಹೊತ್ತ್. ಫಲಾನುಫಲ ಒಳ್ಳದ್ ಕೆಟ್ಟದರ ಒಕ್ಕಣೆನ ಗ್ರಾಮಸ್ಥರಿಗೆ ಹೇಳುವೆ. ಸಾಮಾನ್ಯ ಆಗಿ2-3 ಇಲ್ಲರೆ 4 ದಿನಗಳವರೆಗೆ ನಡಿವ ಹಬ್ಬದ ಆಕೀರಿ ದಿನ ಕೆಂಡದ ಮೇಲೆ ನಡಿವ "ಮೇಲೇರಿ ಹಬ್ಬ" ನಡ್ದದೆ.

<u>ಆಧಾರ ಗ್ರಂಥಗ :</u>

1. ಕನ್ನಡ ನಾಡಿನ ಚರಿತ್ರೆ : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
2. ಕೊಡಗು ಸಂಗಾತಿ ಸಾಪ್ತಾಹಿಕಗಳ ಪ್ರತಿಗ.
3. ಕ್ಷೇತ್ರ ಕಾರ್ಯದ ಸಂದರ್ಭದ ಮೌಖಿಕ ಮಾಹಿತಿಗ
4. ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ, ಗೌಡ ವಿದ್ಯಾಸಂಘ, ಮಡಿಕೇರಿ (1985)
5. Moegling H. Coorg, Memoirs ( 1855)
6. P. Connor: Memoirs of Kodagu, Survey ( 1870)
7. C.A. Krishna lyer : Coorg Tribes & Castes (91931)
8. Mysore State Gazetteer : Coorg, District (1965)
9. Srinivas M.N.: Religion and Society among the coorg & south India (1978)
10. M.P. Cariappa: The Coorgs and their origins (1981)

* * * * *

# ಅರೆಭಾಷಿಕರ ಹುಟ್ಟು ಮತ್ತೆ ಆಚರಣೆಗ

–ಬಾರಿಯಂಡ ಜೋಯಪ್ಪ

## ಬಸ್ರಿದ್ ಆಸೆಗ :

ಸುರೂನ ಬಾಣಂತನ ತವುರ್‌ಲೇ ಮಾಡ್ದು ಒಂದು ಕ್ರಮ. ಹಂಗಾಗಿ ಅವುಳ ಏಳನೇ ತಿಂಗಲಿ ತವುರು ಮನೆಯವು ಕರ್ಕಂಡ್ ಹೋದವೆ. ಬಸ್ರಾದ ಏಳ್ ಇಲ್ಲರೆ ಒಂಬತ್ತನೇ ತಿಂಗಲಿ 'ಬಯಕೆ ಮೊದುವೆ'ತ ಮಾಡಿವೆ.

ಬಸ್ರಿದ್ ಆಸೆಗ ಇಂತದೇತ ಹೇಳಿಕಾದ್ಲೆ. ತರ ತರದ ತಿಂಡಿ, ತರ ತರದ ಊಟ ಮಾಡೊಕುತ ಅವುಳಿಗೆ ಆಸೆ ಇದ್ದದೆ, ಅದರ ವ್ಯವಸ್ಥೆ ಮಾಡಿಕೆ ತಾಕತ್ತ್ ಇರವು ಮಾಡಿಕೊಟ್ಟವೆ. ಆತಿಲ್ಲರೆ ಆಸೆ ಹಂಗೇ ಒಳ್ದೋದೆ. ಸಾಮಾನ್ಯಾಗಿ ಬಸ್ರಿನ ಮಾತಾಡ್ಸಿಕೆ ಹೋಗವು ಬುತ್ತಿ ತಕಂಡೋದವೆ. ಕುರಿಮಾಸ, ಗೋಧಿ ರೊಟ್ಟಿ (ಬ್ರೆಡ್), ಅದಿಲ್ಲರೆ ರೊಟ್ಟಿ, ಕೋಳಿ, ಕುಪ್ಪಿ, ಸಿಹಿತಿಂಡಿ, ತಕ್ಕಂಡೋಗಿ ಕುಡ್ಸಿ, ತಿನ್ಸಿ ಕುಸಿಪಡ್ಸಿವೆ.

ಕೆಲವುಕೆ ಭಾರೀ ದೊಡ್ಡ ದೊಡ್ಡ ಆಸೆ ಇಲ್ಲದಿದ್ದರೂ

ಪೇರಲ ಗಿಡದ ಚಿಗ್‌ರ್, ಸೀಂಬುಳು ಗಿಡದ ಚಿಗ್‌ರ್, ಮಾವ್ನ ಮಿಡಿ, ಹುಣ್ಸೊಳಿ, ಗದ್ದೆಲಿರುವ ಕೆನೆ ಮಣ್ಣ್, ಹುತ್ತದ ಮಣ್ಣ್, ಜೇನೆರಿ, ತಡ್‌ಸ್‌ಲ್ ಹಣ್ಣ್... ಹಿಂಗೆ ತರಾವರಿ ಆಸೆ ಆದುಟ್ಟು.

ಬಸ್ರಿ ಮುಂದೆ ಅಲ್ಲಿ ಅದ್ ನೋಡ್ದೆ, ಇಲ್ಲಿ ಇದ್ ನೋಡ್ದೆ, ಅದ್ ತಿಂದೆ ಇದ್ ತಿಂದೆತ ಮಾತಾಡ್ರೆ ಅವುಳಿಗೆ ಅದೇ ಆಸೆ ಆದೆ. ಅವುಳ ಮುಂದೆ ಮಾತಾಡಕನ ಎಚ್ಚರಂದ ಮಾತಾಡೊಕು. ಮನೆಲಿ ಒಳ್ಳ ವಾತಾವರಣ ಇರುವಂಗೆ ನೋಡಿಕಂಬೊದು ಮನೆಯವರ ಕರ್ತವ್ಯ. ಗಲಾಟೆ, ಜಗಳ, ಕೆಟ್ಟ ಕೆಟ್ಟದಾಗಿ ಬಯ್ಕಂಬೊದು ಬೊತ್ತೇ ಬೊತ್ತು. ಅವುಳು ಒಳ್ಳದರ ನೋಡ್ದು, ಒಳ್ಳದರ ಕೇಳ್ದು, ಒಳ್ಳದರ ಓದುದು ಭಾರೀ ಒಳ್ಳದ್. ಸಮಗೆ ಸರಿಯಾಗಿ ಊಟ, ನಿದ್ದೆ ಮಾಡೊಕು. ಕಾಲ ಕಾಲಕ್ಕೆ ಸರಿಯಾಗಿ ವೈದ್ಯಕೀಯ ಪರೀಕ್ಷೆ ಮಾಡ್ಸೊಕು. ಪೌಷ್ಟಿಕ ಆಹಾರ ಕೊಡೊಕು. ಇಷ್ಟೆಲ್ಲಾ ಮಾಡಿರೆ ಹುಟ್ಟುವ ಕೂಸು ಆರೋಗ್ಯವಂತ ಕೂಸಾಗಿದ್ದದೆ. ಅದ್ ದೇಶಕ್ಕೆ ಒಂದ್ ಒಳ್ಳ ಸಂಪತ್ತಾದೆ.

**ಹೆರಿಗೆ :** ಹೆರಿಗೆ ಬೇನೆ ಬಾಕೆ ಹೊತ್ತು ಗೊತ್ತು ಇಲ್ಲೆ. ಮಳೆಗಾಲ, ಚಳಿಗಾಲ, ಬೇಸೆಗೆತ ಲೆಕ್ಕ ಇಲ್ಲೆ. ವೈದ್ಯಕೀಯ ಸೌಲಭ್ಯ ಇಲ್ಲದ ಮತ್ತೆ ವಾಹನ ಸೌಲಭ್ಯ ಇಲ್ಲದ ಕಾಲಲಿ ಹಳ್ಳಿ ಮನೆಲೇ ಹೆರಿಗೆ ಆತಿತ್ತ್. ಹೆರಿಗೆ ಬೇನೆ ಬಾತಿದ್ದಂಗೆ ಊರೊಳಗೆ ಇರುವ ಅನುಭವಿ ಅಜ್ಜಿನ ಕರೆಕೆ ಓಡ್ತಿದ್ದೊ. ಹಗ್‌ಲಾಗಿದ್ದರೆ ಹೆಂಗೋ ಆಗೋತಿತ್. ಆದರೆ ಇರ್‌ಲ್ ಮನಿ ಆದರಂತೂ ಆ ಗೋಳು ಹೇಳ್ದೇ ಬೇಡ. ಆಗೆಲ್ಲಾ ಮನೆಲಿರ್‌ತಿದ್ದದ್ ಒಂದೇ ಒಂದ್ ಕೈ ದೀಪ. ಸಣ್ಣ ಗಾಳಿಗೂ ದೀಪ ಕೆಟ್ಬೋತಿತ್. ಅಷ್ಟೇ ಅಲ್ಲ ಅವುಳಿಯೋ, ತ್ರಿವೊಳಿಯೋ ಹುಟ್ಟಿರಂತು ಆ ಗೋಳುನ ಹೇಳ್ದೇ ಬೇಡ. ಅಂತದರ್‌ಲಿ ಇರ್‌ಲ್‌ಲಿ ಹೆರಿಗೆ ಆಕನ ಅಂತಾ ಬೆಳ್ಕ್‌ಲೇ ಹೆರಿಗೆ ಕೆಲ್ಸ ಮಾಡ್ತಿದ್ದೊ.

ಹೆರಿಗೆ ಆದಂಗೆ ಹೊಕ್ಕುಳು ಬಳ್ಳಿನ ಸೂಂತ್ರಿ ಮೇಲಿಸಿ ಚಾಕ್ ಇಲ್ಲರೆ ಬ್ಲೇಡ್‌ಂದ ಕೊಯ್ತಿದ್ದೊ. ಗಾಯಕ್ಕೆ ಮಾಯ್ಲು ಇಲ್ಲರೆ ಚಾಪೆ ಒಲಿನ ಸುಟ್ಟ್ ಅದರ ಕರಿನ ಹಾಕ್‌ತಿದ್ದೊ. ಮತೆ ಕಂಚ್‌ನ ಬಟ್ಲ್‌ಗೆ ಹೊಡೆತಿದ್ದೊ. ಆಗ ಗಣೀರ್‌ತ ಸದ್ದಾತಿತ್. ಕೂಸು ದೊನಿತೆಗ್ದ್ ಮರ್ಡೊಕು, ಕೂಸು ಆಗ ಮರ್ಟರೆ ಅದ್ಕೆ ಕೆಮಿ ಕೇಳ್ದೆತ ಅರ್ಥಗಡ. ಅಷ್ಟೇ ಅಲ್ಲ ಅದ್ಕೆ ಹೆದ್ರಿಕೆ ಹೋದೆಗಡ. ಲಾಯ್ಕ ದೊನಿತೆಗ್ದ್ ಮರ್ಟರೆ ಅದರ 'ದೊನಿಪೆಟ್ಟಿಗೆ' ಲಾಯ್ಕ ಉಟ್ಟುತ ಹೇಳಕ್. ಹಂಗೆತ್ತೇಳಿ ಕೂಸುನ ಕೆಮಿ ಹತ್ರ ಭಾರೀ ಸದ್ದ್ ಮಾಡಿಕಾಗದ್. ಯಾಕೆತ್ತೇಳಿರೆ ಕೂಸುದು 'ಕೆಮಿ ತಮಟೆಗೆ' ತೊಂದರೆ ಆದು. ಸರಿ, ಇದೆಲ್ಲಾ ಆದ ಮೇಲೆ ಕೂಸುನ ಮತ್ತೆ ಬಾಣಂತಿನ ಮೀಸಿ

ಆಕನ ಸೂಲಗಿತ್ತಿ ಅಜ್ಜಿಗೆ ಸುಸ್ತು. ಬಾಣಂತಿಗೆ ಸುಸ್ತೋ ಸುಸ್ತು. ಆದರೆ ತಾನ್ ಜೀವಕೊಟ್ಟ ಕೂಸುನ ಮೊಕ ನೋಡ್‌ಕನ ಆಗುವ ತೃಪ್ತಿನ ಹೆಂಗೆತ ವರ್ಣಿಸುದು? ಆ ಮನೆಯವುಕಂತೂ ಹಬ್ಬದ ಸಡಗರ.

**ಅಯ್ಯೆಗೆ ಮರು ಹುಟ್ಟು, ಕೂಸಿಗೆ ಹೊಸಾ ಹುಟ್ಟು**

ಹೆರಿಗೆತ್ತೇಳ್ದು ಸುಲಭದ ಮಾತಲ್ಲ. ಜೀವಕ್ಕೆ ಜೀವ ಕೊಡುವ ಹೊತ್ತೂ ಹೌದು, ಹಂಙಾ ಹೆಚ್ಚ್‌ಕಮ್ಮಿ ಆದರೆ ಜೀವ ಹೋಗುವ ಹೊತ್ತೂ ಹೌದು. ಆಸ್ಪತ್ರೆಲಾದರೆ ಆ ಮಾತ್ ಬೇರೆ. ಆದರೆ ಮನೆಲಿ ಮಾಡ್ತಿದ್ದ ಹೆರಿಗೆನ ಗ್ಯಾನ ಮಾಡಿರೆ ಮೈ ಜುಂ ಆದೆ. ಹಿಂದೆಲ್ಲಾ ಅನುಭವಿ ಅಜ್ಜಿ ಯಾವೊಂದು ತೊಂದರೆ ಆಗದಂಗೆ ಹೆರಿಗೆ ಮಾಡ್ಸಿದ ಉದಾಹರಣೆ ಬೇಕಷ್ಟ್ ಉಟ್ಟು.

ಚೊಚ್ಚಲ ಹೆರಿಗೆಲಿ ಹೆರಿಗೆ ಬೇನೆ ಬಂದ ಮೇಲೆ 'ಸೂಲಗಿತ್ತಿಗೆ' ಸಹಕಾರ ಕೊಡೊಕು. ಸೂಲಗಿತ್ತಿ ಹೇಳುವಂಗೆ ಕೇಳೊಕು. ಧೈರ್ಯ ಭಾರಿ ಮುಖ್ಯ. ಅರ್ವತ್ತ್ ಎಪ್ಪತ್ತ್ ವರ್ಷದ ಹಿಂದೆಲ್ಲಾ ಹಳ್ಳಿಲಿ ಮನೆಗಳ ಪರಿಸ್ಥಿತಿ ಹೆಂಗಿದ್ದಿರ್ದು? ಅದ್ ಹೆಂಗೇ ಇದ್ದರೂ ಸನ ಹೆರಿಗೆ ಸಮೆಲಿ ಕೂಸಿಗಾಗಲಿ, ಅಯ್ಯೆಗಾಗಲಿ ಜೀವಕೆ ತೊಂದರೆ ಆದ ಉದಾಹರಣೆ ಇತ್ತಾತ ನೀವೇ ಗ್ಯಾನ ಮಾಡಿಕಣಿ. ಎಷ್ಟೋ ಕಡೆ ತಿಂಗ ತುಂಬಿಕೆ ಮುಂದೇ ಹೆರಿಗೆ ಆದ್ದೂ ಉಟ್ಟು. ಏಳ್ ತಿಂಗಳಿಗೆ ಹುಟ್ಟುವ ಕೂಸು ಹೆಂಗಿರ್ದು? ಇಂದ್ 'ಇನ್‌ಕ್ಯೂ ಬೇಟರ್' ಉಟ್ಟು. ಹೆಂಗೂ ಕೂಸಿಗೆ ತೊಂದರೆ ಆದುಲೆ. ಆದರೆ ಅಂದ್? ಎರಡ್ ಕುಪ್ಪಿಗೆ ಹದ ಬಿಸಿ ನೀರ್ ತುಂಬ್‌ಸಿ ಬಟ್ಟೆಸುತ್ತಿ ಕೂಸುದ್ ಆಚೆ ಈಚೆ ಇಸ್‌ತಿದ್ದೊ. ಅಯ್ಯೆನ ಹೊಟ್ಟೆ ಬಿಸಿಯಂಗೆ ಆ ಕುಪ್ಪಿದ್ ಬಿಸಿ ಕೂಸುಗೆ ತಾಂಗ್‌ತಿತ್ತ್! ಹಂಗೆ ಕೂಸುನ ನೋಡಿಕಂಡ್ ಬದ್ಕಿಸಿದ ಉದಾಹರಣೆ ಬೇಕಷ್ಟ್ ಉಟ್ಟು.

**ಸೂತಕ:** ಹುಟ್ಟು ಮತ್ತೆ ಸಾವುನ ಸಂದರ್ಭ ಅಲ್ಲದೆ ಋತುಮತಿ ಆಕನ ಸೂತಕ ಇದ್ದದೆ. ಹದ್ನಾರ್ ದಿನ ಮುಟ್ಟ್‌ನ ಸೂತಕ ಇರ್ಕನ ಮನೆಯವು ಮತ್ತೆ ಕುಟುಂಬದವು ದೇವಸ್ಥಾನಕ್ಕೆ, ಪುಣ್ಯ ಸ್ಥಳಗಳಿಗೆ ಹೋದಾಗಲಿ, ಬೇರೆಯವರ ಮನೆ ಹತ್ತುದಾಗಲಿ ಮಾಡ್ದುಲೆ.

**ಅಮೆ:** ಕೂಸು ಹುಟ್ಟಿದ ಐದ್ ಇಲ್ಲರೆ ಏಳನೇ ದಿನ 'ಅಮೆ'ತ್ತೇಳುವ ಶುದ್ಧಿ ಕ್ರಿಯೆ ಇದ್ದದೆ. ಅಂದ್ ಮಡೊಳ್ತಿ ಮನೆಗೆ ಬಂದ್ ಅವ್ವ ಮತ್ತೆ ಕೂಸುನ ಮೀಸಿ ಶುದ್ಧೀಕರಣ ಮಾಡ್ದೆ. ದೇವಸ್ಥಾನಂದ ತಂದ ಪುಣ್ಯಾರ್ಚನೆನ ಮಾವುನ ಎಲೆಂದ ಮನೆ, ಮುಡುಪು ಮತ್ತೆ ಮನೆಯವುಕೆಲ್ಲ ತಕ್ಕ್‌ಳ್ಸಿದೆ. ಅಂದ್ ಬೆಳ್ಳುಳ್ಳಿ ಪಾಯ್ಸ ವಿಶೇಷ ಆಗಿದ್ದದೆ. ಶುದ್ಧೀಕರಣ ಮಾಡ್ದ ಮಡೊಳ್ತಿಗೆ ಅಕ್ಕಿ, ತೆಂಗ್ನಕಾಯಿ ಮತ್ತೆ ದುಡ್ಡು ಕೊಡುವ ಕ್ರಮ ಉಟ್ಟು. ಸಂಬಂಧಿಕರ್ ಬಾಣಂತಿ ಮಾತಾಡ್ಸಿಕೆ ಹೋದವೆ.

ಎಣ್ಣೆ, ಎಲಡಿಕೆ, ಬ್ರೆಡ್ಡ್‌ನೆಲ್ಲ ತಕಂಡ್ ಹೋದವೆ.

<u>ತೊಟ್ಟಿಗಿಲ್‌ಗೆ ಹಾಕುವ ಕ್ರಮ:</u> ಕೂಸು ಹುಟ್ಟಿದ ಹದ್ನೈದ್ ದಿನದ ಮುಟ್ಟ ಕೂಸ್‌ನ ತೊಟ್ಟಿಗಿಲ್‌ಲಿ ಮಲ್ಗ್‌ಸುದುಲೆ. ಹದ್ನಾರ್ನೇ ದಿನ ಕೂಸಿಗೆ ಹೆಸ್ರಾಕಿವೆ. ಅಂದ್‌ನ ದಿನ ಒಳ್ಳದುಟ್ಟಾತ ನೋಡೊಕುತ ಇಲ್ಲೆ. ಹದ್ನಾರ್ ದಿನ ಕಳ್ದ್ ಹೆಸ್ರಾಕುದುತಾದರೆ ಮಾತ್ರ ದಿನ, ಘಳಿಗೆ ನೋಡಿಕಾದೆ. ಕೂಸು ಹುಟ್ಟಿದ ಸಮಯಕ್ಕೆ ತಕ್ಕಂಗೆ ನಕ್ಷತ್ರ ನೋಡಿ ಅಕ್ಷರ ಹೇಳಿವೆ. ಸುರೂ ಅಕ್ಷರ ಇರುವಂಗೆ ಹೆಸ್‌ರ್ ಹಾಕಿವೆ.

ಬಾಣಂತಿ ಮತ್ತೆ ಕೂಸುನ ಮೀಸಿವೆ. ಕೂಸುನ ಚಾಮೆವ್ವ ತನ್ನ ಮಡ್ಲ್‌ಲಿ ಮಲ್ಗಿಸಿಕಂಡ್ ಹೊಸಾ ಕುಪ್ಪ ಹಾಕಿ ನೆಲ್ಲಕ್ಕಿ ಅಡಿಲಿ ಕುದ್ದ್‌ಕಂಡದೆ. ಮಣ್ಣ್‌ನ ಚಟ್ಟೆಲಿ ಅನ್ನನ ಹಾಲೊಟ್ಟಿಗೆ ಸಣ್ಣ ಅರ್ದ್ ಹಂಞ ತುಪ್ಪ ಹಾಕಿ ಚಾಮೆವ್ವ ಸುರೂಗೆ 'ಹುಗ್ಗೆ ಉಂಡ್, ಹುಗ್ಗೆ ಬೇರ್‌ಂಡ್ ನೂರ್ ವರ್ಷ ಆರೋಗ್ಯಂದ ಬಾಳ್'ತ ಹೇಳಿ ಚಿನ್ನದ ಉಂಗುರಲಿ ಕೂಸುನ ಬಾಯಿಗೆ ಅನ್ನ ಕೊಟ್ಟದೆ. ಮತ್ತೆ ಬಾಕಿದ್ದವು ಅನ್ನ ಕೊಟ್ಟವೆ.

ಸುರೂಗೆ ಗುಂಡ್‌ಕಲ್ಲ್‌ನ ತೊಳ್ದ್, ಎಣ್ಣೆ ಹಾಕಿ ಬೆಳಿ ಬಟ್ಟೆನ ಸುತ್ತಿ ತೊಟ್ಟಿಗಿಲ್ ಒಳಗೆ ಇಸಿವೆ. ಐದ್ ಜನ ಮುತ್ತೈದೆಗ ಮೂರ್ ಮೂರ್‌ಸತಿ ಒಳಗೆ ಇಸುದು, ಹೊರಗೆ ತೆಗ್ದ್ ತೊಟ್ಲು ಕೆಳಗೆಂದ ದಾಟ್ಸುವ ಕ್ರಮ ಮಾಡಿ ಜೋಗುಳ ಹಾಡಿವೆ.

**'ಕರಿ ಕಲ್ಲ್ ಗುಂಡಪ್ಪ ಜೋ ಜೋ...**
**ಹಣೆಯಿಲ್ಲೆ, ಕೆಮಿಯಿಲ್ಲೆ ಕರಿಗುಂಡಪ್ಪ ಜೋ ಜೋ...**
**ನಿಂಗೆ ಕಣ್ಣಿಲ್ಲೆ, ಬಾಯಿಲ್ಲೆ ಕರಿಗುಂಡಪ್ಪ ಜೋ ಜೋ...**
**ಕೈಯಿಲ್ಲೆ ಕಾಲಿಲ್ಲೆ ಕರಿಗುಂಡಪ್ಪ ಜೋ... ಜೋ...'**

ಮತ್ತೆ ಕಲ್ಲ್‌ನ ತೊಟ್ಲುಂದ ತೆಗ್ದ್ ಕೂಸುನ ಮಲ್ಗಿಸಿವೆ. ಆಗ ಸೋದರ ಮಾವ ಕೂಸುನ ಕೆಮಿಲಿ 'ನಿನ್ನ ಹೆಸ್ರ್ ...... ದತ್' ಹೇಳ್ದೆ.

**ಕೂಸು ಗಂಡಾಗಿದ್ದರೆ ಶ್ರೀರಾಮಚಂದ್ರ ಪ್ರಭು ಜೋ ಜೋ...**
**ಕೂಸು ಹೆಣ್ಣಾಗಿದ್ದರೆ ಸೀತಾದೇವಿ ಜೋ ಜೋ......ತ**
**ಜೋಗುಳ ಹಾಡಿಕಂಡ್ ತೊಟ್ಲುನ ಒಚ್ಚಿವೆ.**

ಬಂದವೆಲ್ಲವು ಕೂಸಿಗೆ ಉಡುಗೊರೆ ಕೊಟ್ಟವೆ. ಉಂಬಕೆ ವ್ಯವಸ್ಥೆ ಮಾಡಿದ್ದವೆ. ಎಲ್ಲವು ಕುಡ್ದ್ ತಿಂದ್ ಕುಸಿಪಟ್ಟ್ ಹೊರ್ಟವೆ.

<u>ಕೂಸುನ ಆರೈಕೆ:</u> ಕೂಸಿಗೆ ಎರಡ್ ಹೊತ್ತ್ ಎಣ್ಣೆ ಪೂಜಿವೆ. ಎರಡ್ ಹೊತ್ತ್ ಮೀಸಿವೆ. ಕೂಸುನ ಮೀಸವು ತನ್ನ ಕಾಲ್‌ಗಳ ಮೇಲೆ ಕೂಸುನ ಮಲ್ಗಿಸಿಕಂಡ್ ತಲೆ ಮೇಲೆ ಕೈ ಇಸಿಕಂಡ್ ತನ್ನ ಕೈ ಮೇಲೆ ತೂತ್ ಚಿಪ್ಪಿಂದ ನೀರ್ ಬೀಳುವಂಗೆ

ನೀರ್ ಹಾಕಿವೆ. ತಲೆ ಮೀದ್ ಆದಂಗೆ ಚೆಂಡಿತೆಗ್ದವೆ. ಮತ್ತೆ ಮೈಗೆ ನೀರ್ ಹಾಕಿವೆ. ಮೀದ್ ಆದಂಗೆ ಅದೇ ಚಿಪ್ಪಿಲಿ ನೀರ್ ತಕ್ಕಂಡ್ ಮೂರ್ ಮೂರ್ ಸತಿ ತಲೆಂದ ಕಾಲ್ ಸುತ್ತ್ ತಂದ್ ಚಿಪ್ಪಿಗೆ ಉಗ್ದಂಗೆ ಮಾಡಿ ತನ್ನ ಕಾಲ್‌ಕಡೆ ಚೆಲ್ಲಿವೆ. ಕೂಡ್ಲೆ ಕೂಸುನ ಮೈ ಚೆಂಡಿ ತೆಗ್ದ್ ಒಳಗೆ ಬಂದ್ ಚಾಲೆಮುಂಡುನ ಕೈಗೆ ಸುತಿಕಂಡ್ ಬೆಚ್ಚಂಗೆ ಮಾಡಿ ಕೂಸುನ ತಲೆ, ಮೈನೆಲ್ಲಾ ಒತ್ತಿ ಒತ್ತಿ ನೀರ್ ಪಸೆನ ತೆಗ್ದವೆ. ಉಪ್ಪು, ಸಾಸಿವೆ, ಒಣ್ಗಿಲ್ ಮೆಣ್ಸ್‌ನ ತುಂಡು, ಬೆಳ್ಳುಳ್ಳಿ ಸಿಪ್ಪೆನೆಲ್ಲ ಕೂಡ್ಸಿ ಕೂಸುನ ಮೈಸುತ್ತ ತಂದ್ 'ನರಿ ಕಣ್ಣ್, ನಾಯಿ ಕಣ್ಣ್, ಮನುಷ್ಯನ ಕಣ್ಣ್‌ದ್ ದೃಷ್ಟಿ ಪೂರಾ ಹೋಗಲಿ'ತ ಹೇಳಿ ದೃಷ್ಟಿ ತೆಗ್ದ್ ಒಲೆಗೆ ಹಾಕಿವೆ. ಆಗ ಅದೆಲ್ಲಾ ಚಟಪಟತ ಸಿಡಿಯಕನ ದೃಷ್ಟಿ ಪೂರಾ ಹೋತುತ ಹೇಳಿಕಂಡ್ ಒಲೆಂದ ತೆಗ್ದ ಮಸಿ ಬೊಟ್ಟುನ ಕೂಸುನ ಹಣೆಗೆ ಹಾಕಿವೆ. ಮತ್ತೆ ತಲೆಂದ ಕಾಲ್ ಮುಟ್ಟ ಬಟ್ಟೆಂದ ಭದ್ರ ಆಗಿ ಸುತ್ತಿವೆ. ತಲೆ ಉರುಟು ಬರಲಿತ ತಲೆಗೂ ಗಟ್ಟಿಯಾಗಿ ಬಟ್ಟೆ ಸುತ್ತಿವೆ. ಧೂಪದ ಹೊಗೆ ಕೊಟ್ಟ್ ಮಲ್ಗಿಸಿವೆ.

ನರ್ವಿಸ, ಗಂಧ, ಸಾಂಬ್ರಾಣಿದ್ ಹೊಗೆ ಕೊಡುವ ಕ್ರಮ ಉಟ್ಟು. ಕೆಲವುಕಡೆ ಕಾಡಾನೆ ಲದ್ದಿನ ತಂದ್ ಒಣಗಿಸಿಕಂಡಿದ್ದವೆ. ಅದರ ಸನ ಹಂಞ ತೆಗ್ದ್ ಕೆಂಡಕ್ಕೆ ಹಾಕಿ ಹೊಗೆ ಕೊಟ್ಟವೆ.

ಬಾಣಂತಿ ಆರೈಕೆ: ಹದ್ನಾರ್ ದಿನಮುಟ್ಟ ಕೂಸು ಮತ್ತೆ ಬಾಣಂತಿಗೆ ಎರಡ್ ಹೊತ್ತು ಎಣ್ಣೆ ಪೂಜಿವೆ. ಎರಡ್ ಹೊತ್ತು ಮೀಸಿವೆ. ಬಾಣಂತಿಗೆ ಬಿಸಿ ಮಾಡ್ದ ತೆಂಗ್‌ನ ಎಣ್ಣೆನ ತಲೆಗೆ ಹಾಕಿವೆ. ಎಳ್ಳೆಣ್ಣೆ, ಅದಿಲ್ಲರೆ ಒಳ್ಳೆಣ್ಣೆನ ಮೈಗೆ ಹಾಕಿವೆ. ಕೆಲವು ಬೆಳ್ಳುಳ್ಳಿ, ನರ್ವಿಸ, ಸಾಸಿವೆನೆಲ್ಲಾ ಕೂಡ್ಸಿ ತೆಂಗ್‌ನ ಎಣ್ಣೆಲಿ ಕಾಸಿ ಇಸಿಕಂಡಿದ್ದವೆ. ಮತ್ತೆ ಕೆಲವು ಇದೇ ಎಣ್ಣೆಗೆ ಬೇವುನ ಎಣ್ಣೆನು ಬೆರ್ಸಿವೆ. ಬಾಣಂತಿಗೆ ಲಾಯ್ಕ ಪೂಜಿ ಒಲೆ ಮುಂದೆ ಕೂರ್ಸಿವೆ. ಸೊಂಟ ಮೈನೆಲ್ಲಾ ಲಾಯ್ಕ ಕಾಸಿಕಂಡ ಮೇಲೆ ಗುಡ್ಡಕೆ ಕರ್ಕಂಡ್ ಹೋದವೆ.

ಗುಡ್ಡಕ್ಕೆ ಹೋಕನ ಬಾಣಂತಿ ಕೈಲಿ ಚಾಕ್ ಇಲ್ಲರೆ 'ಅಮೆಕತ್ತಿ' (ಕುಂಞ ಕತ್ತಿ) ಹಿಡ್ಕಂಡ್ ಹೋಕು. 'ಅಮೆಕಾಲೆ' ಸೋಂಕದಿರ್‌ಲಿತ್ತೇಳುವ ಕಾರಣಂದ ಹಂಗೆ ಹೋಕುತ ಹೇಳಿವೆ. ಲೆಕ್ಕ ಪ್ರಕಾರ ಅಲ್ಲಿಗೆ ಹೋಗಿ ಭುಜಕೆ, ಬೆನ್ನ್‌ಗೆ, ಸೊಂಟಕೆ ನೀರ್ ಹಾಕಿ–ಬೋಗುಣಿಯೊಳಗೆ ನಿಲ್ಸಿಕಂಡ್ ರಪ ರಪತ ನೀರ್ ಚೋಂಪಿವೆ. ಬಗ್ಗಿ ಮಂಡಿನ ಹಿಡ್ಕಂಡ್ ನಿತ್ತ ಮೇಲೆ ಮತ್ತೆ ಬೆನ್ನ್ ಸೊಂಟಕ್ಕೆಲ್ಲ ಸಮಾ ನೀರ್ ಹಾಕಿವೆ. ಬಾಣಂತಿ ಕೈನ ಮೇಲೆತ್ತಿಕಂಡ್ ಕೈ ಮುಗ್ದಂಗೆ ಮಾಡಿಕಂಡ್ ತಿರ್‍ಗೊಕು. ಆಗಲೂ ರಪ ರಪತ ನೀರ್ ಚೇಂಪಿವೆ. ಬೋಗುಣಿಲಿರುವ ಬಿಸಿ ನೀರ್‌ಂದ ಅವುಳ ಪಾದನೂ ಬೆಚ್ಚಂಗಿದ್ದದೆ. ತಲೆ ಮೈಯೆಲ್ಲಾ ಮೀದ್ ಆದಂಗೆ ಚೆಂಡಿ ತೆಗ್ದವೆ. ಒಳಗೆ

ಬಂದಂಗೆ ಚಾಲೆ ಮುಂಡುನ ಕೈಗೆ ಸುತ್ತಿಕಂಡ್ ಕೂಸುನ ಮೈ ಪಸೆ ತೆಗ್ದಂಗೆ ಪಸೆ ತೆಗ್ದವೆ. ದೃಷ್ಟಿ ತೆಗ್ದ್ ಮಲ್ಗಿಸಿವೆ. ತಲೆಂದ ಕಾಲ್ ಮುಟ್ಟ ಹೊದಿಕೆ ಹೋಸಿವೆ. ಅವುಳು ಲಾಯ್ಕ ಬೆಗ್‌ರೊಕು. ತಲೆಗಡಿ ಕೆಳಗೆ ಕುಂಞಕತ್ತಿ ಇಸಿಕಂಡಿದ್ದದೆ.

ಬೆಳಿಗ್ಗೆ ಬ್ರೆಡ್ಡ್, ಮಧ್ಯಾಹ್ನಕೆ ಒಂದ್ ಸೆಡೆ ಅನ್ನ, ರಾತ್ರೆಗೆ ಬ್ರೆಡ್ಡ್ ಇಷ್ಟೇ ಅವುಳ ಊಟ. ಹೊಟ್ಟೆ ತುಂಬ ಊಟ ಇಲ್ಲೆ!! ಒಂದ್ ಗುಡ್ಕು ನೀರ್ ಕುಡಿಯಕಷ್ಟೇ! ಹಿಂಗೆ ಹದ್ನಾರ್ ದಿನ ಮಾಡೊಕು. ಹದ್ನಾರ್ ಕಳ್ದ ಮೇಲೆ ಹೊಟ್ಟೆ ತುಂಬ ಊಟ ಮಾಡಕ್. ಆದರೆ ನಲ್ವತ್ ದಿನಮುಟ್ಟ ಹಂದಿ ಮಾಸಾಗಲಿ, ಮೀನಾಗಲಿ ತಿಂಬಕೆ ಬತ್ತ್‌ತ ಹೇಳಿವೆ. ಒಳ್ಳಮೆಣ್ಸ್ ಆಂಬರ, ಹೊರ್ದ ನೀರುಳ್ಳಿ, ಅನ್ನಕೆ ತುಪ್ಪ ಹಾಕಂಡ್ ಊಟ ಮಾಡೊಕು.

<u>**ಬಾಣಂತಿಗೆ ಮನೆ ಮದ್ದ್:**</u> ಮುಖ್ಯವಾಗಿ ಹನ್ನೆರ್ಡ್ ದಿನ ಹನ್ನೆರ್ಡ್ ತರದ ಮದ್ದ್‌ನ ಕೊಟ್ಟವೆ. ಅದರ್ನೆಲ್ಲ ಸರಿಯಾಗಿ ತಕ್ಕಂಡ್ ಪಥ್ಯ ಇದ್ದರೆ ಮತ್ತೆ ಯಾವ ಕಾಯ್ಲೆನೂ ಬಾದುಲೆತ ನಮ್ಮ ಹಿರಿಯವು ಕಂಡ್‌ಕಂಡ ಸತ್ಯ.

1. ಹೆರಿಗೆ ಆದ ದಿನ ಒಂದ್ ಚಮಚ ಬೇವುನ ಎಣ್ಣೆ ಕುಡ್ಸಿವೆ. ಅಂಗೈ ಮತ್ತೆ ಪಾದಕ್ಕೆ ಲಾಯ್ಕ ಉಜ್ಜಿವೆ.

2. ಕಾಳ್‌ಜೀರಿಗೆ ನಂಜ್‌ನ ಬೀಜ, ಒಳ್ಳಮೆಣ್ಸ್, ಬೆಳ್ಳುಳ್ಳಿ ಇದರ್ನೆಲ್ಲ ಕೂಡ್ಸಿ ಲಾಯ್ಕ ಅರ್ದ್ ಬಿಸಿ ಮಾಡಿ ಅರ್‌ಪಿ 1 ಗಲಾಸಷ್ಟು ಕುಡ್ಸಿವೆ. ಇದರ್‌ಂದ ಜುಲಾಪು ಆದೆ.

3. ಗಾಳಿಸೊಪ್ಪು, ಒಳ್ಳಮೆಣ್ಸ್, ಕಾಳ್‌ಜೀರಿಗೆ, ನಂಜ್‌ನ ಬೀಜನೆಲ್ಲಾ ಕೂಡ್ಸಿಕಂಡ್ ಲಾಯ್ಕ್ ಅರ್ದ್ ಕಷಾಯ ಮಾಡಿ ಕುಡ್ಸಿವೆ.

4. ಹಾಗಲ ಸೊಪ್ಪು, ಒಳ್ಳಮೆಣ್ಸ್ ಕೂಡ್ಸಿ ಅರ್ದ್ ಕಷಾಯ ಮಾಡಿ ಕುಡ್ಸಿವೆ.

5. ಬೆಳ್ಳುಳ್ಳಿ ಗಂಜಿ.

6. ಒಳ್ಳಮೆಣ್ಸ್, ವಾಮಕ್ಕಿ, ಅರಿಕಟ್ಟೆ ಸೊಪ್ಪು ಕಷಾಯ

7. ಗೆಜ್ಜುಗ ಕೊಡಿ (ಚಿಟ್ಟಿಕೊಡಿ) ಕಷಾಯ

8. ಸಣ್ಣ ಚುಂಡೆ ಗಿಡದ ಸೊಪ್ಪುದ್ ಕಷಾಯ

9. ಸಣ್ಣ ಗುಮ್ಮಟೆ ಗಿಡದ ಸೊಪ್ಪುದ್ ಕಷಾಯ

10. ಗಿಣಿಕೆ (ಕಾಕೆ) ಸೊಪ್ಪು ಕಷಾಯ

11. ಸೋಂಕು ಬಳ್ಳಿ ಮತ್ತೆ ಬೈನೆ ಮರ ಕೆತ್ತೆದ್ ಕಷಾಯ

12. ಪೊಲ್ಲೊಪ್ಪು(ಪಲ್ಲಿ ಸೊಪ್ಪು), ಹಸಿ ಅರ್‌ಶಣ ಕೂಡ್‌ಸಿ ಅರ್ದ್ ಮಾಡ್ದ ಕಷಾಯನ ಕುಡಿಯೊಕು. ಮತ್ತೆ ಮೈಗೂ ಪೂಜೊಕು. ಲಾಯ್ಕ ಒಣ್‌ಗಿದ ಮೇಲೆ ಮೀಸೊಕು.

ಇದರ್‌ಂದ ನೀರ್ ಕೊಟ್ಲೆ ಕಜ್ಜಿ ಬಾದುಲೆ.

ಯಾವುದೇ ಕಷಾಯ ಮಾಡಿರೂ ಕೆಂಪಾಗಿ ಕಾದ ಕಬ್ಬಿಣನ ಕಷಾಯದೊಳಗೆ ಹಾಕಿ ತೆಗ್ದ್ ಕುಡೆಕೆ ಕೊಡೊಕು.

ಬೆಳ್ಳುಳ್ಳಿ, ಒಳ್ಳೆಮೆಣ್ಸ್, ವಾಮಕ್ಕಿ ಎಲ್ಲಾ ಕಷಾಯಗಳಿಗೂ ಬೇಕಾದೆ. ಬಾಣಂತಿಗೆ ಹಾಲ್‌ಕಮ್ಮಿ ಇದ್ದರೆ ಸಂಬಾರ, ತೆಂಗ್ನಕಾಯಿ, ಒಳ್ಳಮೆಣ್ಸ್, ವಾಮಕ್ಕಿ, ಬೆಳ್ಳುಳ್ಳಿ, ಕಾಳ್‌ಜೀರಿಗೆ, ನಂಜ್‌ನ ಬೀಜ, ಚೂರು ಉಪ್ಪು ಹಾಕಿ ಅರ್ದ್ ಕಷಾಯ ಮಾಡಿ ಕುಡ್ಸಿರೆ ಮೂರು ವರ್ಷಮುಟ್ಟ ಹಾಲ್‌ಗೆ ತೊಂದರೆ ಆದುಲೆತ ಅನುಭವಿಗಳ ಮಾತ್.

ಬಾಣಂತಿಗೆ ನಲ್ವತ್ತ್ ದಿನ ಆತಿದ್ದಂಗೆ ಐದ್ ಇಲ್ಲರೆ ಏಳ್‌ಜನ ಹೆಣ್ಮಕ್ಕ ಅವುಳ್‌ನ ದೇವಸ್ಥಾನಕ್ಕೆ ಕರ್ಕಂಡ್ ಹೋದವೆ. ಬಾಕನ ಬಾಣಂತಿ ಒಂದ್ ಬಿಂದಿಗೆ ನೀರ್ ತಂದ್ ಗಂಗೆ ಪೂಜೆ ಮಾಡ್ದೆ.

ಇದೆಲ್ಲಾ ಆದ ಮೇಲೆ ಐದ್ ಇಲ್ಲರೆ ಏಳ್ ಹೆಣ್ಮಕ್ಕ ಬಾಣಂತಿ ಮತ್ತೆ ಕೂಸುನ ಗಂಡನ ಮನೆಗೆ ಕರ್ಕಂಡ್ ಹೋದವೆ. ತೊಟ್ಲು ಸಹಿತ ಹೋಗಿ ಅಲ್ಲಿ ಅಂಗಳಲಿ ನಿತ್ತವೆ. ಆಗ ಆ ಮನೆ ಯಜಮಾನ್ತಿ ಕುರ್ದಿ ನೀರ್ ತಂದ್ ಬಾಣಂತಿ ಮತ್ತೆ ಕೂಸುನ ಹಣೆಗೆ ಕುರ್ದಿ ನೀರ್‌ದ್ ಬೊಟ್ಟು ಹಾಕಿ ದೃಷ್ಟಿ ತೆಗ್ದ್ ಕಾಲ್ ಬುಡಕ್ಕೆ ನೀರ್‌ನ ಹೊಯ್ದವೆ. ಮತ್ತೆ ಕೂಸುನ ಸುರೂಗೆ ಮನೆ ತುಂಬಿಸಿಕಂಡವೆ. ಮತ್ತೆ ಬಾಣಂತಿ ಒಳಗೆ ಹೋಗಿ ಮನೆದೇವ್ರಿಗೆ ಅಕ್ಕಿ ಹಾಕಿ ಹಿರಿಯರ ಕಾಲಿಗೆ ನಮಸ್ಕಾರ ಮಾಡ್ದೆ. ಕೂಸುನ ಸುರೂಲಿ ನೆಲ್ಲಕ್ಕಿ ಕೆಳಗೆ ಇಸಿದ ತೊಟ್ಲುಲಿ ಮಲ್ಗಿಸಿದ್ದವೆ. ಅಂದೇ ಕಾರೋಣಕ್ಕೆ ಇಸುವ ಕಾರ್ಯಕ್ರಮ ಉಟ್ಟು.

ಸನ್ನಿಪಾತ: ಬಾಣಂತಿಗೆ ಶೀತಂದ ಬರುವ ಜರ. ಇದರ್ನ ಚೆನ್ನಿ ಜರತ ಹೇಳಿವೆ. ಜರ ಹೆಚ್ಚಾಗಿ ತಲೆಗೆ ಏರಿ ಬುದ್ಧಿ ಭ್ರಮಣೆ ಬಂದಂಗೆ ಆಡಿವೆ. ಇದ್ ಅಪಾಯದ ಜರ. ಹಂಗಾಗಿ ಬಾಣಂತಿಗೆ ಯಾವ ಕಾರಣಕ್ಕೂ ಶೀತ ಆಕೆ ಬತ್. ಕಷಾಯ ಕುಡ್ದ ಮೇಲೆ ಅಂದರೆ ಹನ್ನೆರ್ಡ್ ದಿನಗಳ ಮುಟ್ಟ ಊಟ ಮಾಡಕನ ಒಂದು ಗುಡ್ಕು ಮಾತ್ರ ನೀರ್ ಕುಡಿಯಕ್!

ಒಳ್ಳೆಮೆಣ್ಸ್ ಉಂಡೆ: 1 ಕೆ.ಜಿ. ಮೆಣ್ಸ್‌ನ ಹೊಡಿಮಾಡಿ ಅದ್ಕೆ ಬೆಲ್ಲ ಮತ್ತೆ ತುಪ್ಪ ಸೇರ್ಸಿ ಸಣ್ಣ ಸಣ್ಣ ಉಂಡೆ ಮಾಡಿಕಂಡ್ ಬೆಳಿಗ್ಗೆ ಆರ್ ಗಂಟೆಗೆ ಒಂದ್ ಉಂಡೆ ತಿಂದ್ ಮಲ್ಗೊಕು. ಮೈಯೆಲ್ಲಾ ಉರಿ ಎದ್ದದೆ. ಮತ್ತೆ ಮೀಯೊಕು. ಅದೇ ರೀತಿ ಸಾಯಂಕಾಲ ನಾಕ್ ಗಂಟೆಗೆ ಮತ್ತೊಂದ್ ಉಂಡೆ ತಿಂದ್ ಮಲ್ಗಿ ಮತ್ತೆ ಮೀಯೊಕು. ಹಿಂಗೆ ತಿಂದರೆ ಶೀತದ ಅಂಶ ಶರೀರಲಿ ಇರ್ದುಲೆ. ಲಾಚಾರ್ ಆಕಂಡಿದ್ದವೆ. ನಲ್ವತ್ತ್ ದಿನ ಕಳ್ದ ಮೇಲೆ 'ಎಳ್ಳುಮೆಂತೆ' ತಿನ್ನೊಕು. ಹಂಗೆ ತಿಂದರೆ ಬಾಣಂತಿನ

ಶರೀರ ಹಿಂದೆ ಇದ್ದಂಗೆ ಲಾಯ್ಕ ಇದ್ದದೆ.

**ಕೊಟ್ಟಿಗೆ ಕೊಡ್ದು:** ಕೂಸು ಕಂಕ್‌ಣಿ ಮೊಗ್ಟ್, ಹೊಟ್ಟೆ ಎಳ್ಡ್, ಹರ್ದಾಡಿ, ಕುದ್ದು, ಎದ್ದ್ ನಡೆಕೆ ಶುರು ಮಾಡ್ದೆ. ಕೆಲವು ಮಕ್ಕ ಕೊಟ್ಟಿಷ್ಟ್ ತಿಂದವೆ. ತಿಂದಷ್ಟ್ ಸಾಲ್ದುಲೆ. ಕೂಸು ಹಿಂಗೇಕೆ ತಿಂದದೆತ ಮನೆಯವುಕೆ ತಲೆ ಬೆಚ್ಚ ಆದೆ. ಹಂಗಿರಕನ ಆ ಕೂಸು ಕುಸಿಪಟ್ಟ್ ಏನೇನ್ ತಿಂದದೆಯೋ ಅಂತದರೆಲ್ಲ ತಯಾರ್ ಮಾಡಿ ಕೊಟ್ಟಿಗೆಗೆ ಕೂಸುನ ಕರ್ಕಂಡ್ ಹೋಗಿ ಎಲೆ ತುಂಬ ಊಟ ಹಾಕಿವೆ. ಕೂಸು ತಿಂದೆಲ್ಲಾ ಆದ ಮೇಲೆ ಅಲ್ಲಿಂದ ಮುಂದೆ ಕಮ್ಮಿ ಊಟ ಮಾಡ್ದೆಗಡ. ಇದರ್ನ ಕೊಟ್ಟಿಗೆ ಕೊಡ್ದುತ ಹೇಳಿವೆ.

ಮತ್ತೆ ಕೆಲವ್ ಹೇಳಿವೆ– ಕೂಸು ಯಾವ್ದೆಲ್ಲಾ ತಿಂದದೆನೋ ಅದರ್ನೆಲ್ಲಾ ಮಾಡಿ ಕೊಡಿ ಬಾಳೆಲೆಲಿ ಊಟ ಹಾಕಿ ಮನೆ ಎದ್ರ್ ಮೆಟ್ಲ್‌ಲಿ ಕೂರ್ಸಿ ಊಟ ಮಾಡ್ಸಿವೆ. ಹಿಂಗೆ ಊಟ ಮಾಡ್ದ ಮೇಲೆ ಅದೇ ಎಲೆನ ಕಡ್ಪದಾಟಿ ತಿರ್ಗಿ ನೋಡದೆ ಮನೆ ಒಳಗೆ ಹೋಕು. ಊಟ ಮಾಡ್ದ ಎಲೆನ ಮೂರು ದಾರಿ ಸೇರುವಲ್ಲಿ ಹಾಕುದು ಒಂದ್ ಕ್ರಮ ಉಟ್ಟುತ ಹೇಳಿವೆ.

**ಹೊಕ್ಕುಳುಬಳ್ಳಿ:** ಕೂಸುದು ಹೊಕ್ಕುಳ ಬಳ್ಳಿ ಒಣ್‌ಂಗಿದ ಮೇಲೆ ಬಿದ್ದದೆ. ಹಂಗೆ ಬಿದ್ದ ಮೇಲೆ ಅದರ್ನ ಸಿಕ್ಕಿದ ಕಡೆಲೆಲ್ಲ ಬಿಸಾಕುದುಲೆ. ಅದೊಂದ್ ಪವಿತ್ರ ವಸ್ತು. ಹಂಗಾಗಿ ಕೆಲವ್ ಅದರ್ನ ಫಲ ಬರುವ ಮರದ ಅಡಿಲಿ ಗುಂಡಿ ತೆಗ್ಡ್ ಹಾಕಿವೆ. ಕೆಲವ್ ಹರಿವ ನೀರ್‌ಲಿ ಬುಟ್ಟವೆ. ಮತ್ತೆ ಕೆಲವ್ ಇಸ್ಕೂಲ್ ಮೆಟ್ಟ್ ಕರೆಲಿ ಹಾಕಿವೆಗಡ.

**ಹಲ್ಲ್ ಕೀಳ್ದು:** ಹಳೆ ಹಲ್ಲ್ ಅಲ್ಲಾಡಿಕೆ ಸುರು ಆತಿದ್ದಂಗೆ ನೂಲುನ ಜೋಡಿ ಮಾಡಿ ಅಲ್ಲಾಡುವ ಹಲ್ಲ್ ಬುಡಕ್ಕೆ ಗಟ್ಟಿಯಾಗಿ ಕಟ್ಟಿವೆ. ಆ ಕೂಸು ಹೋದಲ್ಲಿ ಬಂದಲ್ಲಿ ಆ ನೂಲುನ ಎಳ್ಕಂಡೇ ಇದ್ದದೆ. ಹಂಗೆ ಕಿತ್ತ್ ಬಂದರೆ ಅದರ ಪುಣ್ಯ. ಹಂಗೆ ಬರದೇ ಇದ್ದರೆ ಎಲಡಿಕೆ ಕುಟ್ಟುವ ಕಲ್ಲ್‌ಲಿ ಕುಟ್ಟಿ ಕುಟ್ಟಿ ಎದ್ರ ಹಲ್ಲ್‌ನ ತೆಗೆತಿದ್ದ ಕಾಲ ಅಂದಿತ್ತ್. ಹಂಗೆ ಕಿತ್ತ ಹಲ್ಲ್‌ನ ಸೆಗ್‌ಣಿನ ಉಂಡೆ ಮಾಡಿ ಅದ್ರೊಳಗೆ ಹಲ್ಲ್‌ನ ಇಸಿ ತಲೆ ಸುತ್ತ ತಂದ್ "ಅಜ್ಜಿ ಅಜ್ಜಿ ನನ್ನ ಹಳೆ ಹಲ್ಲ್‌ನ ನೀನ್ ತಕಂಡ್ ನಿನ್ನ ಹೊಸಾ ಹಲ್ಲ್‌ನ ಕೊಡು"ತ ಹೇಳಿ ಎದ್‌ರ ಅಂಗಳಲಿ ನಿತ್ತ್ ಮನೆ ಮಾಡ್‌ಂದ ಹಿಂದಕ್ಕೆ ಬಿಸಾಕ್‌ತಿದ್ದೊ. ಅದಿಲ್ಲರೆ ಕಲ್ಲ್ ಕೆಳಗೆ ಹಾಕ್‌ತಿದ್ದೊ. ಇದ್ ಪಂಡ್ ಕಾಲದ ವಿಚಾರ.

**ಕುದೊಲು ತೆಗೆದು:** ಕೂಸುದು ಕುದೊಲುನ ಸುರೂಗೆ ಕತ್ರುಸುದು ಸೋದರ ಮಾವನ ಕೆಲ್ಸ. ಸೋದರ ಮಾವ ಶಾಸ್ತ್ರಕ್ಕೆ ಕೂಸುದು ಕುದೊಲುನ ಕತ್ರಿಸಿ ಅದರ್ನ ಕಂಚ್‌ನ ಬಟ್ಲ್‌ಲಿರುವ ಹಾಲಿಗೆ ಹಾಕಿದೆ.

# ಅರೆಭಾಷಿಕರ ಪ್ರೌಢಾವಸ್ಥೆ ಮತ್ತೆ ಮದುವೆ ಆಚರಣೆಗ

– ಡಾ. ಕೋರನ ಸರಸ್ವತಿ ಪ್ರಕಾಶ್

ಸಂಸ್ಕೃತಿ ಒಂದು ಜನಾಂಗದ, ಜನ ಸಮುದಾಯದ ಒಟ್ಟು ಸಾಧನೆಗಳ್‌ನ ಒಳಗೊಂಡಿದ್ದದೆ. ಒಂದು ಜನಾಂಗದ ವ್ಯಕ್ತಿಗಳ್ನ ತಮ್ಮ ವ್ಯಕ್ತಿಗತ ಮತ್ತೆ ಸಾಮಾಜಿಕ ಜೀವನಲಿ ಗಳಿಸಿದ ಎಲ್ಲಾ ಅಂಶಗಳ್‌ನ ಆ ಜನಾಂಗ್ ಸಂಸ್ಕೃತಿ– ಅಭಿವ್ಯಕ್ತಿಸಿದೆ. ಈ ನಿಟ್ಟ್‌ಲಿ ತಮ್ಮದೇ ಆದ ಅರೆಭಾಷೆನ ಮಾತಾಡುವ ತಮ್ಮದೇ ಆದ ರೂಢಿ ಸಂಪ್ರದಾಯ, ಉಡುಗೆ ತೊಡ್‌ಗೆ ಆಹಾರ ಪದ್ಧತಿ, ಕುಟುಂಬ ವ್ಯವಸ್ಥೆನ ಹೊಂದಿದ ಗೌಡರ ಸಂಸ್ಕೃತಿ ವಿಶಿಷ್ಟವಾದದ್ದು.

ಗೌಡರ್ ವರ್ಷದ ಎಲ್ಲಾ ತಿಂಗಳ್‌ಗಳ್‌ಲಿ ಆಚರಿಸುವ ಹಬ್ಬ ಹರಿದಿನಗ ಅಚರಣೆಗ ಒಂದು ಕಡೆ ಮುಖ್ಯ ಆದರೆ ಹುಟ್ಟ್‌ಂದ ಸಾವುನವರೆಗ್‌ನ ಆಚರಣೆಗ ಇನ್ನೊಂದು ರೀತಿಲಿ ಮುಖ್ಯ : ಇಂದ್ ನಾನ್ ಪ್ರೌಢಾವಸ್ಥೆ ಮತ್ತೆ ಮದುವೆ ಆಚರಣೆಗಳ ಕೆಲವು ಪ್ರಮುಖ ಅಂಶಗಳ್‌ನ ನಿಮ್ಮ ಮುಂದಿಟ್ಟನೆ.

ಬಾಲ್ಯಾವಸ್ಥೆಂದ ಪ್ರೌಢಾವಸ್ಥೆಗೆ ಬಾಕನ ಹೆಣ್ಣ್‌ಗಂಡ್‌ಗಳಲಿ ಗಂಡ್‌ನ ವಿಶೇಷವಾಗಿ ಗುರುತಿಸುದಿಲ್ಲೆ. ಗೂಡೆನ ಸಾಂಪ್ರದಾಯಿಕವಾಗಿ ಗುರುತಿಸುವ ಕ್ರಮ ನಮ್ಮಲ್ಲುಟ್ಟು, ಹೈದಗಳ್‌ನ ಹಂಗೇತೇಳಿ. ತೀರಾ ಕಡೆಗಣಿಸುದಿಲ್ಲೆ. ಹಿಂದೆ ಹೈದಂಗಳಿಗೆ 16 ವರ್ಷ ಆಕನ ಊರ ಕ್ಷೌರಿಕನ ಕರ್‌ಸಿ ಗಣಪತಿಗೆ ತುದಿಬಾಳೆ ಎಲೆಲಿ ಅಕ್ಕಿ ಕಾಯಿ ಹಣ್ಣು ಹಂಪಲು ಇಟ್ಟ್ ವಿಶೇಷವಾಗಿ ಪ್ರಾರ್ಥಿಸಿ ಕ್ಷೌರಿಕ ತಲೆಗೂದಲನ್ನ ತೆಗೆಸುವ ಕಾರ್ಯ ಮಾಡ್‌ತ್ತಿದ್ದು. ಈ ಕ್ರಿಯೆ ಮಾಡುದರ ಮೂಲಕ ಹೈದ ಗಂಡಸಾಗಿ ಜವಾಬ್ದಾರಿನ ಹೊರಿಕೆ ಸಿದ್ಧತೇಳಿ ತೋರ್‌ಸದರೊಂದಿಗೆ ದೈಹಿಕ ಬದಲಾವಣೆನ ಅರಿವ್‌ನ ಮೂಡಿಸುವ ಪ್ರಯತ್ನ.

ಇನ್ ಗೌಡರಲ್ಲಿ ಹೆಣ್ಣು ಬಾಲ್ಯಂದ ಯೌವನಕ್ಕೆ ಕಾಲಿಡುವ ಘಟ್ಟ ಪ್ರಮುಖವಾದದ್ದು. ಈ ಬದಲಾವಣೆಗೆ ಹೆಚ್ಚ್ ಸ್ಪಂದಿಸುವ ಗೌಡ್‌ಗ ಇದನ್ನ ಶುಭ ಸೂಚಕ/ ಸೂತಕ ತೇಳಿಭಾವಿಸುವೆ. ಸೂತಕತೇಳ್‌ರೆ ಮೈಲಿಗೆ, ಮುಟ್ಟಬಾರದು ಎಂದರ್ಥ. ಈ ಸೂತಕ ಮನ್‌ಸ ಅನಾಗರಿಕ ಅವಸ್ಥೆಂದ ನಾಗರಿಕ ಅವಸ್ಥೆನ ಮುಟ್ಟಿ, ಸಂಸ್ಕೃತಿಕರಣಗೊಂಡ ಸಂದರ್ಭಲಿ ಬಂದ ಆಚಾರಗ

ಗೂಡೆ ಮೈನೆರೆಯುವುದು ಜೈವಿಕ ಬೆಳವಣಿಗೆಯ ಸಹಜ ಪ್ರಾಕೃತಿಕ ನಿಯಮವಾದರ್‌ಂದ ಇದ್ ಶುಭಸೂಚಕ ಗೂಡೆ ಶುರುಗೆ ಮುಟ್ಟಾಕನ ಮಾಡುವ ಆಚರಣೆಗಳ್‌ನ ಸೂಕ್ಷ್ಮ ಆಗಿ ನೋಡ್‌ಕನ ಅವಳ್‌ನ ಲೌಕಿಕ ಪ್ರಪಂಚಕ್ಕೆ ಪರಿಚಯಿಸುವ ಆಚರಣೆಗಳಲ್ಲಿ ಒಂದು. ಮೈನೆರೆದ ಗೂಡೆನ ಕೂಡಲೇ ಸಾಮಾನ್ಯ ಬದ್‌ಕಿಗಿಂತ ಬೇರೆಯಾಗಿಸುವೆ. ಫಲಕೊಡುವ ಅಥವಾ ಹಾಲು ಬರುವ ಮರದ ಬುಡಲಿ ಕೂರ್‌ಸಿವೆ. ಇಲ್ಲಿ ಫಲವಂತಿಕೆನ ಸಂಕೇತವಾಗಿ ಆಕೆ ಫಲವತಿಯಾಗುವುದಕ್ಕೆ ದೈಹಿಕವಾಗಿ ಸಿದ್ಧ ಎಂಬುದನ್ನ ಸೂಚಿಸಿದೆ. ಮುಂದಿನ ಆಚರಣೆಗಳ್‌ಲಿ ಮಡಿವಾಳ್ತಿಯ ಪಾತ್ರ ಹಿರಿದ್. ಇಲ್ಲಿ ಅವಳು ಅಂಗಳಲಿ ಚೌಕಾಕಾರದ ನಾಲ್ಕುಗೆರೆನ ಎಳ್‌ದ್ ಮಧ್ಯಲಿ ವೃತ್ತ ಬರೆವ ಕ್ರಿಯೆ. ಗರಿಕೆ ಹುಲ್ಲಿನಿಂದ ಎಣ್ಣೆ ಹಚ್ಚುವ ತಲೆಗೆ ನೀರ್ ಸುರಿವ, ಮಡಿಬಟ್ಟೆ ಉಡಿಸುವ, ಹೊರ ಮನೆಲಿ ಕುಳ್ಳಿರುಸುವ ಕಾರ್ಯಗ ಅವಳ ಬದ್‌ಕ್‌ನ ಬದಲಾವಣೆ ಘಟ್ಟನ ಹಂಗೆ ನಂತರದ ಜೀವನ ಕ್ರಮದ ಬದಲಾವಣೆನ ಸೂಚಿಸಿದೆ. ಹಂಗೆನೆ ಋತುಶಾಂತಿನ ಸಂದರ್ಭಲಿ ವೀಳ್ಯದ ಎಲೆ ತಿನ್ನಿಸಿ ಉಗಿಸುವ ಬಳೆದಾಟಿಸುವ, ಒನಕೆ ದಾಟಿಸುವ ಕ್ರಿಯೆಗಳು, ಗಂಗೆಪೂಜೆ ಹಿಂಗೆ ನಡೆವ ಎಲ್ಲಾ ಆಚರಣೆಗ ಗೂಡೆ ಮಾನಸಿಕ ಆಗಿ ಹಂಗೆ ದೈಹಿಕಾಗಿ ಪ್ರೌಢವಸ್ಥೆಯ ನಂತರ ಗೃಹಿಣಿಯಾಗುವ ಸುರುನ ತಯಾರಿನಂಗೆ ಇದ್ದದೆ. ಇನ್ ಮುಟ್ಟಿನ ಸಂದರ್ಭಲಿ ಅನೇಕ ನಿಷೇದಗ ಕೂಡ ಉಟ್ಟು. ಒಟ್ಟಾಗಿ ಪ್ರೌಢಾವಸ್ಥೆಗೆ ಬಂದ ಹೆಣ್ಣಿನ ಎಲ್ಲಾ

ಆಚರಣೆಗ ಹೊರಪ್ರಪಂಚಕ್ಕೆ ಮದುವೆಗೆ ತಯಾರಾದ ಗೂಡೆ ಇಂಥವರ ಮನೆಲಿ. ಉಟ್ಟುತೇಳುದನ ಪರಿಚಯಿಸಿಕೆ ಕೂಡ ಇದ್ ಸಹಕಾರಿ.

ಇನ್ ಗೌಡ್‌ರ ಮದುವೆ ಆಚರಣೆಗೆ ಸಂಬಂಧಿಸಿದಂಗೆ ಹೇಳುದಾದರೆ ಮಾನವ ಸಮಾಜದ ಮೂಲಭೂತ ಅವಶ್ಯಕತೆನ ಪೂರೈಸಿಕೆ ಮದುವೆ ಅನಿವಾರ್ಯ ವ್ಯವಸ್ಥೆ. ಗೌಡ್‌ಗ ಮದುವೆನ ಒಂದು ಪವಿತ್ರ ಕಾರ್ಯ, ಮಾನವ ಬದ್‌ಕ್‌ನ ಸಾರ್ಥಕತೆನ ಕಂಡ್‌ಕಂಬಕೆ ಜೀವನಾವರ್ತನದ ಮುಖ್ಯ ಮಜಲು ತೇಳಿ ಭಾವಿಸೊಳೊ. ಈ ಕಾರ್ಯಕೆ ಪವಿತ್ರ ಸ್ಥಾನ ಕಲ್ಪಿಸಿ ಅತ್ಯಂತ ಶ್ರದ್ಧೆಂದ ಅನೇಕ ಶಾಸ್ತ್ರ–ಪದ್ಧತಿನ ಅಳವಡಿಸಿಕಂಡ್ ವ್ಯವಸ್ಥಿತವಾಗಿ ಏರ್ಪಡಿಸಿವೆ. ಮದುವೆಗೆ ವಿಶೇಷ ಮಹತ್ವನೀಡಿ, ಸಾಂಪ್ರದಾಯಿಕ ರೀತಿಲಿ ಮದುವೆನ ನೆರವೇರಿಸಿಕೊಂಡು ಬಂದವೆ. ಮನೆತನದ ಗೌರವನ ಮದುವೆ ಪ್ರತಿನಿಧಿಸಿದೆ.

ಗೌಡರ ಮದುವೆಯ ಮೊದಲ ಹಂತ ಶುರುವಾದ 'ಬಳಿ' ಅಥವಾ 'ಗೋತ್ರ'ದ ಆಯ್ಕೆಲಿ ಪಿತೃಪ್ರದಾನವಾದ ಗೌಡ ಸಮಾಜಲಿ 'ಗೋತ್ರ' ಅಪ್ಪಂದ ಮಂಞಂಗೆ ಬಂದದೆ. ಸ್ವಗೋತ್ರ ಇಲ್ಲಿ ನಿಷಿದ್ಧ. ಗೋತ್ರದ ಆಯ್ಕೆ ಹೆಣ್ಣಿನ ಆಯ್ಕೆನ ಸಮರ್ಥಿಸಿದೆ. ಆರ್ಥಿಕ ಪರಿಸ್ಥಿತಿನ, ಪ್ರತಿಷ್ಠೆ, ರೂಪ ಎಲ್ಲ ಸರಿ ಇದ್ದರೂ ಗೋತ್ರನೇ ನಿರ್ಣಾಯಕ ಪಾತ್ರವಹಿಸಿದೆ. 18 ಗೋತ್ರಗ ಇದ್ದ್ ತಮಗೆ ಸರಿಹೊಂದುವ ಗೋತ್ರನ ಆಯ್ಕೆ ಮಾಡಿಕಂಡವೆ. ಮದುವೆಯ ಮೊದಲ ಶುಭಕಾರ್ಯನ 'ಹತ್ತು ಕುಟುಂಬ 18 ಗೋತ್ರ ದೇವಸಭೆ ಸಮಸ್ತರನ್ನು ಕೇಳಿ' ಎಂದ್ ಪ್ರಾರಂಭಿಸಿ ದೇವರದೀಪಕ್ಕೆ ಅಕ್ಕಿ ಹಾಕಿ ಕುಲದೇವರಿಗೆ ಕೈ ಮುಗ್‌ದವೆ, ಮತ್ತೆ ಪ್ರತಿ ಶಾಸ್ತ್ರಲು ಈ ನುಡಿನ ಹೇಳ್‌ವೆ.

ಗೂಡೆ ನೋಡುವ ಶಾಸ್ತ್ರಲಿ ಎರಡು ಕಡೆಯುವುದು ಬೇಕಾದ ಹಿತ ಚಿಂತಕ ಇದ್ದದೆ. ಇವ ಎರಡು ಕುಟುಂಬಗಳ ಮಧ್ಯೆ ಸಮಾಲೋಚನೆ ಮಾಡ್‌ದೆ. ಇಂವ ಎರಡು ಮನೆಯವರ ಮಧ್ಯೆ ಸಮತೋಲನ ಕಾಪಾಡಿಕಂಡದೆ.

ಗೌಡರ ಮದುವೆ ದಿನದ ಮತ್ತೆ ಮೂಹೂರ್ತದ ನಿರ್ಧಾರ ಆದು ಐನ್‌ಮನೆನ ಕೈಯಾಲೆಲಿ ಕೈಯಾಲೆ ಒಳಗೂ ಅಲ್ಲದ ಹೊರಗೂ ಅಲ್ಲದ ಮಧ್ಯದ ಸ್ಥಳ ಮಧ್ಯವರ್ತಿಯ ಹಾಗೆ ಸಮತೋಲನದ ಜಾಗ ಹೊರಗಿನವರ್‌ನ ಒಳಗೆ ಬರಮಾಡಿಕೊಳ್ಳುವ ಮೊದಲು ಕುಳ್ಳಿರಿಸುವ ಜಾಗ. ಅಂದರೆ ಕೈಯಾಲೆ ಸಂಸ್ಕೃತಿಯ ಅಂತರಂಗ ಮತ್ತು ಬಹಿರಂಗಗಳ ಮಧ್ಯದ, ಜಾಗ, ಗೂಡೆ ಇನ್ನೂ ಮನೆ ಒಳಗೆ ಬಂದಿರುದಿಲ್ಲೆಯಾದ ಕಾರಣ ಗೂಡೆನ ಕಡೆಯವರ ಹತ್ರ ಹೈದನ ಕಡೆವು ಕೈಯಾಲೆಲಿ ಮಾತ್‌ಮುಗ್‌ಸಿವೆ.

ಗೂಡೆನ ನೋಡಿ ಗೊತ್ತ್‌ಪಡಿಸಿದ ಮೇಲೆ. ಮನೆನೋಡುದು ಸೋದರ ಮಾತಾಡುಸುದು ಎಲ್ಲಾ ಮುಗ್‌ದ್ ವೀಳ್ಯಶಾಸ್ತ್ರಂದ ಕಾರ್ಯ ಪ್ರಾರಂಭ ಆದೆ. ಗೌಡರ್‌ಲಿ ವೀಳ್ಯಕ್ಕೆ ಅತ್ಯಂತ ಪವಿತ್ರ ಸ್ಥಾನ ಉಟ್ಟು. ಮದುವೆಗೆ ಮುನ್ನ ನಿಶ್ಚಯದ ದಿನದಂದ್ ಸಾಂಪ್ರಾದಾಯಿಕವಾಗಿ ಹೈದ ಮತ್ತೆ ಗೂಡೆನ ಕಡೆಯವು ವೀಳ್ಯವನ್ನು ಪರಸ್ಪರ ವಿನಿಮಯ ಮಾಡಿಕಂಡ್ ಮದುವೆ ಕಾರ್ಯನ ನಿರ್ಧರಿಸುವೆ. ಆಮೇಲೆ ಲಗ್ನಪತ್ರಿಕೆ ಬರ್‌ಸುವೆ ಇದರಲ್ಲಿ ಸಾಧಾರಣವಾಗಿ ಇಂಥ ಮನೆಂದ ಇಂಥ ಮನೆಗೆ ಇಂಥವರ ಅನುಮತಿ ಮೇರೆಗೆ ಇವರ ಮಗಳ್‌ನ ಇಂಥವರ ಮಂಙಂಗೆ ಕೊಡುವಂತೆ ಒಪ್ಪಿ ಬರೆದ ಕರಾರು ಪತ್ರವೇ ಪ್ರಮುಖ, ಇದಕ್ಕೆ ಲಗ್ನಪತ್ರಿಕೆತೆಳ್ವೆ, ಈ ಕರಾರುಪತ್ರಕ್ಕೆ ಬಂದ ಮಹನೀಯರ್ ರುಜು ಮಾಡುವೆ.

ಆನಂತರ ವೀಳ್ಯಕೊಟ್ಟು ಆಪ್ತರಿಗೆ, ಬಂಧುಗಳಿಗೆ ಆಮಂತ್ರಣ ನೀಡುವೆ, ವಾಲಗದವುಕೆ, ಮಡಿವಾಳದವರಿಗೆ ವೀಳ್ಯಕೊಟ್ಟವೆ. ಮದುವೆಗೆ ಚಪ್ಪರ ಹಾಕುವುದರಿಂದ ಮದುವೆ ಸಂಭ್ರಮ ಶುರು ಆದೆ. ಇದಕ್ಕೆ ಸೀತಾವಳಿ ಚಪ್ಪರತ ಹೇಳುವೆ. ಮನೆಯ ಮುಂಭಾಗದ ಚಪ್ಪರ 12 ಕಂಬಗಳ್‌ಂದ ಪ್ರತ್ಯೇಕವಾಗಿದ್ದದೆ. ಇದರ್‌ಲಿ ಹಾಲು ಬರುವ ಕಂಬ ನಡುವಿನಲ್ಲಿ ಇನ್ನುಳಿದ ಮೂರು ಕಂಬಗ ಬ್ರಹ್ಮ, ವಿಷ್ಣು, ಮಹೇಶ್ವರನ ಸಂಕೇತವಾಗಿ ಹಾಕುವೆ. ಈ 4 ಕಂಬಗಳ ಸುತ್ತ 8 ಕಂಬಗ ತ್ರಿಮೂರ್ತಿಗಳ ಅಷ್ಟದಿಕ್ಪಾಲಕರಾಗಿ ಇದ್ದವೆತ ಹಿರಿಯರ್ ಹೇಳುವೆ. 4 ಕಂಬಗಳ ಒಳಗಿನ ಜಾಗನ 'ದೇವಸಭೆ'ತೇಳಿ ಕರ್‌ದವೆ. ಮಡಿವಾಳ ಮೇಲ್ಕ್‌ಟ್ಟ್‌ನ ಕಟ್ಟಿದೆ. ಆಮೇಲೆ ಈ ಚಪ್ಪರನ 'ಸೀತಾವಳಿ ಚಪ್ಪರ'ತೇಳಿ ಕರ್ದವೆ. ಈ ಚಪ್ಪರದ ಶ್ರೇಷ್ಠತೆನ ಕಾಪಾಡಿಕೆ "ಇದರ ಅಡಿಲಿ ಗುಡ್ಸುದಾಗಲಿ, ಚಪ್ಪಲ್ ಹಾಕುದಾಗಲಿ, ಉಗಿಯೊದಾಗಲಿ, ಬ್ಯಾಡದ ಮಾತಾಡ್ದು ನಿಷಿದ್ಧ".

ಶಾಸ್ತ್ರದ ಸುರೂಗೆ ಸೋದರಮಾಂವ, ಕಾಸ್ತಾಳಿ ಕಟ್ಟುವೆ. ಈ ಕಾಸ್ತಾಳಿನ 'ಮೂರ್ತ ಮಣಿ' ತನು ಹೇಳುವೆ. ಮುಖ್ಯಸ್ಥ ಹತ್ತುಕುಟುಂಬ 18 ಗೋತ್ರದ ಒಕ್ಕಣೆ ಹೇಳಿ ಸೋದರಮಾಂವ ಕಾಸ್ತಾಳಿ ಕಟ್ಟುವೆ. ಆಮೇಲೆ ನೆಲ್ಲಕ್ಕಿ ದೀಪಕ್ಕೆ ಅಕ್ಕಿ ಹಾಕಿ ಮನೆನ ಅಟ್ಟಕ್ಕೆ ಅಕ್ಕಿ ಹಾಕಿ, ಮುಡಿಪುಗೆ ಅಕ್ಕಿ ಹಾಕುವೆ. ಈ ಹೊತ್ತಿಗೆ ಕಂಚುಮಿ ಮತ್ತು ಅಡೋಳಿನು ಒಟ್ಟಿಗೆ ಇದ್ದವೆ. ಆ ಮೇಲೆ ಎಣ್ಣೆ ಅರಿಶಿನ ಶಾಸ್ತ್ರ ನೆಲ್ಲಕ್ಕಿ ಅಡಿಲು ಮೇಲ್ಕಟ್ಟಿನ ಅಡಿಲಿ ನಡ್ದದೆ ಸೋಬಾನೆ ಹಾಡ್‌ಗ ಶಾಸ್ತ್ರದುದ್ದಕ್ಕೂ ಇದ್ದದೆ.

ಆಮೇಲೆ ಹೈದಂಗೆ ಕ್ಷೌರಿಕ ಕೌರ ಮಾಡ್‌ದೆ ಮತ್ತೆ ಗಂಗೆಪೂಜೆ, ಆರತಿ, ದೃಷ್ಟಿ ತೆಗೆಯುವುದು ನಡ್‌ದದೆ. ಹಂಗೇನೆ ಹಸೆಬರೆಯುವ ಶಾಸ್ತ್ರ, ಹಾಲು ತುಪ್ಪ ಶಾಸ್ತ್ರ, ಮಧುರಂಗಿ ಶಾಸ್ತ್ರ, ಬಣ್ಣ ಬಂಗಾರದ ಪೆಟ್ಟಿಗೆ ತುಂಬುಸುವುದು ಸೆರಗ್‌ನ

ಹಣ ಕಟ್ಟುವುದು ಪೆಟ್ಟಿಗೆ ತುಂಬುಸುವುದು ನಡ್‌ದದೆ.

ಹೈದನ ಕಡೆವು ದಿಬ್ಬಣ ಬಾಕನ ಮದುವಣ್ಣಂಗೆ ಗೂಡೆನ ಅಮ್ಮ ಹಾಲು ಕೊಟ್ಟತೆ, ಮುಂದೆ ಸಾಣೆಕಲ್ಲು ಗಂಧದ ಕೊರಡು ಕೊಡುದು, ವೀಳ್ಯಕೊಡುದು ಬಣ್ಣ ಬಂಗಾರ ಕೊಡುದು ಇಲ್ಲಿ ಬಣ್ಣ ಬಂಗಾರಲಿ ಓಲೆ, ಮೂಗುಬೊಟ್ಟು ಕಾಲುಂಗುರ, ಡಾಬು, ಧಾರೆಸೀರೆ, ಮುಸುಕಿನವಸ್ತ್ರ ಮತ್ತೆ ಹಿಂಗಾರನ ಕೊಟ್ಟವೆ. ಹಂಗೆನೆ ನೆಲ್ಲಕ್ಕಿ ಅಡಿಲಿ ಹೆಣ್ಣು ಹುಡುಕುವ ಶಾಸ್ತ್ರನು ಕೂಡ ರಂಜನೀಯವಾಗಿ ಇದ್ದದೆ. ಮತ್ತೆ ತೆರವಿನ ಹಣ ಕಟ್ಟುದು, ಸೋದರಮಾವ ಸೆರಗಿನ ಹಣ ಕಟ್ಟುದು ನಡ್‌ದದೆ. ಮುಂದೆ ಧಾರೆ ನಡ್‌ದದೆ. ಧಾರೆಲಿ 2 ವಿಧ, ಬ್ರಾಹ್ಮಣ ಧಾರೆ ಮತ್ತು ಬಂಟಧಾರೆ, ಬ್ರಾಹ್ಮಣನ ಸಮ್ಮುಖಲಿ ನಡೆವ ವಿವಾಹನ 'ಬ್ರಾಹ್ಮಣಧಾರೆ' ತ ಹೇಳುವೆ. ಗೌಡರಲ್ಲಿ ವಧುವಿನ ತಂದೆಯೇ ಧಾರೆ ಎರೆಯುವ ಕ್ರಮ ಉಟ್ಟು. ಇದನ್ನ ಬಂಟಧಾರೆತ ಕರ್‌ದವೆ. ಗೂಡೆನ ಸೋದರಮಾವ ನೆಲ್ಲಕ್ಕಿ ಅಡಿಲಿ ಮಧಮಗಳಿಗೆ ಸೆರಗಿನ ಹಣಕಟ್ಟಿ ಮೇಲ್ಕಟ್ಟಿನಡಿಗೆ ವಧುನ ಎತ್ತಿ ತಂದ್ ಮೇಲ್ಕಟ್ಟಿನಡಿಲಿ ನಿಲ್ಲುಸುವೆ. ಆ ಮೇಲೆ 1 ಚೆಂಬು ನೀರು ತಕಂಡ್ ಎಲ್ಲವುಕೂ ಧಾರಾಕಾರ್ಯಕ್ಕೆ ನೀರು ತೇಳಿ ಎಲ್ಲವುಕ್ಕು ಮುಟ್ಟಿಸಿ ತಂದವೆ. ಆಮೇಲೆ ಕಂಚಮಿಲಿ ಇದ್ದ ಹಾಲು, ಕಾಯಿ, ದೀಪ, ಹಿಂಗಾರ ಎಲೆ ಅಡಿಕೆ, ಕರಡಿಗೆ ವಿಭೂತಿ ಎಲ್ಲನ ಬದಲಾಯಿಸಿಕಂಡ್ ಎರಡ್ ಕಂಚಿನ ಗಿಂಡಿಂದ ವಧುನ ಅಪ್ಪ ಹಿಡಿದಿದ್ದ ಕಂಚಿನ ಚೆಂಬಿಗೆ ಹಾಲು ಸುರ್‌ದ್ ನಂತರ ವಧುವರರ ಕೈಲಿ 5 ಎಲೆ 1 ಅಡಿಕೆನ ಕೊಟ್ಟು ಇಬ್ಬರ ಕೈ ಜೋಡಿಸಿ ವರನ ಕೈಯ ಮೇಲೆ ವಧುನ ಕೈ ಇರಿಸಿ 10 ಕುಟುಂಬ 18 ಗೋತ್ರದ ಒಕ್ಕಣೆ ಮಾತ್‌ನ, 3 ಸಾರಿ ಹೇಳಿ ವಧುನ ತಂದೆ 3 ಸಲ ಚೆಂಬುಲಿಟ್ಟ್ ಹಾಲ್‌ನ ಕೈಗಳಿಗೆ ಧಾರೆ ಎರ್‌ದವೆ. ಆನಂತರ ಹಿಂಗಾರದ ಮಾಲೆನ ಹೂನ ಮಾಲೆನ ವಧುವರರು ಬದಲಾಯಿಸಿಕಂಡ್ ಪದ್ಧತಿಪ್ರಕಾರ ವರ ವಧುಗೆ ತಾಳಿ ಕಟ್ಟಿದೆ. ಮತ್ತೆ ಹಾಲು ತುಪ್ಪ ಶಾಸ್ತ್ರ ನಡ್‌ದದೆ. ಆ ಮೇಲೆ ದಂಪತಿ ಮುಹೂರ್ತ.

ಆನಂತರಲಿ ಪಟ್ಟೆ ವೀಳ್ಯ ಕೊಡುವ ಶಾಸ್ತ್ರ ಮುಗಿಸಿ ಹೆಣ್ಣು ವಹಿಸಿ ಕೊಡುವ ಪದ್ಧತಿ ನಡ್‌ದದೆ. ಆಮೇಲೆ ವರನ ಮನೇಲಿ. ನಾಗೋಳಿ ಶಾಸ್ತ್ರ ನಡ್‌ದದೆ. ಇಲ್ಲಿ ಗೊಬ್ಬರ ಹೊರುವ ನೀರ್ ತರುವ ಶಾಸ್ತ್ರ ನಡೆದು ವಧು ಆ ನೀರ್‌ಲಿ ಪಾಯಸಮಾಡಿ ಎಲ್ಲವುಕೂ ಬಡ್‌ಸಿದೆ. ಆಮೇಲೆ ಹತ್ತು ಉಳಿವ ಶಾಸ್ತ್ರ ನಡ್‌ದದೆ. ಹಂಗೇನೆ ಮೊದಲ ವರ್ಷದ ಆಟಿ ತಿಂಗಲಿ ಆಟಿ ಕೂರುವ ಕ್ರಮ ಇದ್ದದೆ.

ಗೌಡವ ವಿವಾಹ ಪದ್ಧತಿಲಿ ಕೂಡಾವಳಿ ವಿವಾಹನು ಒಂದ್ ಇದ್ ಪುನರ್‌ವಿವಾಹ ಗಂಡಾಗಲಿ ಹೆಣ್ಣಾಗಲಿ ತನ್ನ ಸಂಸಾರದ ಬಾಳ್‌ಲಿ ದುರಂತ

ಸಂಭವಿಸಿ ಏಕಾಂಗಿಯಾದರೆ ಅವುಕೆ ಆಗುವ ಪುನರ್‌ವಿವಾಹಕ್ಕೆ 'ಕೂಡಾವಳಿ'ತ ಹೇಳ್‌ವೆ.

ಇಲ್ಲಿ ಅವಿವಾಹಿತೆ ಗೂಡೆನೊಟ್ಟಿಗೆ ವಿವಾಹಿತನೊಬ್ಬ ಪತ್ನಿವಿಯೋಗಂದ ವಿಧುರನಾದರೆ ಮದುವೆ ಆಗುವ ಗೂಡೆಗೆ ಇದ್ ಮೊದಲ ಧಾರೆ ವಿವಾಹ ಆದ ಕಾರಣ ಇದನ್ನ ವಿವಾಹತ ಪರಿಗಣಿಸಿವೆ. ಪತಿಯು ವಿಯೋಗದಿಂದ ಯೌವನಾವಸ್ಥೆಲ್ಲಿರುವ ವಿಧವೆನ ತನ್ನ ಬಾಳ ಸಂಗಾತಿಯಾಗಿ ಅವಿವಾಹಿತನೊಬ್ಬ ಮದುವೆ ಆದರೆ ಅದನ್ನ ಕೂಡಾವಳಿತೇಳಿ ಕರ್‌ದವೆ.

ಗೌಡರ ಮದುವೆ ಸಂಪ್ರದಾಯ ಗಮನಿಸಿದರೆ ಮದುವೆ ಪ್ರಾರಂಭದ ಗೂಡೆ ನೋಡುದರಿಂದ ಶುರುವಾಗಿ ಕೂಡಾವಳಿ ಸಂಪ್ರದಾಯದವರೆಗೆ ಆಚರಣೆಗ ವಧು ವರರನ್ನ ಸಾಮಾನ್ಯ ಜಗತ್‌ಂದ ಪ್ರತ್ಯೇಕಿಸಿ ಒಂದು ರೀತಿನ ಅಲೌಕಿಕ ಜಗತ್ತ್‌ಲಿ ನಿಲ್ಲ್‌ಸುವೆ. ಗ್ರಹಸ್ಥಾಶ್ರಮದ ಕಾರ್ಯಗಳಿನ ವಿವಿಧ ಶಾಸ್ತ್ರ ಕ್ರಿಯೆಗಳ ಮೂಲಕ ಮನವರಿಗೆ ಮಾಡುವೆ.

ಗೌಡರ ಮದುವೆ ಕ್ರಿಯೆಗ ಹಸಿವು-ಕಾಮಗಳ್‌ನ ಸಮನ್ವಯಿಸುವಲ್ಲಿ ಸಾರ್ಥಕತೆನ ಪಡ್‌ಕಂಡದೆ. ಗೌಡ ಸಂಸ್ಕೃತಿನ ಮೂಲ ಘಟಕ ಗಂಡು ಮತ್ತು ಹೆಣ್ಣು ಇವೆರಡೂ ಪೂರಕ ಮತ್ತೆ ವಿರೋಧ ಗುಣ ಇರುವಂಥದ್ದು. ಮದುವೆ ಮತ್ತೆ ಸಂತಾನಂದ ಅದ್ ಬೆಳ್‌ದ್ ತನಗಗತ್ಯ ಆದ ಕುಟುಂಬನ ರಚಿಸಿಕಂಡದೆ. ಕುಟುಂಬವು 'ಕೂಡಿಉಂಬ' ಗಂಡು ಹೆಣ್ಣಿನ ವ್ಯವಸ್ಥೆನ ಹೇಳ್‌ದೆ.

ಮದುವೆನ ದಿನ ಮುಹೂರ್ತ ನಿಗದಿಯಾಗಿ ಮದುವೆನ ಕಾರ್ಯಕ್ರಮ ಅಂದರೆ ಚಪ್ಪರದ ದಿನಂದ ಮದುಮಂಞಗೂ- ಮದುಮಗಳಿಗೂ ಪ್ರತ್ಯೇಕ ಅಸ್ತಿತ್ವ ಸಿದ್ಧವಾದೆ. ಮೈಗೆ ಅರಸಿನ ತಿಕ್ಕಿ, ಕೊರಳಿಗೆ ಕಾಸ್ತಾಳಿ ಕಟ್ಟಿದ ಮೇಲೆ ಇಬ್ಬರೂ ಮನೆನ ವಾತಾವರಣನ ಬಿಟ್ಟು ಹೊಕಾಗದ್‌ತೆಳುವ ನಿಷೇಧವುಟ್ಟು. ಅರಸಿನ ತಿಕ್ಕಿದ ಮೇಲೆ ಅವು 'ಹಸಿಮೈ' ವ್ಯಕ್ತಿಗಳಾದವೆ.

ಮದುವೆ ಪ್ರಾರಂಬಂದ ಮೊದಲಾಗಿ ಎಲ್ಲಾ ಅಚರಣೆಗ ಮದುಮಕ್ಕಳ್‌ನ ಸಾಮಾನ್ಯ ಜೀವನ ಕ್ರಮಂದ ಪ್ರತ್ಯೇಕಿಸಿದೆ. ಮತ್ತೆ ಹಂಗೆ ಪ್ರತ್ಯೇಕಿಸುದರ್‌ಂದ ಮಾತ್ರ ಅವುಕೆ ಸಾಮಾನ್ಯ ಜೀವನ ಕ್ರಮಲಿ ಅಸಾಮಾನ್ಯರಾಗಿ ಪ್ರತ್ಯೇಕ ಸ್ಥಾನ ಗಳಿಸಿಕೊಂಡವೆ. ಇದ್ ಸ್ಪಷ್ಟ ಆಕೆ, ಅವುಕೆ ಎಣ್ಣೆ ಅರಿಶಿನ ಹಚ್ಚಿ ಸ್ನಾನ ಮಾಡಿಸುವೆ. ಹೊಸಬಟ್ಟೆ ಉಡಿಸುವೆ, ಆಗಾಗ ಸೋಬಾನೆ ಹಾಡಿ ಅವರ್‌ನ ಪುರಾಣದ ಎತ್ತರಕ್ಕೆ ಕೊಂಡೊಯ್ದವೆ. ವ್ಯಕ್ತಿಗಳ್‌ನ ಪ್ರತ್ಯೇಕಿಸಿ 'ಧಾರಾಮಂಟಪ'ನ ಮಾಡುವೆ. ಮುಹೂರ್ತಕೆ

ಮಹತ್ವ ಇದ್ದಂಗೆ ಧಾರಮಂಟಕ್ಕೂ ಮಹತ್ವ ಇರುದರಿಂದ ಅದನ್ನ ವಿಶೇಷವಾಗಿ ಶೃಂಗರಿಸುವೆ. 'ವ್ಯಕ್ತಿ' 'ಮುಹೂರ್ತ' ಮತ್ತೆ 'ಸ್ಥಳ' ಒಂದು ನಿರ್ದಿಷ್ಟ ಉದ್ದೇಶಕ್ಕೆ ಬದ್ಧ ಆಗಿ ಸಮಾನ ಮಹತ್ವ ಪಡ್‌ದ್ ಒಟ್ಟು ಮದುವೆಲಿ ಪಾವಿತ್ರ್ಯ ಪಡೆದದೆ.

ಧಾರಾಕಾರ್ಯದ ಸಂದರ್ಭಲಿ ಇಬ್ಬರ ಮಧ್ಯೆ ಪರದೆನ ಹಿಡ್‌ದು ಮುಹೂರ್ತಕ್ಕಾಗಿ ಕಾದವೆ. ನಿಗದಿಪಡಿಸಿದ ಸಮಯಲಿ. ವರನ ಕೈ ಮೇಲೆ ವಧುನ ಕೈಯನ್ನಿಟ್ಟು, ವಧುವಿನ ಅಪ್ಪ ನೀರೆರೆದ್ ಧಾರೆಮಾಡಿಕೊಟ್ಟವೆ. ಇಲ್ಲಿ ಪ್ರತ್ಯೇಕಿಸಲಾಗದ ಕಾಲ, ಸ್ಥಳ ಮತ್ತೆ ಗಂಡು ಹೆಣ್ಣು ಒಂದು ಹಂತಲಿ ಐಕ್ಯರಾಕೆ ಮುಖ್ಯವಾದ ಎರಡು ಉದ್ದೇಶಗಳ್‌ನ ಹೊಂದಿದ್ದದೆ. ಈ ದಂಪತಿಗಳಿಗೆ ಭವಿಷ್ಯಲಿ ಒಳಿತಾಗಲಿ ಎಂಬ ಮಂಗಳದ ಕಲ್ಪನೆ' ಮುಂದಿನ ದಾಂಪತ್ಯಲಿ ಕೆಡುಕಾಗದಿರಲಿ ಎಂಬ ಸದಾಶಯ.

ಮೊದುವೆ ಆದಮೇಲೆ ವಧುವರರ್ ಗಂಡಹೆಣ್ಣಾಗಿ ಮಾರ್ಪಾಡಾದ್ವರ್‌ಂದ ವಂಶಾಭಿವೃದ್ಧಿಗೆ ಅನುಮತಿ ಸಿಕ್ಕಿದಂಗಾದೆ. ಪರೋಕ್ಷ ಆಗಿ ಆಸ್ತಿಗೆ ಉತ್ತರಾಧಿಕಾರಿನ ನೇಮಕಾತಿ ನಡೆದಂಗೆನೂ ಆದೆ. ಗೌಡರ ಮೂಲವೃತ್ತಿ 'ಒಕ್ಕಲುತನ' ಇಲ್ಲರೆ ಅಕ್ಕಿಗೆ ಸಂಬಂದ ಪಟ್ಟಿರುದರದ ಮೂರ್ತಲಿ ಅಕ್ಕಿಗೆ ಯಜಮಾನನ ಅಧಿಕೃತವಾಗಿ ಒಪ್ಪಿಕಂಡವೆ. ನೆರ್‌ದವೆಲ್ಲ ಇದ್‌ಕ್ಕೆ ಸಾಕ್ಷಿಯಾದವೆ. ಇದ್ ಮೂರ್ತಕ್ಕೆ ಇರುವ ಆರ್ಥಿಕ ಮತ್ತು ಸಾಮಾಜಿಕ ಆಯಾಮ.

ಮೊದುವೆ ಆದಮೇಲೆ ವಧುವರರ್‌ನ ಮಂಟಪದೊಳಗೆ ಕೂರ್ಸಿ ಅವರ ಮೈಮೇಲೆ ಅಕ್ಕಿನ ಹಾಕುವೆ. ಮೊಣಕಾಲ್‌ನ ಗಂಟ್, ಮೊಣಕೈ ಗಂಟ್, ಭುಜದ ಸಂದ್‌ಗಳಿಗೆ ಅಕ್ಕಿನ ತಾಂಗಿಸಿ, ಕಡೆಗೆ ನೆತ್ತಿ ಮೇಲೆ ಅಕ್ಕಿ ಚೆಲ್ಲುವ, ಕೆಲು ಸಂದರ್ಭಲಿ ಅಕ್ಕಿನ ಬಾಯಿಗೆ ಇಸಿ ತಿನ್ನುಸುವ ಕ್ರಿಯೆನು ನಡ್ದದೆ. ಜೀವಧಾತುವಾಗಿರುವ ಸಮೃದ್ಧಿನ, ಫಲವಂತಿಕೆನ ಸೂಚಿಸುವ ಮತ್ತೆ ಉತ್ಪಾದನಾ ಘಟಕ ಆದ ಅಕ್ಕಿನ ಅನಂತ ಶಕ್ತಿನ ನವ ದಂಪತಿಗಳಿಗೆ ದಾಟಿಸುವ ಸಾಂಕೇತಿಕ ಅಭಿವ್ಯಕ್ತಿಯಾಗುಟ್ಟು. ಇದರ್‌ನ ಒಟ್ಟು ಮೊದುವೆಲಿ ಅಕ್ಕಿಗೆ ಇರುವ ಸ್ಥಾನನ ಲಕ್ಷಿಸಿ ಇನ್ನಷ್ಟ್ ಗಮನ್‌ಸೊಕು.

ಮೊದುವೆ ದಿನ ಮೊದುವೆ ಗೂಡೆಗೆ ಚೆಕ್ಕ್‌ನ ವಸ್ತ್ರಲಿ ಮಡಿಲಕ್ಕಿ ಕಟ್ಟುವೆ. ಮತ್ತೆ ಗಂಡನ ಮನೆಲಿ ಅದನ್ನ ಪಾಯಸ ಮಾಡಿ ಗಂಡಂಗೂ ನೆಂಟರಿಗೂ ಇಕ್ಕೊಕು. ಇಲ್ಲಿ 'ಅಕ್ಕಿ ಮದುವೆನೊಟ್ಟಿಗೆ ಅನುಷ್ಠಾನದ ಅರ್ಥ ಪಡೆದಿರುದನ್ನ ಗಮನಿಸಕ್. ಅಕ್ಕಿ ಇಲ್ಲದೆ ಗೌಡರ ಮೊದುವೆ ಇಲ್ಲೆ. ಈ ಅರ್ಥಲಿ ಮೊದುವೆ ಅಕ್ಕಿನ ಒಡೆತನನ ಮತ್ತೆ ಅಕ್ಕಿನ ಅನಂತಶಕ್ತಿನ ಹೊಸತಲೆಮಾರಿಗೆ ವರ್ಗಾಯಿಸುವ ಪ್ರಕ್ರಿಯೆ

ಆಗುಟ್ಟು.

ಇನ್ನ್ ಗೌಡರ ಮೊದುವೆಲಿ ಚಪ್ಪರ ಶಾಸ್ತ್ರ ಸುರುವಾಗಿ ಕೊನೆಹಂತದವರೆಗೆ ಮದುಮಕ್ಕ ಪ್ರತಿಯೊಂದು ಶಾಸ್ತ್ರಲಿನೂ ಹಿರಿಯವರ ಕಾಲ್ ಹಿಡಿವ ಮೂಲಕ ಗೌರವ ಸೂಚಿಸೊಕು. ಇದ್ ಹಿರಿಯರ ತಲೆಮಾರ್‌ಂದ ಇಳಿದು ಬಂದ ಪರಂಪರೆನ ಅವಿಭಾಜ್ಯ ಅಂಗ. ತಡಿಲಿ(ದೇಹಲಿ) ಕೆಳಮಟ್ಟದ್ ಕಾಲ್ ಹಂಗೆ ಉನ್ನತ ಆಗಿರ್‍ದು ತಲೆ. ಹಿರಿಯರ ಕಾಲಿಗೆ ಕಿರಿಯರು ತಮ್ಮ ತಲೆನ ಮುಟ್ಸ್‌ಸುವ ಮೂಲಕ, ಹಿರಿಯರ ಕನಿಷ್ಟಕ್ಕೆ ತಮ್ಮ ಗರಿಷ್ಠವು ಸಮ ಎಂದು ಸೂಚಿಸಿಟ್ಟು.

ಮೊದುವೆಗೆ ಮುಂದೆ ಕುಟುಂಬದ ಹಿರಿಯವ್ಕೆ 'ಕಾರಣಕ್ಕೆ ಹಾಕುವ' ಕಾರ್ಯಕ್ರಮ ಇದ್ದದೆ. ಇದ್ ಕೂಡ ಜೀವಂತ ಇರುವವು ಈಗಾಗಲೆ ಆಸ್ತಿನ ಆಳಿ, ತೀರಿಹೋದ ಹಿರಿಯರ ಪರಂಪರೆನ ಮುಂದುವರ್‍ಸುವ ಆಶಯನ ಹೊಂದಿಟ್ಟು. ನಾಗೋಳಿ ಶಾಸ್ತ್ರನು ಕೂಡ ವಂಶಾಭಿವೃದ್ಧಿ ಮತ್ತೆ ಆಹಾರ ಪೂರೈಕೆನ ಆಶಯನ ತಿಳ್ಸಿದೆ.

ಒಟ್ಟಾಗಿ ಗೌಡರ ಮೊದುವೆ ಗಂಡ್ ಹೆಣ್ಣ್‌ನ ಸಂಬಂಧಕ್ಕೆ ಶಾಶ್ವತ ಸ್ವರೂಪ ಕೊಟ್ಟದೆ. ಆಚರಣೆಗ ಮೊದುವೆತೇಳ್ವ ಸಂಬಂಧಕ್ಕೆ ಸಾಮಾಜಿಕ ಮಾನ್ಯತೆನ ಕೊಟ್ಟದೆ. ಮತ್ತೆ ಆ ಸಂಬಂಧ ಪ್ರವೇಶ ಮಾಡ್ದವ್ಕೆ ತಮ್ಮ ಜವಾಬ್ದಾರಿಗಳ ಬಗ್ಗೆ ಅರಿವು ಮೂಡ್ಸಿದೆ.

| 18 ಗೋತ್ರಗ | | 10 ಕುಟುಂಬಗ | |
|---|---|---|---|
| 1. | ನಂದರ | 1. | ಬ್ರಾಹ್ಮಣರು |
| 2. | ಹೆಮ್ಮನ | 2. | ದಾಸಯ್ಯರು |
| 3. | ಬಂಗಾರ | 3. | ಕ್ಷೌರಿಕ |
| 4. | ಮೂಲರ | 4. | ವಿಶ್ವಕರ್ಮ |
| 5. | ಚಾಲ್ಯರ | 5. | ಮೂಲದವರು |
| 6. | ನಾಯರ್ | 6. | ಮಡಿವಾಳರು |
| 7. | ಗೋಳಿ | 7. | ಗಾಣಿಗರು |
| 8. | ಗುಂಡನ(ಸೆಟ್ಟಿ) | 8. | ನೇಕಾರರು– ಚಾಲ್ಯರು |
| 9. | ಕಬರ್ | 9. | ಸಮಗಾರರು |
| 10. | ಬೆತ್ತರ್ | 10. | ಅಜಲರ್ & ಪರವ |
| 11. | ಗೌಡರ | | |
| 12. | ಬಳಸಣ್ಣ | | |
| 13. | ಕರ್ಬನ್ನ | | |
| 14. | ಚೌದನ್ನ | | |
| 15. | ಸಾಲೆ | | |
| 16. | ಲಿಂಗಾಯಿತ | | |
| 17. | ಕರಂಬೆರ್ | | |
| 18. | ಕುತ್ತಿಗುಂಡ | | |

# ಕೊಡಗಿನ ಗೌಡರ ಶವ ಸಂಸ್ಕಾರ ವಿಧಿ ವಿಧಾನಗ:

**– ಪಟ್ಟಡ ಶಿವಕುಮಾರ್**

1. ಸತ್ತ ತಕ್ಷಣ ಅನುಸರಿಸುವ ವಿಧಾನಗ
2. ಹೆಣ ಮೀಸುವ ಪದ್ಧತಿ
3. ಸುಡಿಕೆ ಸೌದೆ ಕಡಿಯೊದು.
4. ಚಟ್ಟ ಕಟ್ಟುವ ಕ್ರಮ
5. ಚಟ್ಟಕ್ಕೆ ಶವ ಇಸಿಕೆ ಮುಂದೆ ಅನುಸರಿಸುವ ವಿಧಾನ
6. ಸುಡ್ಕುಳಿಗೆ ಶವ ಸಾಗ್ಸುವ ಕ್ರಮ
7. ಬಳೆ ಒಡೆವ ಶಾಸ್ತ್ರ
8. ಶವಕ್ಕೆ ಬೆಂಕಿ ಹಚ್ಚುದು.
9. ಕೊಳ್ಳಿ ಕೂಡ್ಸುವ ಕ್ರಮ
10. ಮೂರರ ಶುದ್ಧ (ಬೂದಿ ಮುಚ್ಚುದು)
11. ನೀರ್ ನೆರಳಿಗೆ ಇಸುವ ಕ್ರಮ
12. ಸರ್ಕ್ ಕಳ್ಸುವ ಕ್ರಮ
13. ಶುದ್ಧದಂದ್ ದೂಪೆಗೆ ಅಲಂಕಾರ
14. ಸ್ವರ್ಗ ಸಲ್ಲುವ ಕ್ರಮ
15. ಮನೆ ಮಂದಿನ ಶುದ್ಧಗೊಳ್ಳುವ ಕ್ರಮ
16. ಶುದ್ಧದ ಊಟ
17. ತಿಥಿ ಜಂಬರ
18. 16ರ ಕೊಲೆಗೆ ಸೇರ್ಸುದು
19. ಪಿಂಡ ಹಾಕುದು
20. ದೀಪಾವಳಿಲಿ ಅವುಲು ಹಾಕುದು.

# ಕೊಡಗಿನ ಗೌಡರ ಶವ ಸಂಸ್ಕಾರ ವಿಧಿ ವಿಧಾನಗ

ಪ್ರತಿಯೊಬ್ಬ ವ್ಯಕ್ತಿನೂ ಹುಟ್ಟಿದ ಮ್ಯಾಲೆ ಸತ್ತೇ ಸಾಯೋಕು. ಜನನ, ಜೀವನ, ಮರಣ ಎಂಬ ಮೂರಕ್ಷರಗ, ಬೊದುಕು ಎಂಬ ಮೂರಕ್ಷರದೊಟ್ಟಿಗೆ ಹಾಸ್ ಹೊಕ್ಕಂಡುಟ್ಟು. ಇದರ್ಲಿ ಜನನ ಆಕಸ್ಮಿಕ, ಜೀವನ ಅನಿವಾರ್ಯ, ಸಾವು ನಿಶ್ಚಿತತ ಹೇಳ್‌ನೆ. ಹಂಗಾಗಿ ಎಲ್ಲವೂ ಸಾವ್‌ನ ಎದ್‌ರ್ಸಿಕೆ ತಯಾರಾಗೇ ಇರೋಕು. ಸತ್ತ ಮ್ಯಾಲೆ ಮತ್ತೆಂತ? ತ ಕೇಳ್ವ ಪ್ರಶ್ನೆಗೆ ಯಾರತ್ರನೂ ಉತ್ತರ ಇಲ್ಲೇ ಇದ್ದರೂ, ಎಲ್ಲಾ ಧರ್ಮ, ಜಾತಿಗಳ ಜನ್ರಲ್ಲೂ ಪುನರ್ಜನ್ಮದ ಬಗ್ಗೆ ನಂಬಿಕೆ ಇರ್‍ದರ್ನ ಕಾಣಕ್. ಹಂಗಾಗಿ ಸತ್ತರೆ ಹಂಗೇ ಬುಡದೆ ಹಲವು ಸಂಸ್ಕಾರಗಳ್ನ ಮಾಡ್ವ ಮೂಲಕ ಅವರ ಆತ್ಮಕ್ಕೆ ಶಾಂತಿ ಸಿಕ್ಕಲಿತ್ತೇಳಿ ಬಯಸುವೆ. ಹಂಗೆನೇ ಕೊಡಗು ಗೌಡ ಜನಾಂಗಲಿ ಸನ ತಮ್ಮದೇ ಆದ ವಿಧಿ ವಿಧಾನಗಳ್ನ ಆಚರಿಸುದರ್ನ ಕಾಂಬಕ್.

## ಸತ್ತ ತಕ್ಷಣ ಅನುಸರಿಸುವ ಕ್ರಮಗ :

ಸತ್ತವರ ಬಾಯಿಗೆ ಸುರೂಗೆ ಮನೆಯವು ಕಂಚ್‌ನ ಬಟ್ಲ್‌ಲಿ ಬೆಳ್ತಕ್ಕಿ ಶುದ್ಧ ನೀರ್ ಇಲ್ಲರೆ ಎಳನೀರ್ ಹಾಕಿ, ಅದರ್ನ ತೊಳಸಿ ಕೊಡಿಂದ ಸತ್ತವರ ಬಾಯಿಗೆ ನೀರ್ ಮುಟ್ಸಿ 'ಸ್ವರ್ಗಕ್ಕೆ ಹೋಗ್' ತೇಳಿ ಮನ್ಸಾರೆ ಜೋರಾಗಿ ಹೇಳಿ ನೀರ್ ಬುಡೋಕು. ಊರ್, ನೆರೆಕರೆವ್‌ಕೆ ತಿಳ್ಸಿಕೆ ಆಕಾಶಕ್ಕೆ ಜೋಡು ಗುಂಡುಗಳ್ನ ಹಾರ್‍ಸೊಕು. ಮೃತರ ಪ್ರಾಣನ ಯಮದೂತರ್ ತಕಂಡೋಕೆ ಮನೆ ಮಾಡ್‌ನ ತೂತು ಮಾಡಿ ಒನಕೆ ದಾಟ್ಸುವ ಕ್ರಮವುಟ್ಟು. ತೆಂಗಿನಕಾಯಿ ಒಡ್ದ್ ಇಟ್ಟ್, ಸತ್ತವರ ಶರೀರನ ನೆಟ್ಟಂಗೆ ಮಾಡಿ, ಕಣ್ಣ್‌ಗಳ್ನ ಮುಚ್ಚಿ, ತೆಂಕ್ ದಿಕ್ಕಿಗೆ ತಲೆಯಿಟ್ಟ್ ಮಲ್ಗ್ಸಿ ಬಿಳಿ ಬಟ್ಟೆನ ಶವದ ಮ್ಯಾಲೆ ಹೊದ್ಸಿ, ದೀಪ ಹೊತ್ಸಿ ಇಡೋಕು, ಶವ ವಾಸನೆ ಬರದಂಗೆ ಮೊಣ್ಣ್‌ನ ಮಡ್ಕೆ ಅಥವಾ ಚೆಟ್ಟಿಲಿ ಕೆಂಡ ಹಾಕಿ ಗಂಧ, ನೆಕ್ಕಿಸೊಪ್ಪು ಹಾಕಿ ಹೊಗೆ ಕೊಡೊಕು. ಊದುಕಡ್ಡಿ ಹಚ್ಚಿಡಕು. ಸತ್ತವರ ಶವಸಂಸ್ಕಾರವಾಗದೆ ಆ ಮನೆವು ಊಟ, ತಿಂಡಿ, ತಿಂಬಕಾಗದ್, ಊರವ್, ನೆಂಟ್ರ್‌ಗಳಿಗೆ ಸುದ್ಧಿ ತಲುಪುಸುವ ವ್ಯವಸ್ಥೆ ಮಾಡೋಕು.

## ಹೆಣ ಮೀಸುವ ಪದ್ಧತಿ :

ಊರವು, ನೆಂಟ್ರ್ ಬಂದ ತಕ್ಷಣ ಎಲ್ಲವೂ ಸೇರಿ ಶವನ ಹೊರಗೆ ತಂದ್ ಬೆಂಚಿಮ್ಯಾಲೆ ಮಲ್ಗ್ಸಿ ಎಣ್ಣೆ, ಅರಿಸಿಣನ ಒಂದ್ ಕಾಯಿಚಿಪ್ಪಿಲಿ ಕಲ್ಸಿ, ಗರಿಕೆ ಹುಲ್ಲ್‌ಂದ ಮೈಗೆ ಹಚ್ಚಿ, ತೂತು ಚಿಪ್ಪಿಂದ ನೀರ್‌ನ ಮೈಯಿಗೆ ಹೊಯ್ದ್ ಮಿಸುವೆ, ಗಡ್ಡ, ಮೀಸೆ ಇದ್ದರೆ ಅಲ್ಲಿಯೇ ಬೋಳ್ಸೊಕು. ನಂತರ ಮಡಿಬಟ್ಟೆನ ಉಡ್ಸೊಕು.

ಶರ್ಟ್‌ನ ಹಿಂದೆನ ಮುಂದೆ ಮಾಡಿ ಹಾಕೋಕು. ತಲೆಗೆ ಪೇಟ ಕಟ್ಟಿ, ಹಣೆಗೆ ಬೊಟ್ಟು ಹಾಕಿ, ಹೂಹಾರ ಹಾಕಿ ಅಲಂಕಾರ ಮಾಡಿ, ತಂದ್ ಕೈಯಾಲೆಲಿ ಬಿಲಿ ಚಾಪೆ ಮ್ಯಾಲೆ, ದಕ್ಷಿಣಕ್ಕೆ ತಲೆಯಿಟ್ಟ್ ಮಲಗಿಸೊಕು. ಸುರೂಗೆ ಮನೆವು ಮತ್ತೆ ಊರವು, ನೆಂಟ್ರ್ ತಂದ ಬಿಳಿ ಬಟ್ಟೆಗಳ್ನ ಶವದ ಮ್ಯಾಲೆ ಹೊದ್ಸಕು. ಹಾಲ್ ಎಳನೀರ್ ಮಿಶ್ರಮಾಡಿ ಕಂಚ್‌ನ ಬಟ್ಲ್‌ಲಿ ಇಟ್ಟ್. ಬಂದವು ತೊಳ್ಸಿ ಕೊಡಿಂದ ಶವದ ಬಾಯಿಗೆ ನೀರ್ ಕೊಡಿಕೆ ವ್ಯವಸ್ಥೆ ಮಾಡೊಕು. ನೀರ್ ಕೊಟ್ಟವು ನಾಣ್ಯ(ಪಾವುಲಿ)ನ ಹೆಣದ ಹಣೆಗೆ ಇಟ್ಟವೆ. ಇದಲ್ಲದೆ ಅಲ್ಲೇ ಇಟ್ಟ ಪಚ್ಚೆಗೆ ದುಡ್ಡು ಹಾಕಿವೆ. ನಂತರ ಹೆಣಕ್ಕೆ ಶರಣು ಮಾಡಿ ಕೈ ಮುಗ್ದವೆ. ಶವಕ್ಕೆ ಮಾಡುವ ಎಲ್ಲಾ ಕ್ರಮಗಳ್‌ಲಿ ಎಡಗೈನ ಅಪ್ರದಕ್ಷಿಣೆಯಾಗಿ ಬಳಕೆ ಮಾಡಿವೆ.

## ಸುಡಿಕೆ ಸೌದೆ ಕಡಿಯುದು :

ಮೃತನ ಮನೆವು ಕತ್ತಿ, ಮಚ್ಚ್, ಕೊಡ್ಲಿ, ಕೊಟ್ಟು ಮೊದಲಾದ ಪರಿಕರಗಳ್ನ ಅಂಗಳಕ್ಕೆ ಎಡಗೈಲಿ ತಂದಿಟ್ಟ ಮ್ಯಾಲೆ ಊರವು ಸೌದೆ ಕಡೆಕೆ ಹೋದವೆ. ಸುರೂಗೆ ಕುಂಟಿಗೆ ನಿತ್ತವ ಸೌದೆಗೆ ಬೇಕಾದ ಮರಕ್ಕೆ ಕಡಿಯೊಕು. ಮತ್ತೆ ಊರವು ಸೌದೆ ಕಡ್ದ್. ಅದರ್ನ ಸುರ್ಕುಳಿಗೆ ತಂದ್, ಆ ಜಾಗೆನ ಸಮತಟ್ಟ್ ಮಾಡಿ ಉತ್ತರ–ದಕ್ಷಿಣ ಮುಖ ಮಾಡಿ ಕಾಟ ಒಟ್ಟುವೆ. ಹಿಂಗೆ ಕಾಟ ಒಟ್ಟ್‌ಕಾಕನ ಹೆಣ ಬೀಳದಂಗೆ, ಉದ್ದಕ್ಕೆ ನಾಲ್ಕಡಿ ಅಂತರ ಅಡ್ಡಕ್ಕೆ ಎರಡ್ ಅಡಿ ಅಂತರಲಿ ನಾಲ್ಕ ತಾಕ್‌ಕಂಬಗಳ್ನ ಗಟ್ಟಿಯಾಗಿ ಊರಿ, ಅದರ ಮಧ್ಯೆ 2/3 ಭಾಗದಷ್ಟ್ ಸೌದೆ ಒಟ್ಟಿದ ಮ್ಯಾಲೆ, ಚಟ್ಟಕಟ್ಟಿಕೆ ಮನೆಗೆ ವಾಪಾಸ್ಸಾದವೆ. ಆದರೆ ಸ್ವಲ್ಪ ಜನ ಕಾಟದತ್ತ ಕಾಯೋಕು. ಯಾರೂ ನಿಲ್ಲದಿದ್ರೆ ಕಲ್ಲ್ ಮತ್ತೆ ಚೂರಿಮುಳ್ಳ್‌ನ ಇಟ್ಟ್ ಬರೋಕು. ಕಾಟ ಒಟ್ಟ್‌ಕಾಕನ ಶಾಸ್ತ್ರಕ್ಕಾದರೂ ಹಲಸ್, ಮಾವು, ಗಂಧ, ಸಡ್ಲೆ, ಹಾಲೆ ಮರದ ಸೌದೆ ಹಾಕೊಕು.

## ಚಟ್ಟ ಕಟ್ಟುವ ಕ್ರಮ :

ಹೆಣನ ಸಾಗ್ಸಿಕೆ ಬಿದಿರಿನ ಚಟ್ಟಕಟ್ಟೋಕು. ಎರಡ್ ಬಿದಿರ್‌ನ ಉದ್ದಕ್ಕೆ, ಶವ ಇಡಿಕೆ ಬೇಕಾದಷ್ಟ್ ಅಂತರಲಿ ಸಮಾನಾಂತರಾಗಿ ಇಟ್ಟ್ ಬಿದಿರಿನ ತುದಿಗೆ ಅಡ್ಡಪಟ್ಟಿ ಕಟ್ಟಿ ಉಳಿದ ತಟ್ಟೆಗಳ್ನ ಕತ್ತರಿ ಆಕಾರಲಿ ಕಟ್ಟೊಕು. 5–7 ಅಡ್ಡ ತಟ್ಟೆಗಳ್ನ ಕಟ್ಟಿವೆ. ಎರಡ್ ಬಿದಿರ್ ತಟ್ಟೆಗಳ್ನ ಬಿಲ್ಲಿನಾಕೃತಿಲಿ ಬಗ್ಗ್‌ಸಿ ತೋರಣಕಟ್ಟಿಕೆ ವ್ಯವಸ್ಥೆ ಮಾಡಿಕಂಡ್ ಅಲಂಕಾರ ಮಾಡಿಕೆ ವ್ಯವಸ್ಥೆ ಮಾಡಿವೆ. ನಂತರ ಶವದ ಎಡದ ಕಾಲ್‌ನ ಭಾಗಲಿ ಒಂದು ಸೇರ್ ಭತ್ತ, ತಲೆ ಬಲ ಭಾಗಲಿ ಒಂದ್ ಸೇರ್ ಅಕ್ಕಿನ ಕಟ್ಟಿ ಬದಿಗೆ ನಿಂತವೆ. ಒಂದು ತೆಂಗಿನಕಾಯಿ ಒಡ್ದ್ ಒಂದು ಗಡಿಲಿ ದೀಪದ ಎಣ್ಣೆಹಾಕಿ ಗಂಧದ ಮರದ ಚೂಕೆಗೆ ಬಟ್ಟೆಸುತ್ತಿ ಎಣ್ಣೆಹಾಕಿ ತಲೆಭಾಗಲಿ ಬೆಳಕ್ ಹಚ್ಚಿ ಇಟ್ಟರೆ,

ಇನ್ನೊಂದು ಗಡಿಲಿ ಹಂಗೇನೇ ಮಾಡಿ ಕಾಲ್‌ಕಡೆ ಇಟ್ಟವೆ.

## ಚಟ್ಟಕ್ಕೆ ಶವನ ಇಸಿಕೆ ಮುಂದೆ ಅನುಸರಿಸುವ ವಿಧಾನ:

ಶವದ ಬಾಯಿಗೆ, ಕುಂಟಿಗೆ ನಿತ್ತವ ಮೆಟ್ಟ್‌ಕಲ್ಲ್‌ಲಿ ಎಲೆ ಅಡಿಕೆ ಜಜ್ಜಿ ತಂದ್ ಇಟ್ಟದೆ. ಮತ್ತೆ ಕುಟುಂಬದವೆಲ್ಲವೂ ತಮ್ಮ ಮೇಲ್ವಸ್ತ್ರ ಬಿಚ್ಚಿ, ಸಾಲಾಗಿ ಮೆಟ್ಲ್ ಹತ್ರ ಬೋಗುಣಿಲಿಟ್ಟ ಸೆಗಣಿ ನೀರ್‌ಲಿ, ಮಾವುನ ಎಲೆನ ಕಾಲ್‌ಗೆ ಹಾಕಂಡ್, ಹಿರಿಯರ್ ಮುಂದೆ, ಹಿಂದೆಂದ ಕಿರಿಯರ್ ಶವದ ಸುತ್ತ ಅಪ್ರದಕ್ಷಿಣೆ ಬಂದ, ಬಾಯಿಗೆ ನೀರ್ ಕೊಟ್ಟ್ ಹಿರಿಯರ್ ತಲೆಗೆ, ಕಿರಿಯರ್ ಕಾಲ್‌ಗೆ ಮುಟ್ಟಿ ಶರಣು ತಕಂಡವೆ.

ಶವಕ್ಕೆ ಸುತ್ತು ಬಾಕಾಕನ ಎಲ್ಲರೂ 'ನಾರಾಯಣ ನಾರಯಣ'ತ (ಶಿವ, ಶಿವ) ದೇವರ ನಾಮ ಹೇಳಿವೆ. ಮತ್ತೆ ಎಲ್ಲವೂ ಸೇರಿ ಶವನ ಎತ್ತಿ, ಚಾಪೆ ಸಮೇತ ಕಾಲ್ ಮುಂದಾಗಿ, ತಲೆ ಹಿಂದ್ಯಾಗಿ ಚಟ್ಟದ ಮ್ಯಾಲೆ ಇಟ್ಟವೆ. ಅಲ್ಲಿ ಶವದ ಮ್ಯಾಲೆ ಹೊದಿಸಿದ ಉದ್ದನೆಯ ಬಟ್ಟೆ ನೋಡಿ ಅದರ್ನ ಕುಂಟಿಗೆ ನಿತ್ತವನ ಕೈಗೆ ಕೊಟ್ಟ್ ಬಂದ್ ಇಂಚಿನ ಅಗಲ ಸುತ್ತ ನಾಲ್ಕ್‌ಭಾಗ ಹರಿಯುವಂಗೆ ಹೇಳಿ, ಅದರ್ನ ಮತ್ತೆ ನಾಲ್ಕ್ ಭಾಗಮಾಡಿ ಒಂದ್ ತರಂಡ್‌ಂದ ಕಾಲ್‌ನ ಎರ್ಡ್ ಹೆಬ್ಬೆರಳ್‌ನ ಜೋಡ್ಸಿ ಕಟ್ಟಿ, ಮತ್ತೊಂದು ತುಂಡು ಬಟ್ಟೆಂದ ಕೈಬೆರಳ್‌ಗಳ್ನ ಕಟ್ಟಿ, ಒಂದರ್ನ ತಾನ್ ಇಟ್ಟ್‌ಕಂಡ್, ಇನ್ನೊಂದರ್ನ ಊರು ಕುಂಟುಗೆ ಕೊಟ್ಟದೆ. ಉತ್ತರ ಕ್ರಿಯೆ ಮುಗಿವವರೆಗೆ ಮನೆ ಕುಂಟಿಗೆ ಆ ಬಟ್ಟೆ ತುಂಡುನ ತನ್ನತ್ರನೇ ಇಟ್ಟ್‌ಕಣಕು.

## ಸುಡ್ಕುಳಿಗೆ ಶವ ಸಾಗ್ಸುದು :

ಹೆಣನ ಅಲ್ಲಾಡದಂಗೆ ಚಟ್ಟಕ್ಕೆ ಕಟ್ಟಿ, ಕಾಲ್‌ಕಡೆಂದ ಊರವ್, ತಲೆ ಕಡೆಂದ ಮನೆವ್ ಚಟ್ಟನ ಎತ್ತಿ 'ನಾರಾಯಣ ನಾರಾಯಣ' ತ ಹೇಳ್ತಾ ಹಿಂದಕೆ, ಮುಂದಕ್ಕೆ ಮೂರು ಸಲ ಜೂಂಗಿಸಿ ಹೆಗ್‌ಲ್ ಮ್ಯಾಲೆ ಇಸಿಕಂಡ್ ಸುಡ್ಕುಳಿ ಕಡೆ ಸಾಗಿವೆ. ಅರ್ಧದಾರಿಲಿ ಐದ್ ಎಲೆ, ಒಂದ್ ಅಡಿಕೆ, ಅನ್ನದ ಬುತ್ತಿನ, ದಾರಿನ ಎಡ್ಡಬದಿ ಯಾವುದಾರ್ ಮರದ ಬುಡಲಿ ಇಟ್ಟವೆ. ಯಮದೂತರಿಗೆ ಇಡ್‌ವ ಊಟತೇಳಿ ಇದರ ಬಗ್ಗೆ ನಂಬಿಕೆ. ಇಲ್ಲಿಂದ ಮುಂದೆ ತಲೆಕಡೆ ಹೊತ್ತವು ಕಾಲ್ ಕಡೆಗೆ, ಕಾಲ್‌ಕಡೆಗೆ ಹೊತ್ತವು ತಲೆ ಕಡೆ ಹೊತ್ತ್ ಸಾಗಿವೆ. ಕೆಲವು ಕಡೆ ಅಕ್ಕಿ ನಾಣ್ಯಗಳ್ನ ಎರ್‌ಚ್‌ತ್ತಾ ಸಾಗಿವೆ. ಒಂದು ಸಣ್ಣ ಮೊಣ್ಣುನ ಮಡಿಕೆಲಿ ನೀರ್, ಚೆಟ್ಟಿಲಿ ಬೆಂಕಿ, ಅಲ್ಲದೆ ಗಂಧದ ಸೀಳ್‌ಗ, ಕೊಬ್ಬರಿ ತೆಂಗಿನಕಾಯಿ, ಎಣ್ಣೆ, ತುಪ್ಪ ಮುಂತಾಗಿ ಬೆಂಕಿ ಹೊತ್ತಿಕೆ ಬೇಕಾದ ವಸ್ತ್‌ಗಳನ್ ಹಿಡ್ಕಂಡಿದ್ದವೆ. ಕಾಟ ತಲ್ಪಿದಂಗೆ, ಕಾಟದ ಮೇಲಿಟ್ಟ ಕಲ್ಲ್, ಚೂರಿ ಮುಳ್ಳ್‌ನ ದೂರ ಬಿಸಾಕಿ, ಕಾಟಕ್ಕೆ ಮೂರುಸುತ್ತು ಅಪ್ರದಕ್ಷಿಣೆ ಬಂದ್,

ಚಟ್ಟನ್ನ ಕೆಳಗಿಟ್ಟ್ ಶವನ ಮಾತ್ರ ಮೇಲೆತ್ತಿ ಉತ್ತರ-ದಕ್ಷಿಣವಾಗಿ ಕಾಟದ ಮ್ಯಾಲೆ ಇಟ್ಟವೆ. ಆಗ ಎಲ್ಲವೂ 'ನಾರಾಯಣ ನಾರಾಯಣ'ತ ಸ್ತುತಿಸುವೆ. ಶವಕ್ಕೆ ಹೊದಿಸಿದ 3 ಅಥವಾ 5 ಬಟ್ಟೆಗಳನ್ನ ಬುಟ್ಟ್ ಬಾಕಿ ಇರ್‌ದರ್‌ನ್ನ ಊರು ಕುಳುವಾಡಿಗೆ, ವಾದ್ಯದವುಕೆ ಹಂಚಿವೆ. ಕಂಚಿನ ಬಟ್ಲ್‌ಲಿ ಸೇರ್ದ ದುಡ್ಡ್‌ನ ವಾದ್ಯದವುಕೆ ದಾನ ಕೊಟ್ಟವೆ. ಮತ್ತೆ ಹೆಣದ ಬಾಯಿಗೆ ನೀರ್‌ಕೊಟ್ಟ್ 3 ಸುತ್ತು ಬಂದವೆ.

## ಬಳೆ ಒಡವೆ ಶಾಸ್ತ್ರ :

ಸತ್ತೊವು ಹೆಣ್ಣಾದರೆ, ಮಾಂಗಲ್ಯ ಮತ್ತೆ ಎಲ್ಲಾ ಆಭರಣ ಬಿಚ್ಚಿ ತೆಗ್ದವೆ. ಗಂಡ್ಸಾದರೆ ಹೆಣ್ಣ್‌ನ ಮೂಗುತಿ, ಓಲೆ, ತಾಳಿ ತೆಗ್ದ್ ಕಂಚಿನ ಬಟ್ಲ್‌ಗೆ ಹಾಕಿ ಮಾಂಗಲ್ಯ ತುದಿಂದ ಸ್ವಲ್ಪ ಚಿನ್ನ ತೆಗ್ದ್, ಅದರ್ನ ತೊಳ್ಸಿ ನೀರ್ ಸಮೇತ ತಾಳಿಂದ ಶವದ ಬಾಯಿಗೆ ಅವಳ ಕೈಯಿಂದ ನೀರ್‌ಕೊಡ್ಸಿ 'ನಾನ್ ಮಾಡ್ದ ಯಾವುದೇ ತಪ್ಪ್ ಇದ್ದರೂ ಮನ್ನಿಸಿ ಸ್ವರ್ಗಕ್ಕೆ ಹೋಗಿತ ಹೇಳ್ಸಕು. ಅವಳ ಕೈಲಿದ್ದ ಬಳೆನ ಶವದ ಎದೆಯ ಮ್ಯಾಲೆ ಇಟ್ಟ್, ತವರ್‌ನ ಕಡೆವ್ ಒಡ್ದವೆ. ಒಡೆಕಾಕನ ಬಳೆ ಚೂರು ಶವದ ಮ್ಯಾಲೆ ಬೀಳದಂಗೆ ಬಟ್ಟೆ ಹಿಡ್ದ್ ಎಚ್ಚರ ವಹಿಸಿದ್ದವೆ.

## ಶವಕ್ಕೆ ಬೆಂಕಿ ಹಚ್ಚುದು :

ಇದೆಲ್ಲ ಆದಮ್ಯಾಲೆ ಗಂಧದ ಚೂರುಗಳ್ನ ಎಲ್ಲವೂ ಎಡಗೈಯಿಂದ ಶವದ ಮ್ಯಾಲೆ ಇಟ್ಟ್ ಮೇಲ್ಭಾಗನ ಒಟ್ಟುವೆ. ಇದ್ಕೆ ಮೊದ್ಲೇ ಎರ್ಡ್ ಒಣ ಬಿದಿರ್ ಸೂಟೆಗಳ್ನ ಚಿಟ್ಟಿಲಿರ್‌ವ ಬೆಂಕಿಲಿ ಹೊತ್ಸಿ, ಮನೆ ಕುಂಟಿಗೆ ಒಂದರ್ನ, ಊರು ಕುಂಟಿಗೆ ಒಂದರ್ನ, ಊರು ಕುಂಟಿಗೆ ಕಾಲ್ ಕಡೆಂದ ಮನೆ ಕುಂಟಿಗೆ ತಲೆಕಡೆಂದ ಬೆಂಕಿಕೊಟ್ಟವೆ. ಕೊಬ್ಬರಿ ಎಣ್ಣೆ ತುಪ್ಪಗಳ್ನ ಬೆಂಕಿಹೊತ್ತಿಕೆ ಹಾಕ್‌ವೆ. ಬೆಂಕಿ ಎರ್ಡೂ ಕಡೆಂದ ನಡೂಗೆ ಬಾಕನ ಸೌದೆ ಕಡೆಂದ ಅಡ್ಡಕ್ಕೆ ತಿರ್ಗಿ ಎಡಕೈಯಿಂದ ಕಾಟಕ್ಕೆ ಕಡ್ಡ ಮೂರು ಸಲ ಬಿಸಾಕಿವೆ. ಅದಾದ ಮ್ಯಾಲೆ ಕುಂಟಿಗೆ ನಿತ್ತವ ನೀರ್ ಮಡಿಕೆನ ಸಣ್ಣ ತೂತ ಮಾಡಿ ಹೆಗ್ಲ್ ಮ್ಯಾಲೆ ಇಟ್ಟ್‌ಕಂಡ್ ನೀರ್ ಬುಡ್ತಾ ಮೂರು ಸುತ್ತು ಅಪ್ರದಕ್ಷಿಣೆ ಬಂದ್ ಮಡಿಕೆನ ಒಡ್ದ್ ಬಿಸಾಕಿದೆ. ಅಲ್ಲೇ ಕುದ್ದ್ ಉತ್ತರ ಕ್ರಿಯಾದಿಗಳ ಬಗ್ಗೆ ಮಾತುಕತೆ ನಡ್ಸಿ ಹೊರ್ಟವೆ. ಹಿಂಗೆ ಹೊರ್ಡ್‌ಕಾಕನ ಜೋಡು ಗುಂಡ್ ಹಾರ್ಸ್‌ವೆ.

ಸುಡ್ಕುಳಿಂದ ಬಂದವ್ ಎಲ್ಲವೂ ತಣ್ಣೀರ್‌ಲಿ ಮಿಾದ್ ಮನೆ ಹತ್ತಕು. ಕರ್ಮಕ್ರಿಯೆ ಮುಗಿವವರೆಗೆ ಕಳ್ಳ್‌ಮಾಸ, ಹಾಲ್, ತುಪ್ಪ ತಿಂಬಕಾಗದ್. ಸರಳ ಉಪಹಾರ ತಿನ್ನಕು. ತಿಥಿ ಕರ್ಮಾಂತರ ಮುಗೆವವರೆಗೆ ಪ್ರತಿರಾತ್ರಿ, ಒಂದು ಚೊಂಬು ನೀರ್‌ನ, ಶವನ ಮಲ್ಗಿಸಿದ ಜಾಗೆಲಿ ಇಡೊಕು. ಸೌದೆ ಕಡ್ಡ ಕತ್ತಿ, ಕೊಡ್ಲಿ, ಗುಂಡಿ

ತೆಗ್ದ ಕೆಂಚು, ಹಾರೆಗಳ್ನ ಮನೆ ಹೊರಗಡೆ ಇಡೊಕು ಮಿಾಸಿಕೆ ಉಪಯೋಗ್ಸಿದ ಮಂಡೆ, ಪಾತ್ರ, ಬೆಂಚಿಗಳ್ನ ಕಂಕಣಿ ಹಾಕಿ ಇಡೊಕು. ಶುದ್ಧ ಮುಗ್ದಮ್ಯಾಲೆ ಒಳಗೆ ತಕಣಕ್.

## ಕೊಳ್ಳಿ ಕೂಡ್ಸುವ ಕ್ರಮ :

ಶವ ಸುಟ್ಟ ಮಾರ್ನೇದಿನ ಹೊತ್ತದೇ ಇರುವ ಸೌದೆಗಳನ್ ಪುನಃ ಸುಡ್ಡಕ್ಕೆ ಕೊಳ್ಳಿ ಕೂಡ್ಸುದುತ ಹೇಳಿವೆ. ಹೊತ್ತದೇ ಉಳ್ಕಂಡ ಸೌದೆಗಳ್ನ ಒಟ್ಟು ಸೇರ್ಸಿ ಹಾಲ್, ತಲುಪ್ಪ ಬುಟ್ಟ್ ಪುನಃ ಬೆಂಕಿಹಚ್ಚಿ ಪೂರ್ತಿ ಸುಟ್ಟಮ್ಯಾಲೆ, ಮತ್ತೆ ಮಿಾದ್ ಮನೆಗೆ ಬಂದವೆ. ಊರ್‌ಕುಂಟಿಗೆನ ಇನ್ನೊಬ್ಬನ ಕರ್ಕಂಡ್ ಕಾಲೆ ನೋಡ್ಸಿಕೆ ಮಲಿಯರ ಹತ್ರ ಹೋಗಿ ಸಾವ್‌ಗೆ ಕಾರಣ, ಮುಂದೆನ ಬೆಳವಣಿಗಳ ಬಗ್ಗೆ ಶಾಸ್ತ್ರ ಕೇಳ್ಸಿಕಂಡ್ ಬಂದವೆ.

## ಮೂರರ ಶುದ್ಧ (ಬೂದಿ ಮುಚ್ಚುದು) :

ಶವ ಸಂಸ್ಕಾರ ನಡ್ದ ಮೂರನೇ ದಿನ ಬೂದಿ ಮುಚ್ಚುವ ಕ್ರಮ. ಆ ದಿನ ಮಡಿವಾಳನ ಕರ್ಸಿವೆ. ಮಡಿವಾಳ ತೆಂಗಿನ ನೀರ್‌ನ ತೊಳ್ಸಿ ಕೊಡಿಂದ ಬೂದಿಗೆ ಚುಮುಕ್ಸಿ ಶವದ ಹಣೆಲಿಟ್ಟಿದ್ದ ಚಿನ್ನ ಅಥವಾ ಹಣನ ಹುಡುಕಿ ತಕಂಡವೆ. ಮೃತರ ಬೂದಿನ ಹೊಳೆಗೆ ಬುಡ್ದಾದರೆ ಸುರೂಗೆ ಕಾಲ್ ಭಾಗಂದ, ಮತ್ತೆ ಮಧ್ಯಂದ, ಕೊನೆಗೆ ತಲೆ ಭಾಗಂದ ಸ್ವಲ್ಪ ಬೂದಿನ ತೆಗ್ದ್ ಬಾಳೆ ಎಲೆಲಿ ಕಟ್ಟಿ ಹೊಸ ಮೊಣ್ಣ್‌ನ ಮಡಿಕೆಲಿ ತೆಗ್ದಿಟ್ಟವೆ. ಮತ್ತೆ ಬೂದಿನ ಕಾಲ್, ಮಧ್ಯ, ತಲೆ ಕಡೆದ್ ಮೂರು ಗುಡ್ಡೆ ಮಾಡಿ, ಮಧ್ಯಲಿ ಒಂದು ಗುಂಡಿ ತೆಗ್ದ್, ಸುರೂಗೆ ಕಾಲ್‌ಕಡೆದ್, ಮತ್ತೆ ಮಧ್ಯದ್, ಕೊನೆಗೆ ತಲೆಕಡೆದ್ ಬೂದಿನ ಹಾಕಿ ಮುಚ್ಚಿ ದೂಪೆ ಮೆತ್ತುವೆ. ದೂಪೆಗೆ ಬಡ್‌ಗ್(ಉತ್ತರ) ದಿಕ್ಕ್‌ಲಿ ಮೆಟ್ಲ್ ಮಾಡಿ, ಸುತ್ತಲೂ ಸರಳಿಸೊಪ್ಪು ಕುತ್ತಿ, ಬಂದ್ ಮಿಾದ್ ಮನೆ ಹತ್ತುವೆ.

## ನೀರ್ ನೆರಳಿಗೆ ಇಡುವ ಕ್ರಮ :

ಶುದ್ಧದ ದಿನದ ಹಿಂದೆನ ರಾತ್ರಿ ಊಟ ಮುಗ್ಸಿ, ವ್ಯಕ್ತಿ ಸತ್ತ ಜಾಗೆನ ಶುಚಿಗೊಳ್ಸಿ, ಅಲ್ಲಿ ಗಾಳ್ಸಿ, ಜಾಡ್ಸಿದ, ಅಕ್ಕಿ ಹೊಡಿನ ಎರ್ಡ್ ಅಡಿ ಅಗಲಲಿ ಎಲ್ಲೂ ಕಲೆ ಬಾರದಂಗೆ ಹರ್ಡಕು. ಅದರ ಮ್ಯಾಲೆ ಒಂದು ಚೊಂಬು ನೀರ್ ಮತ್ತೆ ಎಳನೀರ್‌ನ ಮ್ಯಾಲೆ ಭಾಗ ಮಟ್ಟ ಆಗಿ ಕತ್ರಿಸಿ, ಒಂದಕ್ಕೊಂದು ಅಡಿ ಅಂತರಲಿ ಇಡೊಕು. ಮ್ಯಾಲೆಂದ ಒಂದು ನೂಲ್‌ಲಿ ಮಸಿ ತುಂಡ್‌ನ ನೀರಿಗೆ ಮುಟ್ಟುವಂಗೆ, ಇನ್ನೊಂದು ನೂಲ್‌ಲಿ ಅರಿಸಿಣ ತುಂಡ್‌ನ ಕಟ್ಟಿ ಎಳನೀರ್‌ಗೆ ಮುಟ್ಟುವಂಗೆ ಇಳಿಬುಡೋಕು.

ಒಂದು ಕುಕ್ಕೆಲಿ ಮೂರ್‌ಸೇರ್ ಅಕ್ಕಿ, ಒಂದು ತೆಂಗಿನಕಾಯಿ, ಅಡಿಗೆಗೆ ಉಪಯೋಗಿಸುವ ಎಲ್ಲಾ ಮಸಾಲೆ ಸಾಮಾನ್‌ಗಳ್ನ ಹಂಞ ಹಂಞ ಬಾಳೆಲೆಲಿ ಕಟ್ಟಿ ಇಡೋಕು (ಬೆಳ್ಳುಳ್ಳಿ, ಸಾಸಿವೆ ಇಡ್‌ಕಾಗದ್), ಒಂದ್ ಕುಂಬಳಕಾಯಿ, ಮರಬಾಳೆಗೊನೆಗೂ ಇಡೊಕು, ಕೆಲವು ಜನ ಕಳ್ಳ್ ಕೂಡ ಇಟ್ಟವೆ. ಮತ್ತೆ ಆಕೋಂಬರೆಗೆ ಯಾರೂ ಹೋಗದಂಗೆ ಮಾಡಿ, ಕತ್ತಲೆ ಮಾಡಿ, ಸದ್ದ್‌ಮಾಡದೆ ಹೊರಗೆ ಹೋಕು. ಕುಂಟಿಗೆ ನಿತ್ತವ ಒಂದ್ ಚೊಂಬುಲಿ ನೀರ್ ತಕಂಡ್ ಮೆಟ್ಟ್‌ಕಲ್ಲ್‌ಲಿ ನಿತ್ತ್‌ಕಂಡ್ ಸುತ್ತ ಸೊಲ್ಪ ನೀರ್ ಚುಮುಕ್ಸಿ, ಒಂಟಿಕಾಲ್‌ಲಿ ನಿತ್ತ್ ಎರ್ಡ್ ಕೈಗಳನ್ ತಲೆ ಹಿಂಭಾಗಕ್ಕೆ ಹಿಡ್ದ್ ತನ್ನ ಪ್ರೀತಿಯ ಹೆಸ್ರ್‌ಲೇ ಕರ್ದ್ 'ಬಾಯಾರಿಕೆಗೆ ನಿಂಗೆ ನೀರ್ ನೆರಳಿಗೆ ಇಟ್ಟೊಳೊ ಬಂದ್ ತಕಣಿ'ತ ಮೂರು ಸಲ ಜೋರಾಗಿ ಕರ್ದ್ ಹೇಳೋಕು. ಮತ್ತೆ ಎಲ್ಲವೂ ಮಲ್ಗಿ ಬುಡೊಕು.

ಹೊತ್ತಾರೆ ನಾಲ್ಕ್ ಗಂಟೆಗೆ ಮೊದ್ಲೇ ಎದ್ದ್ ಬಂದ್ ನೀರ್ ನೆರಳಿಗೆ ಇಟ್ಟ ಜಾಗೆ ನೋಡ್ದು. ಅಲ್ಲಿ ನೀರ್, ಎಳನೀರ್‌ಲಿ ವ್ಯತ್ಯಾಸ ಕಂಡ್‌ಬಂದರೆ, ಅಕ್ಕಿಹೊಡಿ ಮ್ಯಾಲೆ ಹೆಜ್ಜೆಗುರುತುಗ ಕಂಡರೆ, ಸತ್ತವನ ಕೊಲೆ ಬಂದುಟುತ ನಂಬಿಕೆ. ನಂತರ ಕುಂಟಿಗೆ ನಿತ್ತವ ಮನೆಯ ಮೆಟ್ಟ್‌ಕಲ್ಲ್ ಮ್ಯಾಲೆ ಕುಂಬಳ ಕಾಯಿಯಿಟ್ಟ್ ಎಡಕೈಲಿ ಕತ್ತಿಂದ ಕಡ್ದ್ ಎರ್ಡ್‌ಭಾಗ ಮಾಡಿ, ಅದರ್ಲಿ ಒಂದು ಭಾಗನ ಮತ್ತೆ ಎರ್ಡ್ ಭಾಗಮಾಡಿ ಒಂದರ್ನ ಮಡಿವಾಳಂಗೂ, ಮತ್ತೊಂದರ್ನ ಕ್ಷೌರಿಕಂಗೂ ಎತ್ತಿಡಕು. ಹಂಗೇ ಒಂದೊಂದು ಚಿಪ್ಪು ಬಾಳೆಕಾಯಿನೂ ತೆಗ್ದಿಡಕು. ಉಳ್ದೆಲ್ಲಾ ಸಾಮಾನ್‌ಗಳ್ನ ಅಡುಗೆ ಮಾಡಿಕೆ ಸೇರ್ಸಿಕಣಕು.

## ಸರ್ಕ್ ಕಳ್ಸುವ ಕ್ರಮ :

ಸತ್ತೋದವರ ಮನೆವುಕೆ ಉತ್ತರ ಕ್ರಿಯೆಗಳ್ನ ಮಾಡಿಕೆ ಭಂಗ ಆಕಾಗದ್‌ತೇಳಿ, ವಸ್ತುಗಳ ರೂಪಲಿ ಕೊಡುವ ಕಾಣಿಕೆನೇ ಸರ್ಕ್. 'ಯಮನ ಬಿಟ್ಟಿಕೆಲ್ಸ ಎಲ್ಲವೂ ಸೇರಿ ಮಾಡಿ' ತೇಳ್ವಂಗೆ, ಸರ್ಕ್‌ಲಿ ಬೆಳ್ತಕ್ಕಿ 3–5 ಸೇರ್, ಕುಸಲಕ್ಕಿ 3–5 ಸೇರ್ ತೆಂಗಿನಕಾಯಿ 3–5, ಬಾಳೆಗೊನೆ, ಹುರುಳಿ, ಬೂದು ಕುಂಬಳಕಾಯಿ, ಅಕ್ಕಿಹುಡಿ, ಈರುಳ್ಳಿ, ಸಂಬರ, ಎಲೆ, ಅಡಿಕೆ ಸೇರ್ದಂಗೆ ಎಲ್ಲಾ ವಸ್ತುಗಳ್ನ ಕೊಟ್ಟ ಹೆಣ್ಣ್ ಮಕ್ಕ, ಹತ್ರದ ನೆಂಟ್ರ್‌ಗ ಕೊಡುವ ಕ್ರಮ ಉಟ್ಟು.

## ಶುದ್ಧದ ದಿನ ದೂಪಗೆ ಅಲಂಕಾರ :

ವ್ಯಕ್ತಿ ಸತ್ತ 5ನೇ ದಿನಂದ 11ನೇ ದಿನದವರೆಗೆ ಶುದ್ಧ ಮಾಡುವ ಕ್ರಮವುಟ್ಟು. ಅಂದ್ ಮಡಿವಾಳ ಮೂರರ ಶುದ್ಧದಂದ್ ದೂಪೆ ಸುತ್ತ ನೆಟ್ಟಿದ್ದ ಸರಳಿ ಸೊಪ್ಪು

ತೆಗ್ದ್, ಶುಚಿಗೊಳ್ಸಿ, ಬೇರೆ ಸರಳಿಸೊಪ್ಪು ಕುತ್ತಿ, ದೂಪೆದ್ ನಾಲ್ಕ್ ಮೂಲೆಗಳಿಗೆ ಒಂದೊಂದು ಸಣ್ಣ ಕಂಬ ನೆಟ್ಟ್ ಚಪ್ಪರ ಮಾಡಿ, ನಾಲ್ಕ ಬಾಳೆ ಕಂದ್‌ಗಳ್ನ ಕಟ್ಟಿ ತಳಿರ್ ತೋರಣಗಳಿಂದ ಅಲಂಕಾರ ಮಾಡಿವೆ. ದೂಪೆಯ ಮೆಟ್ಲ್ ಇರುವ ಬಡ್‌ಗ್ ಕಡೆ ತೆರ್ಕಂಡಿರುವ ಬಾಗ್ಲ್ ಮಾಡಿವೆ. ಸುತ್ತ ಅಂಕಣಮಾಡಿ, ಅದ್ಕೂ ಮಾವಿನ ಸೊಪ್ಪಿನ ತೋರಣ ಕಟ್ಟುವೆ. ಒಳ ಅಂಕಣಲಿ ಕುಟುಂಬದವು ದೂಪೆಗೆ ಸುತ್ತ ಬಾಕೆ ಜಾಗೆ ಮಾಡಿದ್ದವೆ.

ಇತ್ತ ದೂಪೆಗೆ ಅಲಂಕಾರವಾಗ್ತಾ ಇದ್ದಂಗೆ, ಮನೆಗೆ ಬಂದ ಕ್ಷೌರಿಕ, ಕುಟುಂಬದವರ, ಇಷ್ಟಪಟ್ಟ ಸಂಬಂಧಿಕರ ತಲೆಕೂದ್ಲು, ಗಡ್ಡ, ಮೀಸೆ ಬೋಳ್ಸಿದೆ. ಕೊನೆಗೆ ಕುಂಚಿಗೆ ನಿತ್ತವನ ಮನೆಮೆಟ್ಲ್‌ಲಿ ಈರ್‌ಮುಂಡ ಹಾಕಿ ಕೂರ್ಸಿ, ಒಂದು ತೆಂಗಿನಕಾಯಿ ಒಡ್ದ್ ಅದರ ನೀರ್‌ನ ಗಡ್ಡ್, ತಲೆಗೆ ಹಾಕಿ ಚಂಡಿಮಾಡಿ, ತೆಲ ಕೂದಲ್‌ನ ಬೋಳ್ಸಕು. ಮತ್ತೆ ಕುಂಟಿಗೆವನ ಸೂರಡಿಲಿ ನಿಲ್ಸಿ, ಒಂದು ಚೊಂಬು ನೀರ್, ಒಂದು ಪಚ್ಚೆಲಿ ಅಕ್ಕಿ ತಂದ್, ನೀರ್‌ನ ಅವನ ತಲೆಗೆ ಹೊಯ್ದ್, ನೀರ್ ಬೀಳ್‌ವಲ್ಲಿ ಅಕ್ಕಿಪಚ್ಚೆ ಹಿಡ್ದ್, ಅಕ್ಕಿನ ಚಂಡಿಮಾಡಿ, ಅದರ್ನ ಕಂಚಿನ ಬಟ್ಲಿಗೆ ಹಾಕೊಕು. ನಂತರ ಶವ ಮಲ್ಗಿಸಿದ ಜಾಗೆಲಿ ಒಂದು ಮಣೆನ ಇಟ್ಟ್ ಅದರ ಮ್ಯಾಲೆ ಮಡಿಬಟ್ಟೆನ ಹಾಸಿ, ಈ ಕಂಚಿನ ಬಟ್ಲ್‌ನ ಬಟ್ಟೆಮ್ಯಾಲೆ ಇಡೊಕು. ಆ ಬಟ್ಲಿಗೆ ದೀಪದ ಬತ್ತಿ, ಗಂಧದ ಕಡ್ಡಿಯ ಕಟ್ಟ್, ಒಂದು ಬಾಳೆಲೆಲಿ ಅರಶಿಣದ ಹುಡಿ ಕಟ್ಟಿಡಕು. ಅಲ್ಲದೆ ಸತ್ತ ದಿನ ಒಡ್ದ ತೆಂಗಿನ ಕಾಯಿನ ಊರು ಕುಂಟಿಗೆಯವನ ಕೈಗೆ ಕೊಟ್ಟ್ ಅಂವ ತೆಗ್ದಿಟ್ಟಿದ್ದದೆ, ಆ ತೆಂಗಿನಕಾಯಿನ ಸಣ್ಣ ಸಣ್ಣ ಹೋಳು ಮಾಡಿ ಬಾಳೆ ಎಲೆಲಿ ಕಟ್ಟಕು. ಈ ಎಲ್ಲಾ ಸಾಮಾನ್‌ಗಳ್ನ ಅಕ್ಕಿ ತುಂಬಿದ ಬಟ್ಲ್‌ಲಿ ಇಟ್ಟ್, ಹಾಸಿದ ಬಟ್ಟೆಂದ ಬಟ್ಲ್‌ನ ಕಟ್ಟಕು. ಮತ್ತೆ ಕುಂಟೆಗೆ ದಾರ, ಮನೆವು ಊರುಕುಂಟಿಗೆ ಎಲ್ಲವೂ, ಆ ಬಟ್ಲಿಗೆ 3 ಸುತ್ತು ಅಪ್ರದಕ್ಷಿಣೆ ಬಂದ್, ಊರುಕುಂಟಿಗೆ ಆ ಬಟ್ಲ್‌ನ ಎತ್ತಿ, ಮನೆ ಕುಂಟಿಗೆಯವನ ಎಡಭುಜದ ಮೇಲೆ ಇಟ್ಟಮ್ಯಾಲೆ, ಕುಂಟಿಗೆದಾರ ಮತ್ತೆ ಅಲ್ಲಿ ಸೇರ್ದವೆಲ್ಲವೂ ದೂಪೆ ಹತ್ರ ಹೋದವೆ. ಹೀಂಗೆ ಹೋಕಾಕನ ಮನೆಲಿ ಮಾಡ್ದ ಎಲ್ಲಾ ಅಡುಗೆ ತಿಂಡಿ, ತಿನ್ಸ್, ಕಳ್ಳ್ ಪ್ರತಿಯೊಂದನ್ನೂ ಸೊಲ್ಪ ಸೊಲ್ಪ ತಕಂಡ್ ಹೋದವೆ. ಕುಂಟಿಗೆಯವ ಹೊತ್ತ ಬಟ್ಲ್‌ನ, ದೂಪೆ ಮ್ಯಾಲೆ ಇಟ್ಟ್, ಶವ ಸಂಸ್ಕಾರದಂದ್ ಇಟ್ಕಂಡಿದ್ದ್ ಬಟ್ಟೆ ತುಂಡುನ, ದೂಪೆ ಮೆಟ್ಲ್ ಹತ್ರ ಹಾಸಿ, ಅದರ ಮ್ಯಾಲೆ ಮೊಣಕಾಲೂರಿ ಕುದ್ದ್‌ಕಣಕು. ಬಟ್ಲ್‌ನ ಬಟ್ಟೆ ಗಂಟ್ ಬಿಚ್ಚಿ, ದೂಪೆ ಮ್ಯಾಲೆ ಬಾಳೆ ಎಲೆ ಹಾಕಿ, ಅದರ ಮ್ಯಾಲೆ ಅರ್ಧದಷ್ಟ್ ಅಕ್ಕಿನ ಹಾಕಕು. ನಂತರ ದೀಪ, ದೂಪಾದಿಗ, ಮನೆಂದ ತಂದ ಎಳನೀರ್ ತಿಂಡಿ, ತಿನಿಸ್‌ಗಳ್ನ ದೂಪೆ

ಮ್ಯಾಲೆ ಇಡೊಕು. ನಂತರ ಅರಿಶಿಣ ಮಿಶ್ರದ ಅಕ್ಕಿನ ಕಂಚಿನ ಬಟ್ಲ್‌ನ ಕುಂಟಿಗೆನ ಹೆಗ್‌ಲ್ ಮ್ಯಾಲೆ ಹೊತ್ತ್‌ಕಂಡ್ ಅವನ ಹಿಂದೆ ಕುಟುಂಬದವೆಲ್ಲವೂ ಎಡಗೈಲಿ ಅಕ್ಕಿನ ಚೆಲ್ಲ್‌ತಾ 'ನಾರಾಯಣ–ನಾರಾಯಣ' ದೇವ್ರು ಹೆಸ್ರ್ ಸ್ತುತಿ ಮಾಡ್ತಾ ದೂಪೆಗೆ ಮೂರು ಸುತ್ತು ಪ್ರದಕ್ಷಿಣೆ ಬಂದವೆ.

ಕೊನೆಗೆ ಕುಂಟಿಗೆನ ಕಂಚಿನ ಬಟ್ಲ್‌ನ ದೂಪೆಯ ಮೆಟ್ಲ್ ಎದ್ರ್ ಕಂಕಣಿ ಮೊಗ್‌ಚಿ, ಅದರ ಎದ್ರು ಕುಂಟಿನ ವಸ್ತ್ರ ಹಾಸಿ ಅದರ ಮ್ಯಾಲೆ ಈರುಮುಂಡ ಹಾಕಿ ಕುದ್ದ್‌ಕಂಡ್, ಎರ್ಡ್ ಕೈಗಳ್ನ ತಲೆ ಹಿಂದೆ ಕಟ್ಟಿ, ಮೂರು ಸಲ 'ಸ್ವರ್ಗಕ್ಕೆ ಹೋಗು'ತ ತಲೆನ ಬಗ್ಸಿ ಕಂಚಿನ ಬಟ್ಲಿಗೆ ಮುಟ್ಸಿಕಂಡ್ ಹೇಳಿ ನಮಸ್ಕರಿಸಕು. ಅವರ ಎಲ್ಲ ಗಂಡ್ ಮಕ್ಕಳೂ ಹಿಂಗೆನೇ ಮಾಡೋಕು.

## ಸ್ವರ್ಗ ಸಲ್ಲಿಸುವ ಕ್ರಮ :

ಸತ್ತವರ ಸೆರಿಯಾದ ಪರಿಚಯ ಇರೊವು ಒಬ್ಬ ಸ್ವರ್ಗ ಸಲ್ಲಿಸಿಕೆ ಈ ಕೆಳ್ಗೆನಂಗೆ ಹೇಳ್‌ವೆ "ಬ್ರಹ್ಮಲಿಪಿಯವಂಗೆ ಅವರ ಅಪ್ಪ ಅಮ್ಮಂಗೆ ಮಂಙ/ಮಗಳಾಗಿ ಹುಟ್ಟಿ, ಬಾಲಲೀಲೆಗಳಂದ ಅವರ ಕಣ್ಮಣಿಯಾಗಿ ಬೆಳ್ದ್, ನಂತರ ಗುರುಕುಲ ಸೇರಿ ತಕ್ಕ ವಿದ್ಯಾಭ್ಯಾಸ ಪಡ್ದ್, ಪ್ರಾಪ್ತ ವಯಸ್ಸಿಗೆ ಬಂದಮ್ಯಾಲೆ ಮೊದುವೆಯಾಗಿ ಮಕ್ಕಳ, ಮೊಮ್ಮಕ್ಕಳ ಪಡ್ದೆ (ಇಲ್ಲಿ ಅವನ/ ಅವಳ ಬಗ್ಗೆ ಬಟ್ಟೆ ಕೊಟ್ಟೆ, ಸರ್ವ ವಿಧಲೂ ದಾನ ಧರ್ಮಗಳ್ನ ಮಾಡಿ ಕೀರ್ತಿ ಶ್ರೇಷ್ಠನಾಗಿ ಬೊದುಕಿದ. ಆದರೆ ಇಂದ್‌ಗೆ ಚಿಗ್‌ರೆಲೆ ಕಾಯಿ ಎಲೆಯಾಕು, ಕಾಯಿಎಲೆ ಹಣ್ಣೆಲೆಯಾಕು, ಹಣ್ಣೆಲೆ ಉದುರೇ ಉದುರೊಕು ಎನ್ನುವ ಸೃಷ್ಠಿ ನಿಯಮದಂಗೆ ಮಕ್ಕಳ್ನ, ನೆಂಟ್ರ್‌ನ, ಅಷ್ಟೈಶ್ವರ್ಯನ ಬುಟ್ಟು ಜೀವಮಾನದ ಅಂತ್ಯಗೊಂಡ್, ನಾಡ್ ಬುಟ್ಟ್ ಕಾಡ್ ಸೇರ್ದರಿ. ಆತ್ಮ ಪರಮಾತ್ಮಲಲಿ ಮಿಲನ ಆಗುಟು.

ನೀನ್ ಪರಮಾತ್ಮನ ವಶಕ್ಕೆ ಹೋದ ತಕ್ಷಣ ಎಲ್ಲವುಕೂ ತಿಳೇಳಿತೇಳಿ, ಆತ್ಮ ದೇವ್ರುಲ್ಲಿ ಐಕ್ಯವಾಗುವ ಸೂಚನೆನಂಗೆ ಜೋಡು ಗುಂಡ್‌ನ ಆಕಾಶಕ್ಕೆ ಹಾರ್ಸಿ, ನೆರೆಕರೆವು ಬಂದ್ ಬಾಯಿಗೆ ತೊಳ್ಸಿ ನೀರ್‌ನ ಕೊಟ್ಟೊ. ಊರೊವು ಸುಡಿಕೆ ಬೇಕಾದ ಸೌದೆ ತಯಾರ್ ಮಾಡ್ದೊ. ನಂತರ ಶಾಸ್ತ್ರನಂಗೆ ದೇಹನ ಮಿೂಸಿ ಮಡಿ ಉಡ್ಸಿ, ಹೊದ್ಸಿ, ಚಟ್ಟದ ಮ್ಯಾಲೆ ಇಟ್ಟ್ ತಲೆ ಕಡೆಂದ ಮನೆವು, ಕಾಲ್ ಕಡೆಂದ ಊರವು ಬೆಂಕಿಕೊಟ್ಟ್ ಹೊತ್ತಿದೊ. ಅಂದ್‌ಂದ ನಿನ್ನ ಪವಿತ್ರ ದೇಹ ಭೂಮಿಗೆ ಗೊಬ್ಬರ ಆಗಿ, ಆಕಾಶಕ್ಕೆ ಹೊಗೆ ಆಗಿ ಪರಿವರ್ತನೆ ಆತ್. ಇಂದ್ ನೀನ್ ಈ ಲೋಕ ಬುಟ್ಟ್ 11 ದಿನ ಆತ್. ಹಂಗೆನೇ ನಾವೆಲ್ಲ ನಿನ್ನ ಆತ್ಮಕ್ಕೆ ಶಾಂತಿ ಬೇಡಿ

ಇಲ್ಲಿ ಬಂದ್ ಸೇರ್‍ಯೊ. ಸಂಸಾರ ನೌಕೆನ ನಡ್‌ಸ್ತಾ ಬಂದಂಗೆ ನಿಮಿಗೆ ವಯ್ಸಾತ್. ಕಾಯಲೆಲಿ ಮಲ್ಗಿದರಿ, ಬ್ರಾಹ್ಮಣರ್ಲಿ ಶಾಸ್ತ್ರ ಕೇಳ್ಸಿದೊ. ವೈದ್ಯರ್ಲಿ ಮೊದ್ದು ಮಾಡ್ಸೊ. ಯಾವುದಕ್ಕೂ ಗುಣ ಆತ್ಲೆ. ಮೃತ್ಯಂದೋ, ಅಪಮೃತ್ಯಂದೋ ನಿನ್ನ ಪ್ರಾಣ ದೇಹ ಬುಟ್ಹೋತ್. ಇನ್ನ್ ಮುಂದೆಂದೂ ಕಷ್ಟಗಳಿಗೆ ಸಿಕ್ಕದೆ ಪರಮಾತ್ಮಲಿ ಒಂದಾಗಿತೇಳಿ ಹಾರ್‍ಯೆಸುವೆ. ಅಲ್ಲದೆ ಮುಂದೆನ ಜನ್ಮಲಿ ಅಗಸನ ಕಲ್ಲಾಗದೆ, ಗಾಣಿಗನ ಎತ್ತಾಗದೆ, ಹಾದಿ ಬದಿ ಮರ ಆಗದೆ, ಬ್ರಾಹ್ಮಣನ ಆಳಾಗದೇ, ಈ ಜನ್ಮನ ಬುಟ್ಟ್ ಬಾಳೆ ದಿಂಡ್‌ನ ಪಾಲಲಿ, ನೂಲ್‌ನ ಕೈತಾಂಗ್‌ಲಿ ಸ್ವರ್ಗಕ್ಕೆ ಹೋಗು, ಶ್ರೀಮನ್ನಾರಾಯಣನ ಬಲಭಾಗಲಿ ಸಂಪಿಗೆ ಮರ ಆಗಿ ಹುಟ್ಟುತ್ತೇಳಿ ನಿನ್ನ ಮನೆವು, ಊರವು, ನೆಂಟರಿಸ್ಟರ್ ಸರ್ವರ್ ಹಾರ್‍ಯೆಸುವೆ. 'ಸ್ವರ್ಗಕ್ಕೆ ಹೋಗು' ತ್ತೇಳಿ 3 ಸಲ ಹೇಳಿ ಅಕ್ಕಿ ಹಾಕಿ ನಂತರ ಒಂದೆರಡ್ ನಿಮಿಷ ದೂಪೆಗೆ ಬೆನ್ನ್ ಹಾಕಿ ತಿರ್‌ಗಿ ನಿತ್ತವೆ. ದೂಪೆಗೆ ಇಟ್ಟ ತಿಂಡಿ, ತಿನಿಸ್‌ಗಳ್ನ ಮಡಿವಾಳ, ತಕಂಡದೆ. ಮತ್ತೆ ಮನೆಗೆ ಹಿಂತಿರುಗುವೆ.

ಎಲ್ಲವೂ ಮನೆಗೆ ವಾಪಾಸ್ಸ್ ಬಂದ ಮೇಲೆ ಮನೆವು, ಕುಟುಂಬದವು ತಣ್ಣೀರ್‌ಲಿ ಮಿೂದ್ ಮಡಿವಾಳಂದ್ ಮಡಿ ಬಟ್ಟೆ ಕೇಳಿ ಉಟ್ಟುಕಣಕು. ಅಲ್ಲಿ ಸೇರ್ದವು ಎಲ್ಲವೂ ಕೈಕಾಲ್ ಮುಖ ತೊಳ್‌ದ್ ತಲೆಗೆ ಸೊಲ್ಪ ನೀರ್ ಚುಮುಕಿಸ್‌ಕಣಕು.

## ಮನೆ ಮಂದಿನ ಶುದ್ಧೀಕರಿಸುವ ಕ್ರಮ :

ಅನಂತರ ಮನೆ ಮುಂದೆ ಅಂಗಳಲಿ ಮನೆಗೆ ಮುಖಮಾಡಿ ಮನೆಯವು, ಮನೆ ಸೂರ್ ಹತ್ರ ಮನೆಗೆ ಬೆನ್ನ್‌ಹಾಕಿ ಊರೊವು ನೆಂಟ್ರ್ ಸಾಲಾಗಿ ನಿತ್‌ಕಣಕು. ಮಡಿವಾಳ ಸುರೂಗೆ ಊರವುಕೆ ಅಂವ ತಂದ ಖಾರ ನೀರ್‌ನ ಮಾವುನ ಸೊಪ್ಪುಲಿ ಸುರುಗೆ ಕಾಲ್‌ಗೆ, ಮತ್ತೆ ನೊಡುಗೆ, ಮತ್ತೆ ಎದೆ ಮಟ್ಟಕ್ಕೆ ಎಲ್ಲವುಕೆ ಮೂರುಸಲ ಚುಮುಕಿಸಿದೆ. ಅದೇ ಪ್ರಕಾರ ಅಕ್ಕಿನ ಮೂರುಸಲ ಬಿಸಾಕಿದೆ. ಊರ್‌ನವು ಖಾರನೀರ್, ಅಕ್ಕಿ ಎರ್ಚಿದಂಗೆ ಮನೆವುಕೂ ಮಡಿವಾಳ ಎರ್ಚಿದೆ. ಊರಿನವೊಬ್ಬ ಪುಣ್ಯ ನೀರ್‌ನ ತಲೆ ಮೇಲೆ ಚುಮುಕಿಸಿದೆ. ಮತ್ತೊಬ್ಬ ಊರ್‌ನನ, ಮನೆವುಕೂ ಕೊಟ್ಟವೆ. ಅಷ್ಟೊತ್ತಿಗೆ ಊರಿನ ಎರಡ್ಮೂರು ಜನ ಮನೆ ಹೂಗಳ್ನ ಊರವುಕೂ, ಮನೆವುಕೂ ಕೊಟ್ಟವೆ. ಅಷ್ಟೊತ್ತಿಗೆ ಊರಿನ ಎರಡ್ಮೂರು ಜನ ಮನೆ ಒಳಗೆ ಹೋಗಿ ಗುಡ್ಸಿ, ಸಗಣಿ ನೀರ್ ಹಾಕಿ ದೇವರ ದೀಪ ಹಚ್ಚಿವೆ. ಮಡಿವಾಳ ಮನೆಮೆಟ್ಲ್‌ಗೆ ಮಡಿ ಬಟ್ಟೆ ಹಾಸಿದೆ. ಅದರ ಮೇಲೆಂದ ಮನೆಗೆ ಹೋಗಿ ದೇವ್ರು ದೀಪಕ್ಕೆ ಅಕ್ಕಿಹಾಕಿ ಕೈಮುಗ್ದವೆ.

## ಶುದ್ಧದ ಊಟ :

ಶುದ್ಧ ಕಳೆವವರೆಗೆ ಸೂತಕದ ಮನೆಲಿ ಅಡುಗೆ ಮಾಡ್ದುಲೆ. ಹಂಗಾಗಿ

ಊರವು, ನೆಂಟ್ರ್ ಸೇರಿ ಹೊರ್ಗಡೆ ಅಡುಗೆ ಮಾಡ್ದು, ಇಲ್ಲಿ ಸಿಹಿ ಊಟ ಇದ್ದದೆ. ಊಟಕ್ಕೆ ಮನೆಗೆ ಮುಖಮಾಡಿ ಎದುರ್ಗಡೆ, ಊರವು ನೆಂಟ್ರ್ ಸೂರಡಿ ಮನೆಗೆ ಬೆನ್ನ್‌ಹಾಕಿ ಕುದ್ದವೆ. ಎಲ್ಲವುಕೆ ಎಲೆಕೊಟ್ಟ್ ಬಡ್ಸಿದ ಮ್ಯಾಲೆ, ಕುಂಟಿಂಗೆಂವ ಒಂದ್ ಚೊಂಬು ನೀರ್ ಹಿಡ್ದ್ ಎಲ್ಲವುಕೆ ಕೇಳುವಂಎ 'ಮೃತರ ಹೆಸ್ರ್‌ಲಿ ನಾವು ಅಂಬುಲಿಗಂಜಿ, ತುಂಬೆ ಸೊಪ್ಪುನ ಸಾರ್ ಇಕ್ಕಿಲೋ ಎಲ್ಲವು ಖುಷಿಂದ ಊಟ ಮಡಿ, ಅತ್ಮಕ್ಕೆ ಶಾಂತಿ ಕೋರಕು'ತ ಹೇಳ್ದಿ. ಎಲ್ಲವೂ ಊಟಮಾಡಿ ಏಳಿಕೆ ಮೊದ್ಲು, ಕೊಟ್ಟ ಹೆಣ್ಣ್‌ಮಕ್ಕ ಪ್ರತಿಯೊಬ್ಬಂಗೆ ವೀಳ್ಯದೆಲೆ, ಅಡಿಕೆ, ಮತ್ತೊಬ್ಬುಳು ಹಲಸಿನ ಮರದ ಎಲೆ ಜೊನ್ನೆ ಮಾಡಿ ಎಲ್ಲರ ತಲೆಗೆ ಎಣ್ಣೆ ಕೊಟ್ಟವೆ. ಮುಂದೆನ ಜನ್ಮಲಿ ಸತ್ತವಂಗೆ ಒಳ್ಳದಾಗಲಿ ತೇಲಿ ಹೊಟ್ಟೆಗೆ ಊಟ, ತಲೆಗೆ ಎಣ್ಣೆ, ಬಾಯಿಗೆ ತಾಂಬೂಲ ಕೊಡ್ವ ಪದ್ಧತಿ ಹಿಂದೆಂದ ನಡ್ದ್ ಬಂದುಟು.

## ತಿಥಿ ಜಂಬರ :

ಶವ ಸಂಸ್ಕಾರ ನಡ್ದ 11 ನೇ ದಿನದೊಳಗೆ ಶುದ್ಧ ನಡ್ಡೇ ನಡೆಯೊಕು. ಕೆಲುಜನ 10ನೇ ದಿನ ರಾತ್ರಿ ನೀರ್ ನೆರಳಿಗೆ ಇಟ್ಟ್ 11 ನೇ ದಿನ ಶುದ್ಧ ತಿಥಿ ಒಟ್ಟಿಗೆ ಮಾಡಿವೆ. ಇಲ್ಲದಿದ್ದರೆ 16ನೇ ದಿನ ತಿಥಿ ಮಾಡಿವೆ. 16ನೇ ದಿನದವರೆಗೆ ಮನೆವುಕೆ ಸೂತಕನೂ ಇದ್ದದೆ. ಸತ್ತ ವ್ಯಕ್ತಿ ಬೊದ್‌ಕಿರ್‌ಕಾಕನ ಹಲವು ಜನರೊಟ್ಟಿಗೆ ಒಡನಾಟಲಿ ಇದ್ದರೆ, ಅಂವ ಸಂಪಾದನೆ ಮಾಡ್ದ ಗಳಿಕೆಲಿ ಇಲ್ಲವೇ ಅವನ ಹೆಸ್ರ್‌ಲಿ ಅವನ ಸಂಸಾರದವು ಸೇರಿ ಮಾಡ್ವ ಅನ್ನದಾನನೇ ತಿಥಿ ಕರ್ಮಾಂತರ.

ತಿಥಿ ಜಂಬರ, ಬಾಳ ಗೌಜಿಲಿ ನಡ್ದದೆ. ಅಂದ್ ಬೆಳಿಗ್ಗೆ ಎಡೆಹಾಕುವ ಕ್ರಮವುಟ್ಟು, ಮಾಂಸದಡುಗೆ ಸೇರ್ದಂಗೆ ಎಲ್ಲರೀತಿಯ ಅಡುಗೆನ ಸಿದ್ಧಪಡ್ಸಿ, ಸತ್ತವನ ಕೋಂಬರೆಲಿ, ಅವನ ಫೋಟೋನ ಮೇಜ ಇಲ್ಲದೆ ಕಟ್ಲ್ ಮ್ಯಾಲೆ ಇಟ್ಟ್ ಅದ್ಕೆ ಹೂಮಾಲೆ ಹಾಕಿ ಅದರ ಸುತ್ತ ಅವು ನಿತ್ಯಜೀವನಲಿ ಉಪಯೋಗಸ್ತಿದ್ದ ಬಟ್ಟೆ, ವಾಚಿ, ಕನ್ನಡಕ, ಊರುಗೋಲು ಮತ್ತಿತರ ವಸ್ತ್‌ಗಳ್ನ ಇಟ್ಟ್ ದೀಪ ಹೊತ್ಸಿಟ್ಟ್, ಮಾಡ್ದ ಅಡುಗೆನ ತಿಂಡಿ, ತಿನಿಸ್‌ಗಳ್ನ ಎಡೆಗೆ ಇಕ್ಕೊಕು. ಮುಖ್ಯಾಗಿ ನೀರ್‌ದೋಸೆ, ರೊಟ್ಟಿ, ಕೋಳಿಸಾರ್ ಇಡೋಕು. ಕಳ್ಳ್ ಕುಡಿಯವು ಆದರೆ ಅದನ್ನೂ ಇಡೋಕು. ಇದ್ಕೆ ಮುಂದೆ ಗಣಪತಿಗಿಡುವ ಕ್ರಮನ ಪಾಲಿಸಕು.

ಮತ್ತೆ ಎಲ್ಲವೂ ಎಡೆಗೆ ಅಕ್ಕಿಹಾಕಿ ಶರಣು ಮಾಡಿವೆ. ತಿಥಿಗೆ ಬಂದ ನೆಂಟ್ರ್ ಕೂಡ ತಂದ ತಿಂಡಿನ ಎಡೆಗೆ ಇಟ್ಟ್ ಅಕ್ಕಿ ಹಾಕಿ ಕೈಮುಗ್ದ್ ಹಿರಿಯರ ಕಾಲ್‌ಮುಟ್ಟಿ ನಮಸ್ಕರಿಸುವೆ. ಬಂದುವಕೆಲ್ಲವುಕೂ ಮಾಂಸದೂಟದ ಏರ್ಪಾಡ್ ನಡ್ದದೆ. ಬೆಳಗ್ಗೆಂದ

ಸಾಯಂಕಾಲದವರೆಗೂ ಜನ ತಿಥಿಗೆ ಬಂದ್ ಊಟ ಮಾಡಿ ಹೋದವೆ. ಸಾಯಂಕಾಲ ಸೂರ್ಯ ಕಂತಿದ ಮ್ಯಾಲೆ ಎಡೆ ಎಳೆವ ಪದ್ಧತಿ. ಎಡೆಗೆ ನೀರ್ ಚುಮುಕಿಸಿ, ಅದರ್ನ ಸೊಲ್ಪ ಸರ್ಸಿ, ಅಲ್ಲಿ ಇಟ್ಟ ಎಲ್ಲಾ ಪದಾರ್ಥಗಳ್ನ ಬಂದವುಕೆ ಹಂಚಿ, ಊಟ ಕೊಟ್ಟ ಮ್ಯಾಲೆ ತಿಥಿ ಜಂಬರ ಮುಕ್ತಾಯ ಆದೆ.

## ಹದಿನಾರರ ಕೊಲೆಗೆ ಸೇರ್ಸುದು :

ಇದರ್ನ ಹದಿನಾರನೇ ದಿನಕ್ಕೆ ಮಾಡಕ್, ಇಲ್ಲರೆ ಬ್ಯಾರೆ ದಿನನೂ ಮಾಡಕ್. ಅಂದ್ ಅಕ್ಕಪಕ್ಕದ ನಾಲ್ಕಾರ್ ಜನ್ರನ್ನ ಮನೆಗೆ ಕರ್ದ್, ಒಂದ್ ಹುಂಜ ಕೋಳಿನ ಕೊಂದ್ ಸಾರ್ ಮಾಡಿ, ನೀರ್‌ದೋಸೆ, ರೊಟ್ಟಿ ಮಾಡಿ, ಕಾರೋಣ ಇಡುವ ಕೊಂಬರೆನ ಸೊಚ್ಚಗೊಳ್ಸಿ ಹದಿನೈದ್ ಸಣ್ಣ ಸಣ್ಣ ಬಾಳೆಎಲೆಗಳ್ನ ಸಾಲಾಗಿ ಇಡೋಕು. ಇನ್ನೊಂದು ಬಾಳೆ ಎಲೆನ ಸಾಲ್‌ಗಿಂತ ಸೊಲ್ಪ ದೂರಲಿ ಹಿಂದೆ ಇಡೋಕು. ಒಂದ್ ಬಟ್ಲ್‌ಲಿ ದೋಸೆ, ರೊಟ್ಟಿನ ಸಣ್ಣ ಮುರ್ದ್‌ಹಾಕಿ, ಕೋಳಿಸಾರ್ ಹಾಕಿ ಮಿಶ್ರ ಮಾಡೋಕು. ಮತ್ತೆ ಕುಂಟಿಗೆ ನಿತ್ತವ ಎಲ್ಲಾ ಬಾಳೆ ಎಲೆಗೆ ಸೊಲ್ಪ ಸೊಲ್ಪ ಇಕ್ಕಕು. ಎಲ್ಲ ಎಲೆಗೆ ದೀಪದ ಬೊತ್ತಿ ಹೊತ್ಸಿ, ಗಂಧದ ದೂಪ ಹೊಗೆಕೊಟ್ಟ್, ಎಲ್ಲರ ಕೈಗೆ ಅಕ್ಕಿಕೊಟ್ಟ್ ಸತ್ತವನ ಗುಣಗಾನ ಮಾಡಿ, ಹಿಂದೆ ಸತ್ತವರೊಟ್ಟಿಗೆ, ನೀನ್ ಸೇರಿಕಂಡ್, ನಮ್ಮೆಲ್ಲರ್ನ ಕಾಪಾಡ್‌ತ್ ಕೇಳಿಕಂಡ್, ಹಿಂದೆ ಇಟ್ಟ ಎಲೆನ 15 ಎಲೆಗಳೊಟ್ಟಿಗೆ ಎಳ್ದ್ ಸೇರ್ಸೊಕು. ಮತ್ತೆ ಸೇರ್ದ ಎಲ್ಲವೂ ಊಟಮಾಡಿ ಅವರವರ ಮನೆ ಹೋದವೆ.

## ಪಿಂಡಹಾಕುದು :

ಕುಂಟಿಗೆ ನಿತ್ತಂವ ಶುದ್ಧದಂದ್, ಗಡ್ಡ್, ಮೀಸೆ, ತಲೆ ಬೋಳ್ಸಿದ ಮ್ಯಾಲೆ ಪಿಂಡ ಹಾಕೋವರೆಗೆ ಮತ್ತೆ ಬೋಳ್ಸಿಕ್ಕಿಲ್ಲೆ. ಸತ್ತವಂಗೆ ಮೋಕ್ಷ ಸಿಕ್ಕಲಿತೇಳಿ ಪಿಂಡ ಹಾಕುವ ಕ್ರಮವುಟ್ಟು. ಸಾಮಾನ್ಯವಾಗಿ ಸತ್ತ 48ನೇ ದಿನ ಕಾವೇರಿಯಂತ ಪುಣ್ಯಸ್ಥಳಕ್ಕೆ ಹೋಗಿ ಪಿಂಡ ಹಾಕ್‌ವೆ. ಕಾವೇರಿ ಸಂಗಮಲಿ ಸುರುಗೆ ಹೋಗಿ ಮುಳ್ಗಿ ಮಿಂದ್ ಕ್ಷೌರಿಕರವು ಬಂದ್ ತಲೆ, ಗಡ್ಡ, ಮಿಸೆ ಬೋಳ್ಸಿ, ಕಾಣಿಕೆ ಕೊಟ್ಟ್, ಮತ್ತೆ ಪುನಃ ಮಿಂದ್, ಪಿಂಡ ಸಾಮಾನ್‌ಗಳ್ನ ಮಾರವವರ ಹತ್ರ ತಕಂಡ್, ಹೊಳೆ ಆಚೆ ಬದಿಲಿ ಪುರೋಹಿನ ಹತ್ರ ಹೋಗಿ, ಅವು ಹೇಳ್ದಂಗೆ ಶಾಸ್ತ್ರಗಳ್ನ, ಮಂತ್ರೋಚ್ಚಾರಣೆಗಳ್ನ ಮಾಡಿ, ಕೈ ಬೆರಳಿಗೆ ದರ್ಬೆ ಕಟ್ಟಿ, ಪಿಂಡದ ಎಲೆಗೆ ನೀರ್ ಬುಟ್ಟ್, ಸಂಗಮಲಿ ಪಿಂಡ ಎಲೆ ಬುಟ್ಟ್ ಮುಳುಗಿ, ಮಿಂದ್, ಮಡಿಬಟ್ಟೆ ಉಟ್ಟ್, ಪುರೋಹಿತಂಗೆ ದಕ್ಷಿಣೆಕೊಟ್ಟ್, ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ಬಂದರೆ ಪಿಂಡಹಾಕ್‌ವ ಕ್ರಮ ಮುಗ್ದದೆ.

## ದೀಪಾವಳಿಲಿ ಅವುಲು ಹಾಕುದು :

ಸತ್ತವಂಗೆ ಅವನ ಮನೆವು ಅದೇ ವರ್ಷದ ದೀಪಾವಳಿಲಿ ಅವುಲು ಹಾಕುದು ಪದ್ಧತಿ. ದೀಪಾವಳಿ ಅಮವಾಸೆಲಿ ಹೆಣ್ಣ್ ಜನಿಕೆ, ಅದರ ಮಾರನೇ ದಿನ ಗಂಡ್ ಜನಿಕೆ ಅವುಲು ಹಾಕುವೆ. ಅಂದ್ ಹೊತ್ತಾರೆ ನಾಲ್ಕ್ ಗಂಟೆ ಹೊತ್ತಿಗೆ ಅವಲಕ್ಕಿ, ಬೆಲ್ಲ, ಬಾಳೆಹಣ್ಣ್, ತುಪ್ಪ, ತೆಂಗಿನಕಾಯಿತುರಿ ಮೊದಲಾದರ್ನ ಬಾಳೆ ಎಲೆ ಮೇಲೆ ಎಡೆ ಹಾಕ್‌ವೆ. ಬಂದವು ಸನ ಎಡೆಗೆ ಅವಲಕ್ಕಿ ಹಾಕಿ ಕೈಮುಗ್ದವೆ. ಎಲ್ಲವುಕೂ ಊಟದ ವ್ಯವಸ್ಥೆ ಮಾಡಿದ್ದವೆ.

* * * * * *

# ಕೊಡಗು ಗೌಡ ಸಮಾಜ, ಮೈಸೂರು.

## ಆಡಳಿತ ಮಂಡಳಿ

| | | | |
|---|---|---|---|
| 1. | ಚೆಟ್ಟಿಮಾಡ ಜನಾರ್ಧನ | – | ಅಧ್ಯಕ್ಷ |
| 2. | ಕೂಡಕಂಡಿ ಭರತ್ | – | ಉಪಾಧ್ಯಕ್ಷ |
| 3. | ಕುಂಟಿಕಾನ ಗಣಪತಿ | – | ಕಾರ್ಯದರ್ಶಿ |
| 4. | ನೈಯಣಿ ರಮೇಶ್ | – | ಸಹಕಾರ್ಯದರ್ಶಿ |
| 5. | ನಡುಮನೆ ರುಕ್ಮಿಣಿ ಆನಂದ | – | ನಿರ್ದೇಶಕ |
| 6. | ಬೈನೆರವನ ಇಂದ್ರಕುಮಾರ್ | – | ನಿರ್ದೇಶಕ |
| 7. | ಕಾಳೇರಮ್ಮನ ನಾಣಯ್ಯ | – | ನಿರ್ದೇಶಕ |
| 8. | ಚೆರಿಯಮನೆ ಉಮೇಶ್ | – | ನಿರ್ದೇಶಕ |
| 9. | ಎಡಿಕೇರಿ ಮಂದಣ್ಣ | – | ನಿರ್ದೇಶಕ |
| 10. | ಕೇಚಪ್ಪನ ಅಯ್ಯಪ್ಪ | – | ನಿರ್ದೇಶಕ |
| 11. | ಕೊಂಬಾರನ ಸುಬ್ಬಯ್ಯ | – | ನಿರ್ದೇಶಕ |
| 12. | ಚೆರಿಯಮನೆ ನರೇಶ್ | – | ನಿರ್ದೇಶಕ |
| 13. | ನಡುವಟ್ಟಿರ ಗೀತಾ | – | ನಿರ್ದೇಶಕ |
| 14. | ದಾಯನ ನಾಮಧೇಯ | – | ವ್ಯವಸ್ಥಾಪಕ |









Ptd @ Sri Krishna Printers. Mdk. Mob : 94481 35592